# ನಾನು ಗೌಪ್ಯ ಮತದಾನದ ನಿಯಮ ಉಲ್ಲಂಘಿಸಿಲ್ಲ, ಗೌಪ್ಯತೆ ಕಾಪಾಡಿದ್ದೇನೆ

• ಉದಯವಾಹಿನಿ, ಕೆ.ಆರ್.ಪುರ

ನಾನು ಗೌಪ್ಯ ಮತದಾನದ ನಿಯಮ ಉಲ್ಲಂಘಿಸಿಲ್ಲ, ಗೌಪ್ಯತೆ ಕಾಪಾಡಿದ್ದೇನೆ ಎಂದು ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ತಿಳಿಸಿದರು.

ವಿಧಾನಸೌಧದಲ್ಲಿ ಮಾತನಾಡಿದ ಅವರು, ಗೌಪ್ಯ ಮತದಾನ ಉಲ್ಲಂಘಿಸಿರುವ ವಿರುದ್ಧ ಕಾಂಗ್ರೆಸ್ ದೂರು ಹಿನ್ನೆಲೆ ಪ್ರತಿಕ್ರಿಯಿಸುತ್ತಾ, ನಾನು ನಿಯಮ ಉಲ್ಲಂಘಿಸಿಲ್ಲ. ಗೌಪ್ಯ ಮತದಾನದ ನಿಯಮ ಉಲ್ಲಂಘಿಸಿಲ್ಲ. ಮತದಾನದ ಕೊಠಡಿ ಒಳಗೆ ನಾನು ಯಾರಿಗೆ ಮತ ಹಾಕಿದ್ದೇನೆ ಅನ್ನೋದು ಗೌಪ್ಯವಾಗಿದೆ. ಮತ ಹಾಕಿ ಅಲ್ಲೇ ತೋರಿಸಿದರೆ ಆಗ ಇನ್ ವ್ಯಾಲಿಡ್ ಆಗುತ್ತಿತ್ತು ಎಂದು ಸಮಜಾಯಿಶಿ ನೀಡಿದರು.

ನಾನು ಗೌಪ್ಯವಾಗಿಯೇ ಮತ ಹಾಕಿದ್ದೇನೆ. ಯಾರಿಗೂ ತೋರಿಸಿಲ್ಲ. ಹೀಗಾಗಿ ನಾನು ಹಾಕಿರೋದು ವ್ಯಾಲಿಡ್ ವೋಟೇ. ನಾನು ನಿತಿನ್ ನಬಿನ್ ಅವರಿಗೆ ಪತ್ರ ಬರೆದಿದ್ದು ಹೌದು. ನನಗೆ ಲಿಂಗರಾಜ ಪಾಟೀಲ್ ಹೆಸರು ಆಯ್ಕೆ ಮಾತ್ರ, ಅದನ್ನೇ ಪತ್ರದಲ್ಲಿ ಹೇಳಿದ್ದೇನೆ. ಆದರೆ ಮತದಾನದ ಕೊಠಡಿಯಲ್ಲಿ ಯಾರಿಗೆ ಓಟು ಹಾಕಿದ್ದೇನೋ ಅದನ್ನು ನಾನು ತೋರಿಸಿಲ್ಲ, ಗೌಪ್ಯತೆ ಕಾಪಾಡಿದ್ದೇನೆ ಎಂದು ಸ್ಪಷ್ಟಪಡಿಸಿದರು. ನಾನು ಬಿಜೆಪಿ ಚಿಹ್ನೆಯಡಿ ಗೆದ್ದು ಶಾಸಕನಾಗಿದ್ದೆ. ನಾನು ಆತ್ಮಸಾಕ್ಷಿಯಾಗಿ ಯಾರಿಗೆ ಮತ ಹಾಕಬೇಕೋ ಹಾಕಿದ್ದೇನೆ. ಪಕ್ಷ ಸೂಚನೆ ಕೊಟ್ಟ ಅಭ್ಯರ್ಥಿಗೆ ಮತಹಾಕಿದ್ದೇನೆ. ಅಶ್ವತ್ ನಾರಾಯಣ್ ಕಾಲ್ ಮಾಡಿದ್ರು. 49 ಶಾಸಕರು ಮನವಿ ಮಾಡಿದ್ರು. ಬಿಜೆಪಿ ಪಕ್ಷ ಸೂಚನೆ ಕೊಟ್ಟದ್ದಕ್ಕೆ ಮತ ಹಾಕಿ ಎಂದು ಮನವಿ ಮಾಡಿದ್ರು. ಪಕ್ಷದ ಚಿಹ್ನೆಯಡಿಯಲ್ಲಿ ಗೆದ್ದು ಬಂದಿದ್ದೇನೆ ಎಂದರು. **ಚುನಾವಣಾಧಿಕಾರಿಗೆ ವಿ.ಎಸ್.ಉಗ್ರಪ್ಪ ದೂರು:** ಗೌಪ್ಯತೆ ನಿಯಮ ಉಲ್ಲಂಘನೆ ಮಾಡಲಾಗಿದೆ ಎಂದು ಆರೋಪಿಸಿ ಚುನಾವಣಾಧಿಕಾರಿಗೆ ದೂರು ನೀಡಿದ ಬಳಿಕ ಮಾತನಾಡಿದ ಕಾಂಗ್ರೆಸ್ ಹಿರಿಯ ನಾಯಕ ವಿ.ಎಸ್. ಉಗ್ರಪ್ಪ, ಲಿಂಗರಾಜ್ ಪಾಟೀಲ್‌ಗೆ ಮತದಾನ ಮಾಡುತ್ತೇನೆಂದು ಯತ್ನಾಳ್ ಅಧಿಕೃತವಾಗಿ ಪತ್ರ ಬರೆದು ಹೇಳಿದ್ದಾರೆ. ಬಿಜೆಪಿಯವರು ಕಳ್ಳರು ಎಂದು ಎಲ್ಲರ ಮುಂದೆ ಯತ್ನಾಳ್ ಹೇಳಿದ್ದಾರೆ. ಮತದಾನದ ಮಾಹಿತಿ ಬಹಿರಂಗಪಡಿಸಿದರೆ ಅಕ್ರಮ ಆಗಲಿದೆ ಎಂದು ತಿಳಿಸಿದರು. ಚುನಾವಣಾಧಿಕಾರಿ ಬಿಜೆಪಿ ಉಚ್ಚಾಟಿತ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಮತಗಳನ್ನು ಅಸಿಂಧುಗೊಳಿಸಬೇಕೆಂದು ದೂರು ನೀಡಿದ್ದೇವೆ. ಮತದಾನ ರಹಸ್ಯವಾಗಿದ್ದು ಅದನ್ನು ಬಹಿರಂಗಪಡಿಸಿದ್ದರೆ ಕೋರ್ಟ್‌ಗೆ ಅರ್ಜಿ ಸಲ್ಲಿಸಿ ಮುಂದಿನ ಕ್ರಮ ತೆಗೆದುಕೊಳ್ಳಲಿ ಎಂದು ತಿಳಿಸಿದರು.




## ಸಂತೋಷ್ ಲಾಡ್‌ಗೆ ಸಚಿವ ಸ್ಥಾನ ಸಾಹಿತಿ-ಕಲಾವಿದರ ಮನವಿ

• ಉದಯವಾಹಿನಿ,ಬೆಂಗಳೂರು

ಸಿದ್ದರಾಮಯ್ಯ ಅವರ ಸಚಿವ ಸಂಪುಟದಲ್ಲಿ ಕಾರ್ಮಿಕ ಸಚಿವರಾಗಿ ಒಳ್ಳೆಯ ಕೆಲಸ ಮಾಡಿದ್ದ ಸಂತೋಷ ಲಾಡ್ ಅವರನ್ನು ಮುಂದಿನ ಸಚಿವ ಸಂಪುಟದ ವಿಸ್ತರಣೆಯಲ್ಲಿ ಸಚಿವರನ್ನಾಗಿ ತೆಗೆದುಕೊಳ್ಳಬೇಕೆಂದು ಸಾಹಿತಿ ಕಲಾವಿದರ ತಂಡ ಕಾಂಗ್ರೆ ಮುಖಂಡರಲ್ಲಿ ಮನವಿ ಮಾಡಿದೆ. ಧಾರವಾಡ ಲೋಕಸಭಾ ಕ್ಷೇತ್ರದ ಮಾಜಿ ಸಂಸದ ಪ್ರೊ. ಐ.ಜಿ. ಸನದಿ ಅವರ ನೇತೃತ್ವದಲ್ಲಿ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಭೇಟಿಮಾಡಿ ಸಂತೋಷ್ ಲಾಡ್ ಅವರನ್ನು ಸಚಿವರನ್ನಾಗಿ ನೇಮಿಸಬೇಕು ಎಂದು ಮನವಿ ಮಾಡಿತು. ಇದಕ್ಕೆ ಸಕಾರಾತ್ಮಕವಾಗಿ ಸ್ಪಂದಿಸಿದ ಮುಖ್ಯಮಂತ್ರಿ, ತಮ್ಮ ಮನವಿಯನ್ನು ದೆಹಲಿಯ ಹೈಕಮಾಂಡಿಗೆ ಕಳುಹಿಸಲಾಗುವುದು ಎಂದು ತಿಳಿಸದರು.

ನಂತರ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ, ರಾಜ್ಯ ಕಾಂಗ್ರೇಸ್ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್ ಅವರನ್ನು ಸಾಹಿತಿಗಳ ತಂಡ ಭೇಟಿ ಮಾಡಿ ಲಾಡ್ ಅವರಿಗೆ ಸಚಿವ ಸ್ಥಾನ ಕಲ್ಪಿಸಲು ಮನವಿ ಮಾಡಿತು.

## ಹರಿಪ್ರಸಾದ್ ಪದಗ್ರಹಣ ಹಿನ್ನೆಲೆ: ಪೂರ್ವಭಾವಿ ಸಭೆ




• ಉದಯವಾಹಿನಿ, ಬೆಂಗಳೂರು

ಬೆಂಗಳೂರಿನ ಅರಮನೆ ಮೈದಾನದಲ್ಲಿ ಜೂನ್ 21 ರಂದು ನಡೆಯಲಿರುವ ಕರ್ನಾಟಕ ಪ್ರದೇಶ ಕಾಂಗ್ರೇಸ್ ಸಮಿತಿಯ ಕೆಪಿಸಿಸಿ ನೂತನ ಅಧ್ಯಕ್ಷರಾದ ಬಿ.ಕೆ. ಹರಿಪ್ರಸಾದ್ ರವರ ಪದಗ್ರಹಣ ಕಾರ್ಯಕ್ರಮದ ಪೂರ್ವಭಾವಿ ಸಭೆಯು ನಗರದ ಮೌರ್ಯ ಹೋಟೆಲ್‌ನಲ್ಲಿ ನಡೆಯಿತು.

ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಹಾಗೂ ಎಂಇಐ ಅಧ್ಯಕ್ಷರಾದ ಎಸ್. ಮನೋಹರ್ ಅವರ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಬೆಂಗಳೂರು ನಗರದ ಹಿರಿಯ ಹಾಗೂ ಮಾಜಿ ಯುವ ಕಾಂಗ್ರೇಸ್ ನ ಪದಾಧಿಕಾರಿಗಳು, ಬೆಂಗಳೂರು ನಗರ ಕೇಂದ್ರ, ಪ್ರಚಾರ ಸಮಿತಿಯ ಪದಾಧಿಕಾರಿಗಳು ಹಾಗೂ ಯುವ ಕಾಂಗ್ರೇಸ್ ಪದಾಧಿಕಾರಿಗಳು, ಮುಖಂಡರು ಹಾಗೂ ಕಾರ್ಯಕರ್ತರು ಭಾಗವಹಿಸಿ ಕಾರ್ಯಕರ್ತರ ಧ್ವನಿಯಾಗಿ ಸಾಮಾನ್ಯ ಕಾರ್ಯಕರ್ತರಾಗಿ ರಾಷ್ಟ್ರಮಟ್ಟದಲ್ಲಿ ಪಕ್ಷವನ್ನು ಸಂಘಟಿಸಿ ಕೋಮುವಾದಿಗಳ ವಿರುದ್ಧ ನಿರಂತರ ಹೋರಾಟ ನಡೆಸುತ್ತಿರುವ ಕಾರ್ಯಕರ್ತರ ಧ್ವನಿ ಬಿ.ಕೆ ಹರಿಪ್ರಸಾದ್‌ರವರು ಕೆಪಿಸಿಸಿಯ ನೂತನ ಅಧ್ಯಕ್ಷರಾಗಿ ಪದಗ್ರಹಣ ಕಾರ್ಯಕ್ರಮವನ್ನು ಅತ್ಯಂತ ಶಿಸ್ತುಬದ್ಧವಾಗಿ ಹಾಗೂ ಸಂಘಟಿತ ರೀತಿಯಲ್ಲಿ ಯಶಸ್ವಿಗೊಳಿಸಲು ತೀರ್ಮಾನಿಸಲಾಯಿತು.

ಸಭೆಯಲ್ಲಿ ಮಾತನಾಡಿದ ಮುಖಂಡರು, ಕಾಂಗ್ರೇಸ್ ಪಕ್ಷದ ತತ್ವ-ಸಿದ್ಧಾಂತಗಳಿಗೆ ನಿಷ್ಠೆಯಿಂದ ಹಾಗೂ ಪ್ರಾಮಾಣಿಕವಾಗಿ ದುಡಿಯುವ ಕಾರ್ಯಕರ್ತರಿಗೆ ಪಕ್ಷವು ಉನ್ನತ ಸ್ಥಾನಮಾನಗಳನ್ನು ನೀಡುತ್ತಾ ಬಂದಿದೆ ಎಂದು ಅಭಿಪ್ರಾಯಪಟ್ಟರು. ನೂತನ ಕೆಪಿಸಿಸಿ ಅಧ್ಯಕ್ಷರಾದ ಬಿ.ಕೆ. ಹರಿಪ್ರಸಾದ್ ರವರ ಸುದೀರ್ಘ ರಾಜಕೀಯ ಪಯಣ, ಪಕ್ಷ ಸಂಘಟನೆಗೆ ನೀಡಿರುವ ಕೊಡುಗೆ ಹಾಗೂ ನಿರಂತರ ಪರಿಶ್ರಮದ ಫಲವಾಗಿ ಈ ಮಹತ್ವದ ಜವಾಬ್ದಾರಿ ದೊರೆತಿದೆ ಎಂದು ಶ್ಲಾಘಿಸಲಾಯಿತು.

## 2 ಸಾವಿರ ಕೋಟಿ ರೂ. ವೆಚ್ಚದಲ್ಲಿ ಬೆಂಗಳೂರಿನ ರಸ್ತೆಗಳ ಮರುಡಾಂಬರೀಕರಣಕ್ಕೆ ಚಾಲನೆ: ಕೃಷ್ಣ ಬೈರೇಗೌಡ




• ಉದಯವಾಹಿನಿ, ಬೆಂಗಳೂರು

ಎರಡು ಸಾವಿರ ಕೋಟಿ ರೂ. ವೆಚ್ಚದಲ್ಲಿ ಬೆಂಗಳೂರಿನ ಐದು ಮಹಾನಗರ ಪಾಲಿಕೆ ವ್ಯಾಪ್ತಿಯ ರಸ್ತೆಗಳ ಮರು ಡಾಂಬರೀಕರಣಕ್ಕೆ ಚಾಲನೆ ನೀಡಲಾಗುವುದು ಎಂದು ಬೆಂಗಳೂರು ಅಭಿವೃದ್ಧಿ ಸಚಿವ ಕೃಷ್ಣ ಬೈರೇಗೌಡ ಅವರು ಗುರುವಾರ ಹೇಳಿದ್ದಾರೆ. ಕೇಂದ್ರ ಕಚೇರಿಯಲ್ಲಿ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವರು, ಬೆಂಗಳೂರಿನ ಐದು ವಲಯ ಆಯುಕ್ತರು ಮತ್ತು ಕಸ ನಿರ್ವಹಣೆ ಇಲಾಖೆಯ ಅಧಿಕಾರಿಗಳ ಜೊತೆಗೆ ಸಭೆ ಮಾಡಿದ್ದೇನೆ. ಬೆಂಗಳೂರಿನಲ್ಲಿ ರಸ್ತೆ ಸುಧಾರಣೆ ಮಾಡಬೇಕು ಅನ್ನೋ ಉದ್ದೇಶವಿದೆ ಎಂದರು. ಐದು ಮಹಾನಗರ ಪಾಲಿಕೆಯ ಆಂತರಿಕ ರಸ್ತೆಗಳನ್ನು ಸರಿ ಮಾಡಬೇಕು. ಎಲ್ಲೆಲ್ಲಿ ಆಂತರಿಕ ರಸ್ತೆಗಳು ಹಾಳಾಗಿದೆಯೋ ಅವುಗಳನ್ನ ಸರಿ ಮಾಡಲು ವಿಶೇಷವಾಗಿ 2000 ಕೋಟಿ ರೂ. ವೆಚ್ಚದಲ್ಲಿ ಮರು ಡಾಂಬರೀಕರಣಕ್ಕೆ ಚಾಲನೆ ನೀಡಬೇಕಾಗಿದೆ. ಈ ಹಿನ್ನೆಲೆಯಲ್ಲಿ ಸರ್ಕಾರ ಆದೇಶವನ್ನ ಹೊರಡಿಸಿದೆ. ಮೊದಲು ಹದಗೆಟ್ಟಿರೋ ರಸ್ತೆಯನ್ನು ಗುರುತಿಸಿ, ನಂತರ ಅದಕ್ಕೆ ತಗಲುವ ವೆಚ್ಚವನ್ನ ಅಂದಾಜಿಸಬೇಕು. ಬಳಿಕ ಅಲ್ಪಾವಧಿ ಟೆಂಡರ್ ನೀಡಬೇಕು. ಶೀಘ್ರದಲ್ಲೇ ಕಾಮಗಾರಿ ಮಾಡಬೇಕು ಎಂದರು.

## ಬೆಂಗಳೂರಿನಲ್ಲಿ ನಾಯಿ ಕಡಿತದ ಪ್ರಕರಣಗಳಲ್ಲಿ ಕಳೆದ ವರ್ಷಕ್ಕಿಂತ ಶೇ 55 ರಷ್ಟು ಏರಿಕೆ!

• ಉದಯವಾಹಿನಿ, ಬೆಂಗಳೂರು

ಬೆಂಗಳೂರಿನಲ್ಲಿ ಬೀದಿನಾಯಿಗಳ ಹಾವಳಿ ದಿನದಿಂದ ದಿನಕ್ಕೆ ಮಿತಿಮೀರುತ್ತಿದ್ದು, ಸಾರ್ವಜನಿಕರಲ್ಲಿ ಆತಂಕ ಮೂಡಿಸಿದೆ. ಇತ್ತೀಚಿನ ಅಧಿಕೃತ ಅಂಕಿ-ಅಂಶಗಳ ಪ್ರಕಾರ, ನಗರದಲ್ಲಿ ನಾಯಿ ಕಡಿತದ ಪ್ರಕರಣಗಳ ಸಂಖ್ಯೆ ಕಳೆದ ವರ್ಷಕ್ಕೆ ಹೋಲಿಸಿದರೆ ಬರೋಬ್ಬರಿ ಶೇಕಡಾ 55 ರಷ್ಟು ಭಾರಿ ಏರಿಕೆ ಕಂಡಿದೆ ಎಂದು ಡೆಕ್ಕನ್ ಹೆರಾಲ್ಡ್ ವರದಿ ಮಾಡಿದೆ. ಬೆಂಗಳೂರು ಮಹಾನಗರ ಪ್ರದೇಶದಲ್ಲಿ (ಈಗಿನ ಗ್ರೇಟರ್ ಬೆಂಗಳೂರು ಅಥಾರಿಟಿ ವ್ಯಾಪ್ತಿ) 2026ರ ಮೊದಲ ಐದು ತಿಂಗಳಲ್ಲೇ ಬರೋಬ್ಬರಿ 18,140 ನಾಯಿ ಕಡಿತದ ಪ್ರಕರಣಗಳು ದಾಖಲಾಗಿವೆ.

ಕಳೆದ ವರ್ಷ ಅಂದರೆ 2025ರ ಇದೇ ಅವಧಿಯಲ್ಲಿ (ಹಳೆಯ ಬಿಬಿಎಂಪಿ ವ್ಯಾಪ್ತಿ) ಈ ಸಂಖ್ಯೆ 11,647 ಆಗಿತ್ತು.

ಕೇವಲ ಒಂದು ವರ್ಷದ ಅವಧಿಯಲ್ಲಿ ದಾಖಲಾದ ಈ ಬೃಹತ್ ಜಿಗಿತವು ನಗರದ ನಿವಾಸಿಗಳು, ವಿಶೇಷವಾಗಿ ಮಕ್ಕಳು ಮತ್ತು ವೃದ್ಧರ ಸುರಕ್ಷತೆಯ ಬಗ್ಗೆ ತೀವ್ರ ಕಳವಳವನ್ನು ಹುಟ್ಟುಹಾಕಿದೆ.

ಕೇವಲ ಐದು ತಿಂಗಳಲ್ಲಿ 18 ಸಾವಿರಕ್ಕೂ ಹೆಚ್ಚು ಜನರು ನಾಯಿ ಕಡಿತಕ್ಕೆ ಒಳಗಾಗಿದ್ದು, ದಿನನಿತ್ಯ ಸರಾಸರಿ ನೂರಕ್ಕೂ ಹೆಚ್ಚು ಪ್ರಕರಣಗಳು ವರದಿಯಾಗುತ್ತಿವೆ. ಬೆಂಗಳೂರು ನಗರ ಮತ್ತು ಗ್ರಾಮಾಂತರ ಪ್ರದೇಶಗಳ ವ್ಯಾಪ್ತಿಯಲ್ಲಿ ನಾಯಿಗಳ ದಾಳಿ ತೀವ್ರಗೊಂಡಿದೆ.

# ಬಿಡದಿ ಟೌನ್‌ಶಿಪ್ ವಿರೋಧಿಸಿ ಪ್ರತಿಭಟನೆ

## ರೈತರ ಪ್ರತಿಭಟನೆ ನಡುವೆ ಬಿಡದಿ ಟೌನ್‌ಶಿಪ್ ಭೂಸ್ವಾಧೀನ ಅಧಿಸೂಚನೆ ಹೊರಡಿಸಿದ ಸರ್ಕಾರ

• ಉದಯವಾಹಿನಿ, ಬೆಂಗಳೂರು





ನೂರಾರು ವರ್ಷಗಳಿಂದ ವಿಶಾಲ ಹಸಿರು ಮತ್ತು ಸಸ್ಯಸಮೃದ್ಧ ಕೃಷಿಭೂಮಿಯಾಗಿದ್ದ ಬಿಡದಿ ಸುತ್ತಮುತ್ತ ಊರು ಶೀಘ್ರದಲ್ಲೇ ಕಾಂಕ್ರೀಟ್ ಕಟ್ಟಡಗಳಿಂದ ಕೂಡಿದ ಟೌನ್‌ಶಿಪ್ ಆಗಿ ರೂಪಾಂತರಗೊಳ್ಳುವ ಸಾಧ್ಯತೆಯಿದೆ.

ಕರ್ನಾಟಕ ಸರ್ಕಾರವು ಜೂನ್ 13ರಂದು ರಾಮನಗರ ಜಿಲ್ಲೆಯ ಬಿಡದಿ ಸಮೀಪದ ಗ್ರೇಟರ್ ಬೆಂಗಳೂರು ಇಂಟಿಗ್ರೇಟೆಡ್ ಟೌನ್‌ಶಿಪ್ ಯೋಜನೆಗಾಗಿ 516 ಎಕರೆ ಕೃಷಿ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವ ಅಂತಿಮ ಅಧಿಸೂಚನೆಯನ್ನು ಹೊರಡಿಸಿದೆ. ಟೌನ್‌ಶಿಪ್ ಯೋಜನೆಗೆ ಅಗತ್ಯವಿರುವ 7,000ಕ್ಕೂ ಹೆಚ್ಚು ಎಕರೆ ಭೂಮಿಯ ಪೈಕಿ ಮೊದಲ ಹಂತವಾಗಿ 500 ಎಕರೆ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು ಅಧಿಸೂಚನೆ ಹೊರಡಿಸಿದೆ. ಈ ಪ್ರದೇಶವು ಬೆಂಗಳೂರು ದಕ್ಷಿಣ ಜಿಲ್ಲೆಯ ವ್ಯಾಪ್ತಿಗೆ ಸೇರಿದೆ.

ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಅತ್ಯಂತ ಮಹತ್ವಾಕಾಂಕ್ಷಿ ಯೋಜನೆಗಳಲ್ಲಿ ಒಂದಾದ ಈ ಯೋಜನೆಯನ್ನು ದೇಶದ ಮೊದಲ ಕೃತಕ ಬುದ್ಧಿಮತ್ತೆ ಆಧಾರಿತ ಸಮಗ್ರ ಟೌನ್‌ಶಿಪ್ ಎಂದು ಪ್ರಚಾರ ಮಾಡಲಾಗುತ್ತಿದೆ. ಭೂಸ್ವಾಧೀನ ಅಧಿಸೂಚನೆ ಹೊರಬಿದ್ದ ನಂತರ, ಕೆಲವು ರೈತರು ತೀವ್ರ ವಿರೋಧ ವ್ಯಕ್ತಪಡಿಸಿದ್ದು, ಸ್ವಾಧೀನಕ್ಕೆ ಗುರುತಿಸಲಾದ ಭೂಮಿ ಅತ್ಯಂತ ಫಲವತ್ತಾಗಿದ್ದು ಕೃಷಿಗೆ ಅವಶ್ಯಕವಾಗಿದೆ ಎಂದು ವಾದಿಸುತ್ತಿದ್ದಾರೆ.

ಪ್ರತಿಭಟನಾ ರೈತರಿಗೆ ರಾಜ್ಯದ ವಿರೋಧ ಪಕ್ಷಗಳೂ ಬೆಂಬಲ ನೀಡಿವೆ. ಈ ಯೋಜನೆಯನ್ನು ಹಲವು ವರ್ಷಗಳ ಹಿಂದೆ ಜೆಡಿಎಸ್ ಮುಖ್ಯಸ್ಥ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರ ಆಡಳಿತಾವಧಿಯಲ್ಲಿ ಮೊದಲು ಪ್ರಸ್ತಾಪಿಸಲಾಗಿತ್ತು. ನಂತರ ಅದನ್ನು ಕೈಬಿಡಲಾಗಿತ್ತು. ಇದೀಗ ವಿರೋಧ ಪಕ್ಷಗಳಾದ ಜೆಡಿಎಸ್, ಬಿಜೆಪಿ, ಟೌನ್‌ಶಿಪ್ ಯೋಜನೆಯ ಹೆಸರಿನಲ್ಲಿ ದೊಡ್ಡ ಮಟ್ಟದ ರಿಯಲ್ ಎಸ್ಟೇಟ್ ಅಭಿವೃದ್ಧಿಗೆ ಅವಕಾಶ ಕಲ್ಪಿಸುವುದೇ ರಾಜ್ಯ ಸರ್ಕಾರದ ನಿಜವಾದ ಉದ್ದೇಶ ಎಂದು ಆರೋಪಿಸಿದೆ.



ಬೈರಮಂಗಲ ಮತ್ತು ಕಂಚುಗಾರನಹಳ್ಳಿ ಗ್ರಾಮ ಪಂಚಾಯಿತಿಗಳ ರೈತರು ನಿರಂತರವಾಗಿ ವಿರೋಧ ವ್ಯಕ್ತಪಡಿಸುತ್ತಿದ್ದರೂ ಸರ್ಕಾರ ಭೂಸ್ವಾಧೀನ ಪ್ರಕ್ರಿಯೆಯನ್ನು ಮುಂದುವರಿಸಿರುವುದು ರಾಜಕೀಯ ವಲಯದಲ್ಲಿ ತೀವ್ರ ಚರ್ಚೆಗೆ ಕಾರಣವಾಗಿದೆ. ಕೇಂದ್ರ ಸಚಿವ ,ಜೆಡಿಎಸ್ ರಾಜ್ಯಾಧ್ಯಕ್ಷ ಹೆಚ್.ಡಿ. ಕುಮಾರಸ್ವಾಮಿ ಈ ನಿರ್ಧಾರವನ್ನು ತೀವ್ರವಾಗಿ ಖಂಡಿಸಿ, ನ್ಯಾಯಾಲಯದಲ್ಲಿ ನಮ್ಮ ಕಾನೂನು ಹೋರಾಟ ನಡೆಸುವುದಾಗಿ ಘೋಷಿಸಿದ್ದಾರೆ.

ಜೊತೆಗೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಸ್ವತಃ ಗ್ರಾಮಗಳಿಗೆ ಭೇಟಿ ನೀಡಿ ರೈತರ ಅಭಿಪ್ರಾಯವನ್ನು ತಿಳಿದುಕೊಳ್ಳುವಂತೆ ಸವಾಲು ಹಾಕಿದ್ದಾರೆ. ಜೂನ್ 13ರಂದು ಹೊರಡಿಸಲಾದ ಅಂತಿಮ ಅಧಿಸೂಚನೆ ರಾಮನಗರ ಜಿಲ್ಲೆಯ ಬೈರಮಂಗಲ ಮತ್ತು ಕಂಚುಗಾರನಹಳ್ಳಿ ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯ 516 ಎಕರೆ ಕೃಷಿ ಭೂಮಿಯನ್ನು ಒಳಗೊಂಡಿದೆ. ಬೆಂಗಳೂರು ನಗರದಿಂದ ಸುಮಾರು 25 ಕಿಲೋಮೀಟರ್ ದೂರದಲ್ಲಿರುವ ಈ ಯೋಜನೆಯನ್ನು ನಗರದ ಎರಡನೇ ಕೇಂದ್ರ ವ್ಯವಹಾರಿಕ ವಲಯ ಎಂದು ಅಭಿವೃದ್ಧಿಪಡಿಸುವ ಉದ್ದೇಶವಿದೆ.

ಭವಿಷ್ಯದಲ್ಲಿ ಸುಮಾರು 9,600 ಎಕರೆ ಪ್ರದೇಶದಲ್ಲಿ ವಿಸ್ತರಿಸುವ ಈ ಯೋಜನೆಗೆ 18,133 ಕೋಟಿ ರೂಪಾಯಿ ವೆಚ್ಚವಾಗಲಿದೆ ಎಂದು ಅಂದಾಜಿಸಲಾಗಿದೆ. ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಮಾರ್ಚ್ 2025ರಲ್ಲಿ ಪ್ರಾಥಮಿಕ ಅಧಿಸೂಚನೆ ಹೊರಡಿಸಿತ್ತು.

ಇದರಿಂದ ಸುಮಾರು 10,450 ಭೂಮಾಲೀಕರು ಪ್ರಭಾವಿತರಾಗಿದ್ದರು. ಇದೀಗ ಸರ್ಕಾರ ಅಂತಿಮ ಆದೇಶ ಹೊರಡಿಸಿದೆ.

**ಕನಿಷ್ಠ 2.07 ಕೋಟಿ ಪರಿಹಾರ:** ಯೋಜನೆಗೆ ಭೂಮಿ ಕೊಡುವ ಮಾಲೀಕರಿಗೆ ಭೂ ಸ್ವಾಧೀನ ಪಾರದರ್ಶಕತೆ, ಸೂಕ್ತ ಪರಿಹಾರ ಹಕ್ಕು, ಪುನರ್‌ವಸತಿ ಮತ್ತು ಪುನರ್ ವ್ಯವಸ್ಥೆ ಹಕ್ಕು ನಿರ್ಮಾಣ ಕಾಯ್ದೆ- 2013ರ ಮಾನದಂಡಗಳ ಜೊತೆಗೆ, ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿ ಪ್ರಸ್ತುತ ಇರುವ ಭೂ ವಹಿವಾಟು ಆಧರಿಸಿ ಪ್ರತಿ ಎಕರೆಗೆ ಕನಿಷ್ಠ ?2.07 ಕೋಟಿಯಿಂದ ಗರಿಷ್ಠ ?2.55 ಕೋಟಿವರೆಗೆ ಪರಿಹಾರ ದರ ನಿಗದಿಪಡಿಸಲಾಗಿದೆ ಎಂದು ಜಿಲ್ಲಾಧಿಕಾರಿ ತಿಳಿಸಿದ್ದಾರೆ. ಪರಿಹಾರ ದರವು ಭೂ ಮಾಲೀಕರ ಸಮ್ಮತಿಯೊಂದಿಗೆ ನಡೆಯುವ ಭೂ ಸ್ವಾಧೀನಕ್ಕೆ ಅನ್ವಯವಾಗುತ್ತದೆ

> ಗ್ರಾ.ಪಂ.ಪ್ರತಿನಿಧಿಗಳು ಯೋಜನೆ ಪರವಾಗಿ ಮತ ಚಲಾಯಿಸುವ ಮೂಲಕ ತಮ್ಮನ್ನು ಆಯ್ಕೆ ಮಾಡಿದ ಜನರಿಗೆ ದ್ರೋಹ ಮಾಡಿದ್ದಾರೆ ಎಂದು ಕುಮಾರಸ್ವಾಮಿ ಆರೋಪಿಸಿದ್ದಾರೆ. ಸರ್ಕಾರ ಫಲವತ್ತಾದ ಕೃಷಿ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವ ಬದಲು ಬಂಜರು ಅಥವಾ ಒಣಭೂಮಿಯನ್ನು ಗುರುತಿಸಬೇಕಿತ್ತು ಎಂದು ಹೇಳುತ್ತಾರೆ.

> ರೈತರ ಅಹವಾಲುಗಳನ್ನು ಆಲಿಸುವ ಬದಲು ನ್ಯಾಯಾಲಯಕ್ಕೆ ಹೋಗುವಂತೆ ಹೇಳಿರುವುದಕ್ಕಾಗಿ ಗೃಹ ಸಚಿವ ಪ್ರಿಯಾಂಕ್ ಖರ್ಗೆಯವರನ್ನೂ ಕುಮಾರಸ್ವಾಮಿ ಟೀಕಿಸಿದರು. ಈ ಹೋರಾಟಕ್ಕೆ ಬಿಜೆಪಿ ಸಹ ಬೆಂಬಲ ಸೂಚಿಸಿದ್ದು, ಸರ್ಕಾರದ ಮೇಲೆ ರಾಜಕೀಯ ಒತ್ತಡ ಹೆಚ್ಚಾಗಿದೆ.

> ಮಾರ್ಚ್ ತಿಂಗಳಿನಿಂದ ಬೈರಮಂಗಲ ಮತ್ತು ಕಂಚುಗಾರನಹಳ್ಳಿ ಗ್ರಾಮದ ರೈತರು ನಿರಂತರ ಧರಣಿ ನಡೆಸುತ್ತಿದ್ದಾರೆ. ಈ ಪ್ರತಿಭಟನೆಯನ್ನು ದೇವನಹಳ್ಳಿ ರೈತರ 1,198 ದಿನಗಳ ಹೋರಾಟಕ್ಕೆ ಹೋಲಿಸಲಾಗುತ್ತಿದೆ.
> ಆ ಹೋರಾಟದ ಪರಿಣಾಮವಾಗಿ 1,777 ಎಕರೆ ಭೂಮಿಯನ್ನು ಏರೋಪಾರ್ಕ್ ಯೋಜನೆಗಾಗಿ ಸ್ವಾಧೀನಪಡಿಸಿಕೊಳ್ಳುವ ಪ್ರಸ್ತಾವನೆಯನ್ನು ಸರ್ಕಾರ ಹಿಂತೆಗೆದುಕೊಂಡಿತ್ತು.

**ಡಿಕೆಶಿ ವಿಶೇಷ ಆಸಕ್ತಿ**

2023ರಲ್ಲಿ ಅಸ್ತಿತ್ವಕ್ಕೆ ಬಂದ ಕಾಂಗ್ರೆಸ್ ನೇತೃತ್ವದ ಸರ್ಕಾರದಲ್ಲಿ ಉಪಮುಖ್ಯಮಂತ್ರಿಯಾಗಿದ್ದ ಬೆಂಗಳೂರು ದಕ್ಷಿಣ (ರಾಮನಗರ) ಜಿಲ್ಲೆಯವರೇ ಆದ ಡಿ.ಕೆ.ಶಿವಕುಮಾರ್ ನನೆಗುದಿಗೆ ಬಿದ್ದಿದ್ದ ಟೌನ್‌ಶಿಪ್ ಯೋಜನೆ ಕೈಗೆತ್ತಿಕೊಂಡರು. ಸರ್ಕಾರದ ಮಟ್ಟದಲ್ಲಿ ಒಪ್ಪಿಗೆ ಪಡೆದು, ವರ್ಷದ ಹಿಂದೆ ಭೂ ಸ್ವಾಧೀನಕ್ಕೆ ಪ್ರಾಥಮಿಕ ಅಧಿಸೂಚನೆ ಹೊರಡಿಸುವಲ್ಲಿ ಯಶಸ್ವಿಯಾದರು.

ಯೋಜನಾ ಪ್ರದೇಶದಲ್ಲಿ ದೇಶದ ಮೊದಲ ಕೃತಕ ಬುದ್ಧಿಮತ್ತೆ ನಗರ (ಎಐ ಸಿಟಿ) ನಿರ್ಮಾಣದ ಘೋಷಣೆ ಸಹ ಮಾಡಿದರು. ಇದೀಗ ಶಿವಕುಮಾರ್ ಅವರೇ ಮುಖ್ಯಮಂತ್ರಿಯಾಗಿದ್ದಾರೆ. ಅವರು ಅಧಿಕಾರ ವಹಿಸಿಕೊಂಡ ಮೂರೇ ದಿನಕ್ಕೆ ಯೋಜನಾ ಪ್ರದೇಶದ 9 ಗ್ರಾಮಗಳ ಪೈಕಿ 3 ಗ್ರಾಮಗಳ 499 ಎಕರೆ ಭೂ ಸ್ವಾಧೀನಕ್ಕೆ ಅಂತಿಮ ಅಧಿಸೂಚನೆ ಹೊರಬಿದ್ದಿದೆ.

## ರೈಸ್ ಪುಲ್ಲಿಂಗ್ ಆರೋಪಿಯ ಕಾರು ಅಡ್ಡಗಟ್ಟಿ 1.09 ಕೋಟಿ ದರೋಡೆ: ಏಳು ದರೋಡೆಕೋರರ ವಿರುದ್ಧ ಪ್ರಕರಣ ದಾಖಲು

• ಉದಯವಾಹಿನಿ, ಬೆಂಗಳೂರು




ರೈಸ್ ಪುಲ್ಲಿಂಗ್ ಪ್ರಕರಣವೊಂದರ ಆರೋಪಿಯ ಕಾರು ಅಡ್ಡಗಟ್ಟಿ ಅಪಹರಿಸಿ 1.09 ಕೋಟಿ ರೂ.ದರೋಡೆ ಮಾಡಿರುವ ಘಟನೆ ಮಾದನಾಯಕಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದ್ದು, ಈ ಸಂಬಂಧ ಅಪರಿಚಿತ ಏಳು ಮಂದಿ ದರೋಡೆಕೋರರ ವಿರುದ್ಧ ಪ್ರಕರಣ ದಾಖಲಾಗಿದೆ.

**ದೂರಿನಲ್ಲಿ ಏನಿದೆ?** ಅಪಹರಣಕ್ಕೆ ಒಳಗಾದ ಶಿವಶಂಕರ್ ಹಣ ಕಳೆದುಕೊಂಡಿದ್ದು, ಈತ ನೀಡಿದ ದೂರಿನ ಮೇರೆಗೆ ದರೋಡೆ ಪ್ರಕರಣ ದಾಖಲಿಸಿ ತನಿಖೆ ಕೈಗೊಳ್ಳಲಾಗಿದೆ. ಜು.15ರ ರಾತ್ರಿ ಕೃತ್ಯ ನಡೆದಿದೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ. ದಾಸನಪುರ ಹೋಬಳಿಯ ಮುನಿಸ್ವಾಮಿ ರೆಡ್ಡಿ ಬಡಾವಣೆ ನಿವಾಸಿ ಶಿವಶಂಕರ್ ಪುರಾತನ ವಸ್ತುಗಳ ಮಾರಾಟ ಹಾಗೂ ಖರೀದಿ ವ್ಯವಹಾರದಲ್ಲಿ ಹಣ ಕಳೆದುಕೊಂಡಿದ್ದ.

ಹೀಗಾಗಿ ಸುಲಭ ಹಾಗೂ ಅಕ್ರಮವಾಗಿ ಹಣ ಸಂಪಾದನೆ ಮಾಡಲು ರೈಸ್ ಪುಲ್ಲಿಂಗ್ ದಂಧೆಯಲ್ಲಿ ವ್ಯಕ್ತಿಯೊಬ್ಬರನ್ನ ನಂಬಿಸಿ ಹಣ ಪಡೆದು ವಂಚಿಸಿದ್ದ. ಈ ಕುರಿತು ತನ್ನ ವಿರುದ್ಧ ವಿವಿಪುರಂ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಈ ಮಧ್ಯೆ ಆಂಧ್ರ ಹಾಗೂ ತೆಲಂಗಾಣ ಮೂಲದ ಮೂವರು ಪರಿಚಯಸ್ಥ ಗೆಳೆಯರು ಸೇರಿಕೊಂಡು ಹೊಸ ಕಂಪನಿ ತೆರೆಯಲು ನಿರ್ಧರಿಸಿದ್ದ. ಬಂದ ಲಾಭದ ಹಣವನ್ನ ಸಮಾನ ಹಂಚಿಕೆ ಮಾಡಿಕೊಳ್ಳುವ ಬಗ್ಗೆ ಮಾತುಕತೆಯಾಗಿತ್ತು ಎಂದು ದೂರಿನಲ್ಲಿ ಶಿವಶಂಕರ್ ಹೇಳಿದ್ದಾನೆ. ಮಾತುಕತೆಯಂತೆ ಸ್ನೇಹಿತರಾದ ಫರ್ವೇಜ್, ಅಲಿಂ ಹಾಗೂ ಜಿಪ್ಸನ್ ಎಂಬುವರು ಜು.13ರಂದು ಕೊಡಿಗೆಹಳ್ಳಿಯಲ್ಲಿರುವ ಆಯಾತ್ ಹೋಟೆಲ್‌ನಲ್ಲಿ ತಂಗಿದ್ದರು. ಈ ವೇಳೆ, ಕರೆ ಮಾಡಿ ಶಿವಶಂಕರ್ ನನ್ನ ಕರೆಯಿಸಿಕೊಂಡು ಹೂಡಿಕೆ ಭಾಗವಾಗಿ 35 ಲಕ್ಷ ಹಣ ನೀಡಿ ಮನೆಯಲ್ಲಿ ಇರಿಸುವಂತೆ ಸೂಚಿಸಿದ್ದರು. ಜು.15ರಂದು ಕರೆ ಮಾಡಿ ಮತ್ತೆ 74 ಲಕ್ಷ ಹಣವನ್ನ ಹೊಂದಿಸಿಕೊಂಡು ಕೊಟ್ಟಿದ್ದಾರೆ.

ಕಾರಿನ ಡಿಕ್ಕಿಯಲ್ಲಿ ಹಣವಿಟ್ಟು ಚಾಲಕನೊಂದಿಗೆ ಅದೇ ದಿನ ರಾತ್ರಿ 11 ಗಂಟೆ ಸುಮಾರಿಗೆ ಕಾರಿನಿಂದ ಮನೆಗೆ ಬರುವಾಗ ಕುದುರೆಗೆರೆ ಕಾಲೋನಿ ಬಳಿ ಡ್ಯೂಕ್ ಬೈಕ್‌ನಲ್ಲಿ ಬರುತ್ತಿದ್ದ ಇಬ್ಬರು ತಮ್ಮ ಕಾರನ್ನ ಅಡ್ಡಗಟ್ಟಿದ್ದರು. ಅಲ್ಲದೇ, ಕ್ಷಣಾರ್ಧದಲ್ಲಿ ಎರ್ಟಿಗಾ ಕಾರಿನಲ್ಲಿದ್ದ ಐವರು ತಮ್ಮನ್ನ ಬಲವಂತದಿಂದ ಅಪಹರಿಸಿ, ತೋಟದಗುಡ್ಡಹಳ್ಳಿ ಕರೆದೊಯ್ದಿದ್ದಾರೆ ಎಂದು ದೂರಿನಲ್ಲಿ ತಿಳಿಸಲಾಗಿದೆ.

## ಹೋಂಸ್ಟೇಗಳ ನಿಯಂತ್ರಣಕ್ಕೆ ಸಮಗ್ರ ನೀತಿ ರೂಪಿಸಲು ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶನ

• ಉದಯವಾಹಿನಿ, ಬೆಂಗಳೂರು

ರಾಜ್ಯದಲ್ಲಿ ಹೋಂಸ್ಟೇಗಳ ಸ್ಥಾಪನೆ, ನಿರ್ವಹಣೆ ಹಾಗೂ ಮೇಲ್ವಿಚಾರಣೆಯನ್ನು ನಿಯಂತ್ರಿಸಲು ಸಮಗ್ರ ನೀತಿ ಮತ್ತು ಶಾಸನಬದ್ಧ ಚೌಕಟ್ಟನ್ನು ರೂಪಿಸುವ ಸಂಬಂಧ ಪರಿಶೀಲಿಸುವಂತೆ ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶನ ನೀಡಿದೆ.

ಕೊಡಗು ಜಿಲ್ಲೆಯ ಪೊನ್ನಂಪೇಟೆ ತಾಲ್ಲೂಕಿನ ಕುಟ್ಟಾ ಗ್ರಾಮದ ಹೋಂಸ್ಟೇಯೊಂದರ ನೋಂದಣಿ ರದ್ದುಪಡಿಸಿದ್ದ ಸರ್ಕಾರದ ಕ್ರಮವನ್ನು ಪ್ರಶ್ನಿಸಿ ಅದರ ಮಾಲೀಕ ಪಿ.ಎ. ಪೊನ್ನಪ್ಪ ಎಂಬುವರು ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರಿದ್ದ ಪೀಠವು ಈ ಆದೇಶ ಹೊರಡಿಸಿದೆ. ಹೋಂಸ್ಟೇ ಕ್ಷೇತ್ರದ ಹೆಚ್ಚುತ್ತಿರುವ ಪ್ರಾಮುಖ್ಯತೆ ಮತ್ತು ಅವುಗಳ ವಿರುದ್ಧದ ಪ್ರಕರಣಗಳು ಹೆಚ್ಚಾಗುತ್ತಿವೆ. ಆದ್ದರಿಂದ ಕರ್ನಾಟಕ ಸರ್ಕಾರದ ಪ್ರವಾಸೋದ್ಯಮ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು ಸಂಬಂಧಪಟ್ಟ ಇಲಾಖೆಗಳೊಂದಿಗೆ ಸಮಾಲೋಚಿಸಿ, ರಾಜ್ಯದಲ್ಲಿ ಹೋಂಸ್ಟೇಗಳ ಸ್ಥಾಪನೆ, ಕಾರ್ಯಾಚರಣೆ ಮತ್ತು ಮೇಲ್ವಿಚಾರಣೆಯನ್ನು ನಿಯಂತ್ರಿಸುವ ಸಮಗ್ರ ನೀತಿ ಮತ್ತು ನಿಯಂತ್ರಣಕ್ಕೆ ನಿಯಮಗಳನ್ನು ರೂಪಿಸುವ ಸಂಬಂಧ ಪರಿಶೀಲಿಸಬೇಕು ಎಂದು ಪೀಠ ಹೇಳಿದೆ. ಕರ್ನಾಟಕ ಪ್ರವಾಸೋದ್ಯಮ ವ್ಯಾಪಾರ (ಸೌಲಭ್ಯ ಮತ್ತು ನಿಯಂತ್ರಣ) ಕಾಯ್ದೆ, 2015 ಹೋಂಸ್ಟೇಗಳು, ಪ್ರವಾಸೋದ್ಯಮ ವ್ಯಾಪಾರ ಸಂಸ್ಥೆಗಳ ನೋಂದಣಿ ಮತ್ತು ನಿಯಂತ್ರಣವನ್ನು ಒದಗಿಸುತ್ತದೆ. ಆದರೆ, ಹೋಂಸ್ಟೇ ಕಾರ್ಯಾಚರಣೆಯು ಹಲವಾರು ಶಾಸನಬದ್ಧ ಮತ್ತು ನಿಯಂತ್ರಕ ಕ್ಷೇತ್ರಗಳನ್ನು ಒಳಗೊಂಡ ಹಲವಾರು ಅಂಶಗಳನ್ನು ಒಳಗೊಂಡಿರುತ್ತದೆ. ಈ ಕಾಯ್ದೆಯಡಿಯಲ್ಲಿ ನೋಂದಣಿ ಮೂಲಕ ಮಾತ್ರ ಪರಿಣಾಮಕಾರಿಯಾಗಿ ಪರಿಹರಿಸಲಾಗುವುದಿಲ್ಲ. ಆದ್ದರಿಂದ ಹೋಂಸ್ಟೇ ಕೇವಲ ವಾಣಿಜ್ಯ ಸಂಸ್ಥೆಯಲ್ಲ, ಬದಲಾಗಿ ಸಾರ್ವಜನಿಕರು ವಾಸಿಸುವ ಸ್ಥಳವಾಗಿದೆ. ಎಂದು ಪೀಠ ತಿಳಿಸಿದೆ.

ಸಣ್ಣ ಕುಟುಂಬ-ಚಾಲಿತ ಹೋಂಸ್ಟೇಗಳು ಮತ್ತು ವಾಣಿಜ್ಯ ಉದ್ದೇಶದ ದೊಡ್ಡ ರೆಸಾರ್ಟ್ ಮಾದರಿಯ ಹೋಂಸ್ಟೇಗಳ ನಡುವೆ ಸ್ಪಷ್ಟ ವ್ಯತ್ಯಾಸವಿರಬೇಕು. ನಿಯಮಗಳು ಸಣ್ಣ ಮಾಲೀಕರಿಗೆ ಹೊರೆಯಾಗಬಾರದು. ಆದರೆ ದೊಡ್ಡ ಸಂಸ್ಥೆಗಳ ಮೇಲೆ ಕಟ್ಟುನಿಟ್ಟಿನ ನಿಗಾ ಇರಬೇಕು ಎಂದು ಪೀಠ ಹೇಳಿದೆ.

## ಆಟವಾಡುವಾಗ ಕಾಂಪೌಂಡ್ ಕುಸಿದು ಬಾಲಕ ಸಾವು, ಬಾಲಕಿಗೆ ಗಂಭೀರ ಗಾಯ

• ಉದಯವಾಹಿನಿ, ಬೆಂಗಳೂರು

ಆಟವಾಡುವಾಗ ಕಾಂಪೌಂಡ್ ಕುಸಿದು ಐದು ವರ್ಷದ ಬಾಲಕ ಮೃತಪಟ್ಟು, ಮತ್ತೋರ್ವ ಬಾಲಕಿ ಗಂಭೀರವಾಗಿ ಗಾಯಗೊಂಡಿರುವ ಘಟನೆ ನಗರದ ಬಾಗಲೂರು ಪೊಲೀಸ್ ಠಾಣಾ ವ್ಯಾಪ್ತಿಯ ಬಂಡಿಕೊಡಿಗೆಹಳ್ಳಿಯಲ್ಲಿ ಸಂಜೆ ನಡೆದಿದೆ. ಅಫ್ರಿನ್ (5) ಸಾವನ್ನಪ್ಪಿದ ಬಾಲಕ. ಸಮನ್ವಿ (5) ಗಾಯಗೊಂಡ ಬಾಲಕಿ.

ಸಂಜೆ ಮನೆಯ ಅಂಗಳದಲ್ಲಿ ಅಕ್ಕಪಕ್ಕದ ಮನೆ ಮಕ್ಕಳು ಆಟವಾಡುತ್ತಿದ್ದಾಗ ಏಕಾಏಕಿ ಕಾಂಪೌಂಡ್ ಗೋಡೆ ಕುಸಿದಿದ್ದು, ಅಫ್ರಿನ್ ಹಾಗೂ ಸಮನ್ವಿ ಮೇಲೆ ಬಿದ್ದಿದೆ.

ಬಾಲಕನ ಮೃತದೇಹವನ್ನು ಅಂಬೇಡ್ಕರ್ ಆಸ್ಪತ್ರೆಗೆ ರವಾನಿಸಲಾಗಿದೆ. ಗಾಯಗೊಂಡಿರುವ ಬಾಲಕಿಯನ್ನು ಯಲಹಂಕ ಸರ್ಕಾರಿ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಅಫ್ರಿನ್ ತಾಯಿ ಗೃಹಿಣಿಯಾಗಿದ್ದರೆ, ತಂದೆ ಕ್ಯಾಬ್ ಡ್ರೈವರ್ ಆಗಿ ಕೆಲಸ ಮಾಡುತ್ತಿದ್ದಾರೆ. ಕಾಂಪೌಂಡ್ ಮಾಲೀಕರ ವಿರುದ್ಧ ನಿರ್ಲಕ್ಷ್ಯ ಪ್ರಕರಣ ದಾಖಲಿಸಿ ತನಿಖೆ ಕೈಗೊಳ್ಳಲಾಗಿದೆ ಎಂದು ಬಾಗಲೂರು ಪೊಲೀಸರು ಮಾಹಿತಿ ನೀಡಿದ್ದಾರೆ.

# ಗೃಹಲಕ್ಷ್ಮಿ ದುರುಪಯೋಗಕ್ಕೆ ಬ್ರೇಕ್; ಅರ್ಜಿ ನಮೂನೆಯಲ್ಲಿ ಸರ್ಕಾರ ಮಹತ್ವದ ಬದಲಾವಣೆ, !

## ಇತ್ತೀಚೆಗೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಯೋಜನೆಯ ದುರುಪಯೋಗದ ಬಗ್ಗೆ ಕಳವಳ ವ್ಯಕ್ತಪಡಿಸಿದ್ದರು.

• ಉದಯವಾಹಿನಿ, ಬೆಂಗಳೂರು




ರಾಜ್ಯ ಸರ್ಕಾರದ ಐದು ಗ್ಯಾರಂಟಿ ಯೋಜನೆಗಳನ್ನು ಮತ್ತಷ್ಟು ಪಾರದರ್ಶಕಗೊಳಿಸುವ ನಿಟ್ಟಿನಲ್ಲಿ, ಮುಖ್ಯಮಂತ್ರಿ ಡಿಕೆ.ಶಿವಕುಮಾರ್ ನೇತೃತ್ವದ ಸರ್ಕಾರ ಮಹತ್ವದ ಬದಲಾವಣೆ ತರಲು ಮುಂದಾಗಿದೆ.

ಗೃಹಲಕ್ಷ್ಮಿ ಯೋಜನೆಯ ದುರುಪಯೋಗ ತಡೆಯಲು ಮತ್ತು ಅರ್ಹ ಫಲಾನುಭವಿಗಳಿಗೆ ಮಾತ್ರ ನೆರವು ತಲುಪುವಂತೆ ಮಾಡಲು ಹೊಸ ಅರ್ಜಿ ನಮೂನೆಯಲ್ಲಿ ಹೆಚ್ಚುವರಿ ಪ್ರಶ್ನೆಗಳನ್ನು ಸೇರಿಸುವ ಪ್ರಸ್ತಾವನೆಯ ಕುರಿತು ಚಿಂತನೆ ನಡೆಸುತ್ತಿದೆ ಎಂದು ತಿಳಿದುಬಂದಿದೆ.

2023ರ ಆಗಸ್ಟ್‌ನಲ್ಲಿ ಆರಂಭವಾದ ಗೃಹಲಕ್ಷ್ಮಿ ಯೋಜನೆಯಡಿ ಕುಟುಂಬದ ಮಹಿಳಾ ಮುಖ್ಯಸ್ಥೆಗೆ ಪ್ರತಿ ತಿಂಗಳು ರೂ.2,000 ನೆರವು ನೀಡಲಾಗುತ್ತಿದೆ. ಸುಮಾರು 1.1 ಕೋಟಿ ಮಹಿಳೆಯರು ಈ ಯೋಜನೆಯ ಫಲಾನುಭವಿಗಳಾಗಿದ್ದು, ಐದು ಗ್ಯಾರಂಟಿ ಯೋಜನೆಗಳ ಪೈಕಿ ಅತಿ ಹೆಚ್ಚು ಹಣಕಾಸು ವೆಚ್ಚವಾಗುತ್ತಿರುವ ಯೋಜನೆ ಇದಾಗಿದೆ.

ಸದ್ಯ ಬಳಕೆಯಲ್ಲಿರುವ ಅರ್ಜಿ ನಮೂನೆಯಲ್ಲಿ ಮಹಿಳಾ ಮುಖ್ಯಸ್ಥೆಯ ಹೆಸರು, ವಿಳಾಸ, ಆಧಾರ್ ಸಂಖ್ಯೆ, ಬ್ಯಾಂಕ್ ಖಾತೆ ವಿವರ, ಪತಿಯ ಹೆಸರು ಮತ್ತು ಆಧಾರ್ ಸಂಖ್ಯೆ, ಜಾತಿ, ಮೊಬೈಲ್ ಸಂಖ್ಯೆ ಹಾಗೂ ಆದಾಯ ತೆರಿಗೆ ಅಥವಾ ಜಿಎಸ್‌ಟಿ ಪಾವತಿದಾರರೇ ಎಂಬ ಮಾಹಿತಿ ಪಡೆಯಲಾಗುತ್ತಿದೆ. ಆದರೆ, ಪರಿಷ್ಕೃತ ಅರ್ಜಿ ನಮೂನೆಯಲ್ಲಿ ನಾಲ್ಕರಿಂದ ಆರು ಹೆಚ್ಚುವರಿ ಪ್ರಶ್ನೆಗಳನ್ನು ಸೇರಿಸುವ ಸಾಧ್ಯತೆ ಇದೆ. ಫಲಾನುಭವಿಯ ಹೆಸರು ಮತದಾರರ ಪಟ್ಟಿಯಲ್ಲಿದೆಯೇ, ಮತದಾರರ ಗುರುತಿನ ಚೀಟಿ ಸಂಖ್ಯೆ ಏನು, ಬ್ಯಾಂಕ್ ಖಾತೆ ಆಧಾರ್‌ಗೆ ಲಿಂಕ್ ಆಗಿದೆಯೇ ಎಂಬ ವಿವರಗಳನ್ನು ಕಡ್ಡಾಯವಾಗಿ ಕೇಳುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ.ಕೆಲ ಮೃತ ಫಲಾನುಭವಿಗಳ ಖಾತೆಗಳಿಗೂ ಕೂಡ ಹಣ ಜಮೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದ್ದು, ಅವರ ಮೊಬೈಲ್ ಸಂಖ್ಯೆಗಳು ಬೇರೆಯವರ ಹೆಸರಿನಲ್ಲಿ ನೋಂದಣಿಯಾಗಿರುವ ಕಾರಣ ಈ ಸಮಸ್ಯೆ ಉಂಟಾಗಿದೆ ಎಂದು ಹೇಳಿದ್ದರು. ರೂ.100 ಕೋಟಿ ಹಣ ದುರುಪಯೋಗವಾಗುತ್ತಿರುವ ಅಂದಾಜು ಇದೆ ಎಂದು ತಿಳಿಸಿದ್ದರು. ಪರಿಷ್ಕೃತ ವ್ಯವಸ್ಥೆಯಡಿ ಈಗಾಗಲೇ ಯೋಜನೆ ಪಡೆಯುತ್ತಿರುವ ಫಲಾನುಭವಿಗಳು ಕೂಡ ಮರು ಅರ್ಜಿ ಸಲ್ಲಿಸಬೇಕಾಗಬಹುದು ಎಂದು ಮುಖ್ಯಮಂತ್ರಿ ಸೂಚಿಸಿದ್ದಾರೆ.

> ನಿಜವಾದ ಫಲಾನುಭವಿಗಳನ್ನು ಗುರುತಿಸಿ, ಅನರ್ಹರನ್ನು ಹೊರಗಿಡಲು ಹೊಸ ಅರ್ಜಿ ನಮೂನೆ ಸಹಕಾರಿಯಾಗಲಿದೆ ಎಂದು ಅಧಿಕಾರಿಗಳು ಅಭಿಪ್ರಾಯಪಟ್ಟಿದ್ದಾರೆ. ಪರಿಷ್ಕೃತ ವ್ಯವಸ್ಥೆಯಡಿ ಈಗಾಗಲೇ ಯೋಜನೆ ಪಡೆಯುತ್ತಿರುವ ಫಲಾನುಭವಿಗಳು ಕೂಡ ಮರು ಅರ್ಜಿ ಸಲ್ಲಿಸಬೇಕಾಗಬಹುದು ಎಂದು ಮುಖ್ಯಮಂತ್ರಿ ಸೂಚಿಸಿದ್ದಾರೆ.

> ಈ ಪ್ರಸ್ತಾವನೆ ಕುರಿತು ರಾಜ್ಯ ಸಚಿವ ಸಂಪುಟ ಶೀಘ್ರದಲ್ಲೇ ಅಂತಿಮ ತೀರ್ಮಾನ ಕೈಗೊಳ್ಳುವ ಸಾಧ್ಯತೆ ಇದೆ. ಹೊಸ ಅರ್ಜಿ ನಮೂನೆಗೆ ಸಚಿವ ಸಂಪುಟದ ಅನುಮೋದನೆ ದೊರೆತರೆ, ಆನ್‌ಲೈನ್ ಜೊತೆಗೆ ಬೆಂಗಳೂರು ಒನ್, ಗ್ರಾಮ ಒನ್ ಸೇರಿದಂತೆ ವಿವಿಧ ಸೇವಾ ಕೇಂದ್ರಗಳಲ್ಲೂ ಅರ್ಜಿಗಳನ್ನು ಸ್ವೀಕರಿಸಲಾಗುವುದು.


**ಹೊಸ ಅರ್ಜಿ ನಮೂನೆ**

# ವಿದ್ಯುತ್ ಖಾಸಗೀಕರಣಕ್ಕೆ ರೈತ ಸಂಘ ವಿರೋಧ : ಗುಂಡ್ಲುಪೇಟೆಯಲ್ಲಿ ಪ್ರತಿಭಟನೆ

• ಉದಯವಾಹಿನಿ, ಗುಂಡ್ಲುಪೇಟೆ

ರಾಜ್ಯದ 19 ಜಿಲ್ಲೆಗಳಲ್ಲಿ ವಿದ್ಯುತ್ ಸರಬರಾಜು ಪರವಾನಗಿಗಾಗಿ ಖಾಸಗಿ ಕಂಪನಿ ಟಾಟಾ ಸಂಸ್ಥೆಯು ಸಲ್ಲಿಸಿರುವ ಅರ್ಜಿಗೆ ಮಾನ್ಯತೆ ನೀಡದೆ ತಿರಸ್ಕರಿಸಬೇಕು ಎಂದು ಒತ್ತಾಯಿಸಿ ಕರ್ನಾಟಕ ರಾಜ್ಯ ರೈತ ಸಂಘ ಸದಸ್ಯರು ಗುರುವಾರ ಪಟ್ಟಣದಲ್ಲಿ ಪ್ರತಿಭಟನೆ ನಡೆಸಿದರು.

ಪಟ್ಟಣದ ಪ್ರವಾಸಿ ಮಂದಿರದಿಂದ ಹೊರಟ ರೈತ ಸಂಘ ಸದಸ್ಯರು ಎಂಡಿಸಿಸಿ ವೃತ್ತದ ಬಳಿ ರಸ್ತೆ ತಡೆ ನಡೆಸಿ ಕೇಂದ್ರ, ಸರ್ಕಾರದ ವಿರುದ್ಧ ದಿಕ್ಕಾರದ ಘೋಷಣೆಗಳನ್ನ ಕೂಗಿ ಆಕ್ರೋಶ ಹೊರಹಾಕಿದರು. ತಹಶೀಲ್ದಾರ್ ಕಚೇರಿ ಮುಂಭಾಗ ಜಮಾವಣೆಗೊಂಡ ಪ್ರತಿಭಟನಕಾರರು ಆಳುವ ಸರ್ಕಾರಗಳ ನಡೆಯನ್ನ ತೀವ್ರವಾಗಿ ಖಂಡಿಸಿದರು.




ರೈತ ಸಂಘ ಚಾಮರಾಜನಗರ ಜಿಲ್ಲಾಧ್ಯಕ್ಷ ಶಿವಪುರ ಮಹದೇವಪ್ಪ ಮಾತನಾಡಿ ವಿದ್ಯುತ್ ಸರಬರಾಜಿಗೆ ಪರವಾನಗಿ ಒಪ್ಪಿಗೆ ಪಡೆಯಲು ತರಾತುರಿಯಲ್ಲಿದೆ ಆದರೆ ಕಂಪನಿಯು ಮೂಲಸೌಕರ್ಯ, ವಿದ್ಯುತ್ ಖರೀದಿ ಹಾಗೂ ಪೂರೈಕೆ ಕುರಿತಾಗಿ ರೂಪಿಸಿರುವ ಯೋಜನೆಯ ಮಾಹಿತಿ ಬಂಡವಾಳ ಹೂಡಿಕೆ ಮತ್ತು ಸಿಬ್ಬಂದಿ ನೇಮಕಾತಿ ಮಾಹಿತಿಯನ್ನ ಸಲ್ಲಿಸಿರುವ ಅರ್ಜಿಯಲ್ಲಿ ಉಲ್ಲೇಖ ಮಾಡಿಲ್ಲ ಎಂದು ಆರೋಪಿಸಿದರು.

ರಾಜ್ಯದಲ್ಲಿ ಪ್ರಸ್ತುತವಾಗಿ ಕರ್ತವ್ಯ ನಿರ್ವಹಿಸುತ್ತಿರುವಾಗಲೆ ಖಾಸಗಿ ಕಂಪನಿಗೆ ವರ್ಗಾಯಿಸಲು ಮುಂದಾಗಿರುವುದು ಆತಂಕಕಾರಿ ಸಂಗತಿಯಾಗಿದೆ ಇದರಿಂದ ಆರ್ಥಿಕ ಸ್ಥಿತಿಗತಿ ಪಲ್ಲಟವಾಗುವ ಸಂಭವವಿದೆ, ಕಡಿಮೆ ಶುಲ್ಕ ಭರಿಸುತ್ತಿರುವ ರೈತಾಪಿ ಕುಟುಂಬಗಳಿಗೆ ಅಧಿಕ ಹೊರೆಯಾಗುತ್ತಿದೆ ಎಂಬ ವರದಿ ಸ್ಪಷ್ಟಪಡಿಸಿದ್ದರೂ ಖಾಸಗೀಕರಣ ಸರಿಯಾದ ಮಾರ್ಗವಲ್ಲ ಎಂದು ಕಿಡಿಕಾರಿದರು.

ಕೃಷಿಯನ್ನೇ ಜೀವನಾಧಾರವನ್ನಾಗಿಸಿಕೊಂಡಿರುವ ರೈತರಿಗೆ ಸರ್ಕಾರದ ನಿರ್ಧಾರ ಗಾಯದ ಮೇಲೆ ಬರೆ ಎಳೆದಂತಾಗುತ್ತದೆ ಆದುದರಿಂದ ಖಾಸಗಿ ಕಂಪನಿಗೆ ಅನುಮತಿ ನೀಡಬಾರದು ಎಂದು ಒತ್ತಾಯಿಸಿ ತಹಶೀಲ್ದಾರ್ ಎಂ.ಎಸ್.ತನ್ಮಯ್ ಅವರಿಗೆ ಮನವಿ ಸಲ್ಲಿಸಿದರು. ಪ್ರತಿಭಟನೆಯಲ್ಲಿ ರೈತ ಸಂಘ ತಾ.ಉಪಾಧ್ಯಕ್ಷ ನಾಗರಾಜು, ಮಹೇಂದ್ರ, ಪ್ರವೀಣ್, ಪ್ರಸಾದ್ ಸೇರಿದಂತೆ ಹಲವರು ಭಾಗವಹಿಸಿದ್ದರು.

## ವಿದ್ಯೆ ಜೀವನದ ಪಥವನ್ನೇ ಬದಲಿಸಬಲ್ಲದು




• ಉದಯವಾಹಿನಿ,ಮಂಡ್ಯ

ಕೆಜಿಎಫ್ ಮಕ್ಕಳು ವಿಧ್ಯೆಯನ್ನು ಶ್ರದ್ಧೆಯಿಂದ ಕಲಿತರೆ ತಮ್ಮ ಕುಟುಂಬ ಹಾಗೂ ಜೀವನದ ಪಥವನ್ನೇ ಬದಲಿಸಬಲ್ಲ ಶಕ್ತಿ ಹೊಂದಿದೆ ಆದ್ದರಿಂದ ಪೋಷಕರು ತಮ್ಮ ಮಕ್ಕಳನ್ನು ವಿಧ್ಯಾಭ್ಯಾಸವನ್ನು ನೀಡಬೇಕು ಎಂದು ಪೊಲೀಸ್ ವರಿಷ್ಠಾಧಿಕಾರಿ ಶಿವಾಂಶು ರಜಪೂತ್ ಹೇಳಿದರು.

ಮಹಿಳಾ ಮೀಲನ್ ಟ್ರಸ್ಟ್ ಹಾಗೂ ಬೆಂಗಳೂರು ರೋಟರಿ ಕ್ಲಬ್ ಸಂಯುಕ್ತ ಆಶ್ರಯದಲ್ಲಿ ಶಾಲಾ ಮಕ್ಕಳಿಗೆ ನೋಟ್ ಪುಸ್ತಕ ವಿತರಣಾ ಸಮಾರಂಭವನ್ನು ಉರಿಗಂ ನೆಹರು ಕಲ್ಯಾಣ ಮಂದಿರದಲ್ಲಿ ಹಮ್ಮಿಕೊಳ್ಳಲಾಗಿತ್ತು. ಮಕ್ಕಳಿಗೆ ನೋಟ್ ಪುಸ್ತಕಗಳನ್ನು ವಿತರಣೆ ಮಾಡಿ ಮಾತನಾಡಿದ ಪೊಲೀಸ್ ವರಿಷ್ಠಾಧಿಕಾರಿ ಶಿವಂಶು ರಜಪೂತ್ ಇಂದಿನ ಮಕ್ಕಳೆ ಮುಂದಿನ ನಮ್ಮ ದೇಶದ ಆಸ್ತಿಗಳು ವಿಧ್ಯೆಯೆಡೆಗೆ ಮಕ್ಕಳು ಹೆಚ್ಚಿನ ಆಸಕ್ತಿವಹಿಸಬೇಕು ಮತ್ತು ನಿಮ್ಮ ತಂದೆ ತಾಯಿಯರಿಗೆ ಶಿಕ್ಷಕರಿಗೆ ಗೌರವವನ್ನು ನೀಡಬೇಕು ಎಂದು ಹೇಳಿದರು. ಪೊಲೀಸ್ ಇಲಾಖೆಯಲ್ಲಿ ಮಹಿಳಾ ಸಹಾಯವಾಣಿ ಇದ್ದು ಸಮಸ್ಯೆ ಬಂದರೆ 112 ಕರೆ ಮಾಡಿ 10 ನಿಮಿಷಕ್ಕೆ ಪೊಲೀಸರು ಬರಲಿದ್ದಾರೆ ಎಂದರು. ಮಹಿಳಾ ಮಿಲನ್ ಟ್ರಸ್ಟ್ ಮೂಲಕವಾಗಿ ಮಹಿಳೆಯರನ್ನು ಆರ್ಥಿಕವಾಗಿ ಸಬಲೀಕರಣ ಮಾಡುವ ನಿಟ್ಟಿನಲ್ಲಿ ಸಾಮಾಜಿಕ ಸೇವೆಗಳನ್ನು ಮಾಡುತ್ತ ಬಂದಿದ್ದೇವೆ ಬಿಜಿಎಂಎಲ್ ಭಾಗದಲ್ಲಿ ಕೊಳವೆ ಬಾವಿಗಳನ್ನು ಕೊರಿಸಲಾಗಿದೆ, ಶೌಚಾಲಯಗಳನ್ನು ನಿರ್ಮಾಣ ಮಾಡಲಾಗಿದೆ ಬಡ ಕುಟುಂಬಗಳಿಗೆ ಆರ್ಥಿಕವಾಗಿ ಸಹಾಯವನ್ನು ಮಾಡುತ್ತಾ ಬಂದಿದ್ದೇವೆ .

### ವಾಹನಗಳಲ್ಲಿ ಗರಿಷ್ಠ ಎರಡು ಲೀಟರ್ ನೀರಿನ ಬಾಟಲಿ ಹೊರತಾಗಿ ಇತರೆ ಏಕಬಳಕೆಯ ಪ್ಲಾಸ್ಟಿಕ್ ಉತ್ಪನ್ನಗಳನ್ನು ಕೊಂಡೊಯ್ಯುವಂತಿಲ್ಲ.

## ಪಶ್ಚಿಮಘಟ್ಟಗಳ ಉಳಿವು, ರಕ್ಷಣೆಗೆ ರಾಷ್ಟ್ರೀಯ ನೀತಿ ರೂಪಿಸಲಾಗುತಿದೆ

• ಉದಯವಾಹಿನಿ, ಚಾಮರಾಜನಗರ




ಪಶ್ಚಿಮ ಘಟ್ಟಗಳ ಉಳಿವು ಹಾಗೂ ರಕ್ಷಣೆಗೆ ರಾಷ್ಟ್ರೀಯ ನೀತಿ ರೂಪಿಸಲಾಗುತ್ತಿದೆ ಎಂದು ರಾಜ್ಯ ಪಶ್ಚಿಮಘಟ್ಟ ಸಂರಕ್ಷಣಾ ಕಾರ್ಯಪಡೆ ಸಮಿತಿ ಅಧ್ಯಕ್ಷ ಮೊಹಮ್ಮದ್ ತಬ್ರೇಜ್ ಆಲಂ ಷರೀಫ್ ತಿಳಿಸಿದರು. ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಪಶ್ಚಿಮ ಘಟ್ಟಗಳ ಸಂರಕ್ಷಣೆ, ಕಾವೇರಿ ನದಿ ಪರಿಸರದಲ್ಲಿರುವ ಗ್ರಾಮಗಳು ಹಾಗೂ ಬುಡಕಟ್ಟು ಜನರ ಸಮಸ್ಯೆ ಪರಿಹರಿಸುವ ನಿಟ್ಟಿನಲ್ಲಿ ಹಮ್ಮಿಕೊಂಡಿದ್ದ ಸಭೆಯಲ್ಲಿ ಮಾತನಾಡಿ, ಪಶ್ಚಿಮ ಘಟ್ಟಗಳ ಕುರಿತು ಮಾತನಾಡಿದರೆ ಸಾಲದು. ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ರಾಷ್ಟ್ರೀಯ ನೀತಿ ಜಾರಿ ಅಗತ್ಯವಿದ್ದು ರೂಪಿಸಲಾಗುತ್ತಿದೆ ಎಂದರು.

ಪಶ್ಚಿಮಘಟ್ಟದೊಳಗೆ ಪ್ಲಾಸ್ಟಿಕ್ ಹಾವಳಿ ಮಿತಿಮೀರಿದ್ದು ಪ್ರಕೃತಿ ಹಾಗೂ ವನ್ಯಜೀವಿಗಳ ಜೀವಕ್ಕೆ ಕುತ್ತು ಎದುರಾಗುತ್ತಿದ್ದು ಕಾಡಿನ ಹಾದಿಯಲ್ಲಿ ಸಂಚರಿಸುವ ವಾಹನಗಳಲ್ಲಿ ಗರಿಷ್ಠ ಎರಡು ಲೀಟರ್ ನೀರಿನ ಬಾಟಲಿ ಹೊರತಾಗಿ ಇತರೆ ಏಕಬಳಕೆಯ ಪ್ಲಾಸ್ಟಿಕ್ ಉತ್ಪನ್ನಗಳನ್ನು ಕೊಂಡೊಯ್ಯುವಂತಿಲ್ಲ.

ಅಲ್ಲಲ್ಲಿ ಹಸಿರು ಚೆಕ್‌ಪೋಸ್ಟ್‌ಗಳನ್ನು ನಿರ್ಮಿಸಿ ವಾಹನಗಳ ತಪಾಸಣೆ ನಡೆಸಿ ಪ್ಲಾಸ್ಟಿಕ್ ಕೊಂಡೊಯ್ಯುವುದನ್ನು ತಡೆಯಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಪಶ್ಚಿಮಘಟ್ಟ ಪ್ರದೇಶದ ಪರಿಸರ, ಜೀವ ವೈವಿಧ್ಯತೆ, ಜಲ ರಕ್ಷಣೆಗೆ ಪಶ್ಚಿಮಘಟ್ಟ ಸಂರಕ್ಷಣಾ ಕಾರ್ಯಪಡೆ ಬದ್ಧವಾಗಿದೆ. ಚಾಮರಾಜನಗರ ಜಿಲ್ಲೆ ಶೇ 52ರಷ್ಟು ಅರಣ್ಯದಿಂದ ಕೂಡಿದ್ದು ಉತ್ತರ ಕನ್ನಡ, ಶಿವಮೊಗ್ಗ ಜಿಲ್ಲೆ ಹೊರತುಪಡಿಸಿದರೆ ಅತಿ ಹೆಚ್ಚು ಪಶ್ಚಿಮಘಟ್ಟವನ್ನು ಹೊಂದಿರುವ ಜಿಲ್ಲೆಯಾಗಿದೆ.

> ಅರಣ್ಯ ಪ್ರದೇಶದ ವಾಸಿಗಳ ಆರೋಗ್ಯ ತಪಾಸಣೆಗೆ ಕಾರ್ಯಕ್ರಮ ನಡೆಸಲಾಗುತ್ತಿದೆ ಜಿಲ್ಲೆಯಲ್ಲಿ ಕ್ಯಾನ್ಸರ್ ತಪಾಸಣೆ, ಮುಂದಿನ ಚಿಕಿತ್ಸೆಗಾಗಿ ವಿವಿಧೆಡೆ ಆರೋಗ್ಯ ಶಿಬಿರಗಳನ್ನು ಆಯೋಜಿಸಲಾಗುತ್ತಿದೆ. ಶಿಕ್ಷಣ. ಪರಿಸರ ಸಂರಕ್ಷಣೆ ಇನ್ನಿತರ ಪ್ರಮುಖ ವಿಷಯಗಳಿಗೆ ಗಮನ ಕೊಡಲಾಗುತ್ತಿದೆ .
>
> ಶ್ರೀರೂಪಜಿಲ್ಲಾಧಿಕಾರಿ

ಅರಣ್ಯದೊಳಗಿನ ಪ್ರವಾಸಿ ತಾಣಗಳಲ್ಲಿ ಪ್ಲಾಸ್ಟಿಕ್ ಬಿಸಾಡುವುದನ್ನು ತಡೆಯಬೇಕು. ಪರಿಸರ ಮಾಲಿನ್ಯವಾಗದಂತೆ ಜಾಗೃತಿ ಮೂಡಿಸಬೇಕು. ಕಸ ವಿಲೇವಾರಿಗೆ ಅಲ್ಲಲ್ಲಿ ಡಬ್ಬಗಳನ್ನು ಇರಿಸಬೇಕು ಎಂದರು.

ಬಂಡೀಪುರ ಹುಲಿ ಸಂರಕ್ಷಿತ ಅರಣ್ಯ ಮಾರ್ಗವಾಗಿ ಕೇರಳಕ್ಕೆ ಸಂಚರಿಸುವ ವಾಹನಗಳಿಗೆ ಸದ್ಯ ರಾತ್ರಿ ಪ್ರವೇಶ ನಿರ್ಬಂಧವಿದ್ದು ಮರು ಆರಂಭ ಕುರಿತ ಪ್ರಸ್ತಾವ ಬಂದರೆ ತಿರಸ್ಕರಿಸಲಾಗುವುದು.

ವಾಣಿಜ್ಯ ಉದ್ದೇಶಗಳಿಗೆ ವನ್ಯಜೀವಿಗಳ ಮುಕ್ತ ಸಂಚಾರಕ್ಕೆ ಅಡ್ಡಿಪಡಿಸಬಾರದು, ಪರಿಸರಕ್ಕೆ ಹಾನಿಯಾಗುವ ಕಾಮಗಾರಿಗಳ ಅಗತ್ಯವೂ ಇಲ್ಲ ಎಂದರು. ಜಿಲ್ಲೆಯ ಪ್ರವಾಸಿ ತಾಣಗಳಲ್ಲಿ ಪಶ್ಚಿಮಘಟ್ಟಗಳ ಸಂರಕ್ಷಣೆ ಹಾಗೂ ಮಹತ್ವ ವಿವರಿಸಲು ಮಾಹಿತಿ ಫಲಕಗಳನ್ನು ಅಳವಡಿಸಬೇಕು. ಪ್ರವಾಸಿಗರಿಗೆ, ವಿದ್ಯಾರ್ಥಿಗಳಿಗೆ ಪಶ್ಚಿಮಘಟ್ಟಗಳ ಮಹತ್ವ ತಿಳಿಸಿಕೊಡುವ ಕಾರ್ಯ ಮಾಡಬೇಕು. ಅರಣ್ಯ ಭಾಗದಲ್ಲಿ ವಾಸಿಸುವ ಬುಡಕಟ್ಟು ಜನರ ಆರೋಗ್ಯ ಸುಧಾರಿಸುವ ಕಾರ್ಯಕ್ರಮಗಳನ್ನು ಮಾಡಬೇಕು. ಸಾಮಾಜಿಕ ಅರಣ್ಯ ಇಲಾಖೆ ಹೆಚ್ಚು ಗಿಡಗಳನ್ನು ನೆಟ್ಟು ಪೋಷಣೆ ಮಾಡಬೇಕು ಎಂದು ಮೊಹಮ್ಮದ್ ತಬ್ರೇಜ್ ಆಲಂ ಷರೀಫ್ ತಿಳಿಸಿದರು.

ಹೈಕೋರ್ಟ್ ಸೀನಿಯರ್ ಕೌನ್ಸಿಲ್ ಮೃತ್ಯಂಜಯ, ಹಿರಿಯ ವಿಜ್ಞಾನಿ ನಯೀಮ್ ಉಲ್ಲಾ, ಹೆಚ್ಚುವರಿ ಜಿಲ್ಲಾಧಿಕಾರಿ ಟಿ.ಜವರೇಗೌಡ, ಬಿಆರ್‌ಟಿ ಹುಲಿ ಸಂರಕ್ಷಿತ ಪ್ರದೇಶದ ಅರಣ್ಯ ಸಂರಕ್ಷಣಾಧಿಕಾರಿ ಶ್ರೀಪತಿ, ಜಿಲ್ಲಾ ಪಂಚಾಯಿತಿ ಉಪ ಕಾರ್ಯದರ್ಶಿ ಶ್ರುತಿ, ಲೋಕೋಪಯೋಗಿ ಇಲಾಖೆ ಕಾರ್ಯಪಾಲಕ ಇಂಜಿನಿಯರ್ ಕಿರಣ್ ಕುಮಾರ್, ಡಿಎಚ್‌ಒ ಡಾ.ಎಸ್. ಚಿದಂಬರ, ಡಿಡಿಪಿಐ ಚಂದ್ರ ಪಾಟೀಲ್, ತಹಶೀಲ್ದಾರ್ ಚೈತ್ರಾ, ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಉಪನಿರ್ದೇಶಕ ರಾಜೇಶ್, ಪ್ರವಾಸೋದ್ಯಮ ಇಲಾಖೆ ಸಹಾಯಕ ನಿರ್ದೇಶಕ ತಮಣಗೌಡ ಪಾಟೀಲ್ ಸಭೆಯಲ್ಲಿ ಇದ್ದರು.

## ಮಿನಿ ನ್ಯೂಸ್

### ಚಿಮಂಗಲ ಗ್ರಾಮದಲ್ಲಿ ತ್ರಿಶಕ್ತಿ ಉತ್ಸವ ಸಂಭ್ರಮ




• ಉದಯವಾಹಿನಿ, ಶಿಡ್ಲಘಟ್ಟ

ತಾಲ್ಲೂಕಿನ ಚೀಮಂಗಲ ಗ್ರಾಮದಲ್ಲಿ ತ್ರಿಶಕ್ತಿ ಉತ್ಸವವನ್ನು ಭಕ್ತಿ, ಸಂಭ್ರಮ ಮತ್ತು ಸಡಗರದಿಂದ ಆಚರಿಸಲಾಯಿತು. ಗ್ರಾಮ ದೇವತೆಗಳಾದ ಶ್ರೀ ಚೌಡೇಶ್ವರಿ ದೇವಿ, ಶ್ರೀ ಮಹೇಶ್ವರಮ್ಮ ದೇವಿ ಹಾಗೂ ಶ್ರೀ ಮುನೇಶ್ವರ ಸ್ವಾಮಿ ಅವರ ಮೂರ್ತಿಗಳನ್ನು ವಿಶೇಷ ಅಲಂಕಾರದೊಂದಿಗೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಲಾಯಿತು. ಗ್ರಾಮದ ಪ್ರಮುಖರು, ಯುವಕರು ಹಾಗೂ ಭಕ್ತಾದಿಗಳು ಉತ್ಸಾಹದಿಂದ ಪಾಲ್ಗೊಂಡು ದೇವರ ಜಯಘೋಷಗಳನ್ನು ಮೊಳಗಿಸಿದರು. ಮೆರವಣಿಗೆ ಸಾಗಿದ ಮಾರ್ಗದಲ್ಲಿ ಮಹಿಳೆಯರು ತಮ್ಮ ಮನೆಗಳ ಮುಂದೆ ಆಕರ್ಷಕ ರಂಗೋಲಿಗಳನ್ನು ಹಾಕಿ, ಹೂವಿನ ಅಲಂಕಾರ ಮಾಡಿ ದೇವತೆಗಳನ್ನು ಭಕ್ತಿ ಭಾವದಿಂದ ಸ್ವಾಗತಿಸಿದರು. ಕುಟುಂಬದ ಸುಖ-ಶಾಂತಿ ಮತ್ತು ಗ್ರಾಮದ ಅಭಿವೃದ್ಧಿಗಾಗಿ ಪ್ರಾರ್ಥನೆ ಸಲ್ಲಿಸಿದರು. ತ್ರಿಶಕ್ತಿ ಉತ್ಸವವು ಗ್ರಾಮದಲ್ಲಿ ಧಾರ್ಮಿಕ ಸೌಹಾರ್ದತೆ, ಏಕತೆಯ ಸಂಕೇತವಾಗಿ ಮೂಡಿಬಂದಿದ್ದು, ಗ್ರಾಮದಾದ್ಯಂತ ಹಬ್ಬದ ವಾತಾವರಣ ನಿರ್ಮಾಣವಾಗಿದ್ದು ಗ್ರಾಮದ ಮುಖಂಡರು, ಯುವಕರು, ಮಹಿಳೆಯರು ಶ್ರದ್ಧಾ ಭಕ್ತಿಯಿಂದ ನಡೆಸಿಕೊಟ್ಟರು.

## ಕೋಲಾರಮ್ಮ ದೇವಾಲಯದ ರಥಬೀದಿ ಮುಖದ್ವಾರ ಲೋಕಾರ್ಪಣೆ




• ಉದಯವಾಹಿನಿ, ಕೋಲಾರ

ನಗರದ ಆರಾಧ್ಯ ದೇವತೆ ಕೋಲಾರಮ್ಮ ದೇವಾಲಯದ ರಥಬೀದಿಯ ನೂತನ ಮುಖದ್ವಾರವನ್ನು ಇಂದು ಮಾನ್ಯ ವಿಧಾನ ಪರಿಷತ್ ಶಾಸಕ ಎಂ. ಎಲ್. ಅನಿಲಕುಮಾರ್ ಮತ್ತು ಜಿಲ್ಲಾಧಿಕಾರಿ ಡಾ. ಎಂ. ಆರ್. ರವಿ ಅವರು ಲೋಕಾರ್ಪಣೆಗೊಳಿಸಿದರು.

ಮುಖದ್ವಾರ ಉದ್ಘಾಟನೆಗೂ ಮುನ್ನ ದೇವಾಲಯದ ಸಾಂಪ್ರದಾಯಿಕ ವಿಧಿವಿಧಾನಗಳಂತೆ ಗೋಪೂಜೆ ಹಾಗೂ ಬಿಂಬದರ್ಶನ ಕಾರ್ಯಕ್ರಮಗಳನ್ನು ಅತ್ಯಂತ ಶ್ರದ್ಧಾಭಕ್ತಿಯಿಂದ ನೆರವೇರಿಸಲಾಯಿತು. ಇದೇ ಸಂದರ್ಭದಲ್ಲಿ ಕೋಲಾರಮ್ಮ ತಾಯಿಯು ಜಿಲ್ಲೆಯ ಜನತೆಗೆ ಹಾಗೂ ಸಮಸ್ತ ಭಕ್ತಾದಿಗಳಿಗೆ ಆಯುರಾರೋಗ್ಯ, ಸುಖ-ಶಾಂತಿ ಮತ್ತು ಸಮೃದ್ಧಿಯನ್ನು ಕರುಣಿಸಲಿ ಎಂದು ಗಣ್ಯರು ವಿಶೇಷ ಪ್ರಾರ್ಥನೆ ಸಲ್ಲಿಸಿದರು.

ಮುಖದ್ವಾರದ ಲೋಕಾರ್ಪಣೆ ನೆರವೇರಿಸಿ ಮಾತನಾಡಿದ ಗಣ್ಯರು, ''ಇಂದಿನಿಂದ ಈ ಮುಖದ್ವಾರವು ಸಾರ್ವಜನಿಕರ ಪ್ರವೇಶಕ್ಕೆ ಮುಕ್ತವಾಗಿದೆ. ಇಲ್ಲಿ ಕಲ್ಲಿನ ಕೆತ್ತನೆ ಹಾಗೂ ಸಿಮೆಂಟ್‌ನಲ್ಲಿ ಮೂಡಿಬಂದಿರುವ ಅದ್ಭುತ ಕಲಾಕೃತಿಗಳು ಮತ್ತು ಕೋಲಾರಮ್ಮ ದೇವಿಯ ಸುಂದರ ಪ್ರತಿಬಿಂಬಗಳು ಭಕ್ತರ ಕಣ್ಣು ಸೆಳೆಯುವಂತೆ ಅತ್ಯಂತ ಆಕರ್ಷಕವಾಗಿ ಮೂಡಿಬಂದಿವೆ,'' ಎಂದು ಶಿಲ್ಪಕಲೆಯ ಸೊಗಸನ್ನು ಮುಕ್ತಕಂಠದಿಂದ ಶ್ಲಾಘಿಸಿದರು.

ಕಾರ್ಯಕ್ರಮದಲ್ಲಿ ಸ್ಥಳೀಯ ಪ್ರಮುಖರು, ದೇವಾಲಯದ ಆಡಳಿತ ಮಂಡಳಿಯ ಸಿಬ್ಬಂದಿ ಹಾಗೂ ಅಪಾರ ಸಂಖ್ಯೆಯ ಭಕ್ತಾದಿಗಳು ಉಪಸ್ಥಿತರಿದ್ದರು. ನೂತನ ಮುಖದ್ವಾರದ ಭವ್ಯತೆಯು ದೇವಾಲಯದ ಐತಿಹಾಸಿಕ ಮತ್ತು ಧಾರ್ಮಿಕ ಮೆರುಗನ್ನು ಮತ್ತಷ್ಟು ಹೆಚ್ಚಿಸಿದೆ.

## ಕುಣಿಗಲ್‌ನಲ್ಲಿ ನೀರಿನ ಲಭ್ಯತೆಯೂ ಕಡಿಮೆ: ಶುದ್ದೀಕರಣ ಘಟಕದಲ್ಲಿ ಅವ್ಯವಸ್ಥೆ

• ಉದಯವಾಹಿನಿ, ಕುಣಿಗಲ್

ತಾಲ್ಲೂಕಿನ ಹುಲಿಯೂರುದುರ್ಗ ಹೋಬಳಿ ಕೇಂದ್ರಕ್ಕೆ ಕುಡಿಯುವ ನೀರು ಪೂರೈಸುವ ಶಿಂಷಾ ನದಿಯ ನೀರು ಸರಬರಾಜು ಶುದ್ದೀಕರಣ ಘಟಕದಲ್ಲಿನ ಅವ್ಯವಸ್ಥೆಯಿಂದಾಗಿ ಜನರಿಗೆ ಶುದ್ಧ ಕುಡಿಯುವ ನೀರು ಮರೀಚಿಕೆಯಾಗಿದೆ. ಇಪ್ಪತ್ತೈದು ವರ್ಷದ ಹಿಂದೆ ಆಗಿನ ಶಾಸಕ ವೈ.ಕೆ. ರಾಮಯ್ಯ ಅವರ ಪರಿಶ್ರಮದ ಫಲವಾಗಿ, ರಾಜೀವ್ ಗಾಂಧಿ ಕುಡಿಯುವ ನೀರಿನ ಯೋಜನೆಯಡಿ 2.50 ಕೋಟಿ ವೆಚ್ಚದಲ್ಲಿ ಶಿಂಷಾ ಕೊಳ್ಳದಿಂದ ನೀರನ್ನು ಪಡೆದು, ಶುದ್ದೀಕರಣ ಘಟಕದಲ್ಲಿ ಶುದ್ದೀಕರಿಸಿ ಹುಲಿಯೂರುದುರ್ಗ ಹೋಬಳಿ ಕೇಂದ್ರಕ್ಕೆ ಪೈಪ್ ಲೈನ್ ಮೂಲಕ ನೀರು ಸರಬರಾಜು ಮಾಡಲಾಗುತ್ತಿತ್ತು. ಈ




ಘಟಕ ಸ್ಥಾಪನೆಗೆ ಸ್ಥಳೀಯರು ವಂತಿಗೆ ನೀಡಿದ್ದು ವಿಶೇಷ. ಇದೀಗ ನೀರು ಶುದ್ದೀಕರಣಕ್ಕೆ ಅಗತ್ಯವಾಗಿರುವ ಮರಳು ದೊರೆಯದೆ, ಘಟಕದಲ್ಲಿ ಹಳೆ ಮರಳು ನೀರಿನಲ್ಲಿ ಬೆರೆತು ದಪ್ಪ ಪದರ ನಿರ್ಮಾಣವಾಗಿದೆ. ಶಿಂಷಾ ಕೊಳ್ಳದಲ್ಲೂ ನೀರಿನ ಲಭ್ಯತೆ ಕಡಿಮೆಯಾಗಿದ್ದು, ನೀರಿನ ಸಮಸ್ಯೆ ಜತೆಗೆ ಮರಳು ಇಲ್ಲದ ಕಾರಣ ಶುದ್ದೀಕರಣ ಸಮರ್ಪಕವಾಗಿ ನಡೆಯದಾಗಿದೆ. ಇದರಿಂದ ಜನರಿಗೆ ಅನಿವಾರ್ಯವಾಗಿ ಶುದ್ದೀಕರಿಸದ ನೀರನ್ನೇ ಪೂರೈಸಲಾಗುತ್ತಿದೆ ಎಂಬ ಆರೋಪ ಕೇಳಿಬಂದಿದೆ.

ಘಟಕದಲ್ಲಿರುವ 72 ಎಚ್.ಪಿ.ಮೋಟರ್‌ಗಳು ಆಗ್ಗಾಗ್ಗೆ ಕೆಟ್ಟು ಸಮಸ್ಯೆ ಆಗುತ್ತಿದೆ. 25 ವರ್ಷ ಹಳೆಯದಾದ ಪೈಪ್‌ಲೈನ್ ಮಾರ್ಗವೂ ಕೆಲವೆಡೆ ತುಕ್ಕು ಹಿಡಿದು ಸೋರಿಕೆಯಾಗುತ್ತಿದೆ ಎಂದು ಸ್ಥಳೀಯರು ದೂರಿದ್ದಾರೆ.

ಹುಲಿಯೂರುದುರ್ಗ ವ್ಯಾಪ್ತಿಯ 22 ಕೊಳವೆಬಾವಿಗಳಲ್ಲಿ ನೀರಿದ್ದರೂ, ಕುಡಿಯಲು ಯೋಗ್ಯವಾಗಿಲ್ಲ ಎಂದು ಪ್ರಮಾಣೀಕರಿಸಲಾಗಿದೆ. ಶುದ್ಧಕುಡಿಯುವ ನೀರಿನ ಘಟಕದಿಂದ ಶುದ್ದೀಕರಿಸದ ನೀರು ವಿತರಣೆಆಗುತ್ತಿದೆ. ಶಾಸಕರು ಶುದ್ಧ ಕುಡಿಯುವ ನೀರಿನ ಘಟಕದ ಪುನಃಶ್ಚೇತನಕ್ಕೆ ಹಾಗೂ ಶಿಂಷಾ ಕೊಳ್ಳದಲ್ಲಿನ ನೀರಿನ ಕೊರತೆ ನೀಗಿಸಲು ಮಾರ್ಕೋನಹಳ್ಳಿ ಜಲಾಶಯದಿಂದ ನೀರನ್ನು ಹರಿಸಲು ಕ್ರಮ ತೆಗೆದುಕೊಳ್ಳಬೇಕಿದೆ' ಎಂದು ಗ್ರಾಮ ಪಂಚಾಯಿತಿ ಮಾಜಿ ಸದಸ್ಯ ಎಚ್.ಎನ್.ನಟರಾಜು ಅಗ್ರಹಿಸಿದ್ದಾರೆ.

## ಕೊಣಸೂರಿನಲ್ಲಿ 12ನೇ ಅಂತರರಾಷ್ಟ್ರೀಯ ಯೋಗ ದಿನಾಚರಣೆ ಪ್ರಯುಕ್ತ ಯೋಗ ತಾಲೀಮು

• ಉದಯವಾಹಿನಿ , ಬೆಟ್ಟದಪುರ

ಕೊಣಸೂರಿನ ಆಯುಷ್ ಆರೋಗ್ಯ ಮಂದಿರದಿಂದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಆವರಣದಲ್ಲಿ 12ನೇ ಅಂತರರಾಷ್ಟ್ರೀಯ ಯೋಗ ದಿನಾಚರಣೆ ಪ್ರಯುಕ್ತ ಯೋಗ ತಾಲೀಮು ಹಮ್ಮಿಕೊಳ್ಳಲಾಗಿತ್ತು. ಯೋಗ ತರಬೇತುದಾರರಾದ ಆಶಾಮಹದೇವ ಮಾತನಾಡಿ, ಯೋಗ 365 ದಿನಗಳೂ ನಮ್ಮ ದಿನಚರಿಯಲ್ಲಿ ಅಳವಡಿಸಿಕೊಳ್ಳಬೇಕು. ಪ್ರತಿದಿನ ಯೋಗಾಭ್ಯಾಸ ಮಾಡುವುದರಿಂದ ದೈಹಿಕ ಹಾಗೂ ಮಾನಸಿಕ ಆರೋಗ್ಯ ಉತ್ತಮವಾಗಿದ್ದು, ಔಷಧಿ ಮುಕ್ತ ಜೀವನ ನಡೆಸಲು ಸಹಕಾರಿಯಾಗುತ್ತದೆ ಎಂದು ತಿಳಿಸಿದರು. ಮುಖ್ಯಶಿಕ್ಷಕಿ ಮಂಜುಳಾ ಮಾತನಾಡಿ, ಆಯುಷ್ ಇಲಾಖೆಯಿಂದ ನಡೆಸಲಾಗುತ್ತಿರುವ ಯೋಗ ತರಬೇತಿ ಶಾಲಾ ಮಕ್ಕಳಿಗೆ ಉಪಯುಕ್ತವಾಗಿದೆ. ಸಾರ್ವಜನಿಕರಲ್ಲಿಯೂ ಯೋಗದ ಬಗ್ಗೆ ಅರಿವು ಮೂಡಿಸಲು ಇಲಾಖೆ ಉತ್ತಮ ಕಾರ್ಯ ಮಾಡುತ್ತಿದೆ ಎಂದರು.

## ಗುಂಡ್ಲುಪೇಟೆಯಲ್ಲಿ ಅದ್ದೂರಿ ಬಸವ ಜಯಂತಿ ಉತ್ಸವಕ್ಕೆ ಚಾಲನೆ

• ಉದಯವಾಹಿನಿ, ಗುಂಡ್ಲುಪೇಟೆ

ಪಟ್ಟಣದಲ್ಲಿ ವಿಜೃಂಭಣೆಯಿಂದ ನಡೆದ ಗುಂಡ್ಲುಪೇಟೆ ಬಸವ ಜಯಂತಿ ಉತ್ಸವಕ್ಕೆ ತಾಲ್ಲೂಕಿನ ವಿವಿಧ ಮಠಾಧೀಶರು ಹಾಗೂ ಶಾಸಕ ಎಚ್.ಎಂ.ಗಣೇಶಪ್ರಸಾದ್ ಮತ್ತು ಮಾಜಿ ಶಾಸಕ ಸಿ.ಎಸ್.ನಿರಂಜನ್‌ಕುಮಾರ್ ಚಾಲನೆ ನೀಡಿದರು. ಅಖಿಲ ವೀರಶೈವ-ಲಿಂಗಾಯತ ಮಹಾಸಭಾ ತಾಲ್ಲೂಕು ಮತ್ತು ಯುವ ಘಟಕ ಸೇರಿದಂತೆ ವಿವಿಧ ವೀರಶೈವ ಲಿಂಗಾಯತ ಸಂಘಟನೆಯಿಂದ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ರಾಷ್ಟ್ರೀಯ ಹೆದ್ದಾರಿ 766, ಇತರೆ ಸಂಪರ್ಕ ರಸ್ತೆಗಳಲ್ಲಿ ಬಸವೇಶ್ವರ ಭಾವಚಿತ್ರವುಳ್ಳ ಮಹಾದ್ವಾರ ಮತ್ತು ಸ್ವಾಗತ. ಕಮಾನು ನಿರ್ಮಿಸಲಾಗಿತ್ತು. ರಸ್ತೆ ವಿಭಜಕಗಳಿಗೆ ಕೇಸರಿ ತೋರಣ ಮತ್ತು ಬಸವೇಶ್ವರ




ದೊಡ್ಡ ಕಟೌಟ್ ಕಟ್ಟಲಾಗಿತ್ತು. ಆಯಕಟ್ಟಿನ ಸ್ಥಳಗಳಲ್ಲಿ ಬಸವೇಶ್ವರರು ಮತ್ತು ಸಿದ್ದಗಂಗಾ ಶಿವಕುಮಾರ ಸ್ವಾಮೀಜಿ ದೀಪಾಲಂಕಾರದ ಕಟೌಟ್ ಅಳವಡಿಸಲಾಗಿತ್ತು. ಪ್ರಮುಖ ರಸ್ತೆಗಳಲ್ಲಿ ವಿದ್ಯುತ್ ದೀಪಗಳನ್ನು ಹಾಕಲಾಗಿತ್ತು.

ಜನಪ್ರತಿನಿಧಿಗಳು, ವಿವಿಧ ಸಂಘ ಸಂಸ್ಥೆಗಳ ಪದಾಧಿಕಾರಿಗಳು ಬಸವೇಶ್ವರ ಪುತ್ಥಳಿಗೆ ಮತ್ತು ಅಶ್ವರೂಢ ಬಸವೇಶ್ವರ ಪ್ರತಿಮೆಗೆ ಪುಷ್ಪಾರ್ಚನೆ ಮಾಡಿದರು. ದೇವರ ಬಸವ, ಅಲಂಕೃತಗೊಂಡ ಹಳ್ಳಿಕಾರ್ ಜೋಡೆತ್ತು, ನಂದಿಧ್ವಜ, ವೀರಭದ್ರ ಕುಣಿತ, ಡೊಳ್ಳು ಕುಣಿತ, ಕೇರಳದ ಚೆಂಡೆ ಮೇಳ, ನಗಾರಿ, ಮಂಗಳವಾದ್ಯ, ಕಂಸಾಳೆ ಇತರೆ ಕಲಾ ತಂಡಗಳೊಂದಿಗೆ ಮೆರವಣಿಗೆ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಸಾಗಿತು. ಬಸವೇಶ್ವರ ಭಾವಚಿತ್ರ ಮೆರವಣಿಗೆ ಮುಂದೆ ಸಾಗಿದ ಡಿಜೆ ವಾಹನದ ಮುಂದೆ ಯುವ ಸಮುದಾಯ ಕುಣಿದು ಕುಪ್ಪಳಿಸಿದರು. ಎಎಸ್‌ಪಿ ಶಶಿಧರ್, ಡಿಎಸ್‌ಪಿ ಸ್ನೇಹರಾಜ್ ನೇತೃತ್ವದಲ್ಲಿ ಬಂದೋಬಸ್ತ್ ಮಾಡಲಾಗಿತ್ತು. ಪಟ್ಟಣದ ಸೋಮೇಶ್ವರ ವಿದ್ಯಾರ್ಥಿ ನಿಲಯದ ಆವರಣದಲ್ಲಿ ಪ್ರಸಾದದ ವ್ಯವಸ್ಥೆ ಮಾಡಲಾಗಿತ್ತು.

ಮೂಡ್ಲುಪುರ ನಂದೀಶ್, ತಾಲ್ಲೂಕು ಘಟಕದ ಅಧ್ಯಕ್ಷ ಕೊಡಸೋಗೆ ಶಿವಪ್ರಸಾದ್ (ರಾಜು), ಮಾಜಿ ಅಧ್ಯಕ್ಷ ಎಚ್.ಎಸ್.ನಂಜಪ್ಪ, ಕಮರಹಳ್ಳಿ ರವಿ, ಯುವ ಘಟಕದ ರಾಜ್ಯ ಕಾರ್ಯದರ್ಶಿ ಹಂಗಳ ಪ್ರಣಯ್, ತಾಲ್ಲೂಕು ಯುವ ಘಟಕದ ಅಧ್ಯಕ್ಷ ಗುರುಪ್ರಸಾದ್ ವೀರನಪುರ ಭಾಗವಹಿಸಿದ್ದರು.

## ಎಸ್‌ಎನ್‌ಆರ್ ವೃತ್ತದಲ್ಲಿ ವೇಗ ನಿಯಂತ್ರಕ ರಸ್ತೆ ಉಬ್ಬುಗಳ ಅಳವಡಿಕೆಗೆ ಆಗ್ರಹ

• ಉದಯವಾಹಿನಿ, ಕೋಲಾರ

ನಗರದ ಎಸ್.ಎನ್.ಆರ್.(ಮಹಿಳಾ ಸಮಾಜ) ವೃತ್ತ ನಗರದ ಪ್ರಮುಖ ಬೃಹತ್ ವೃತ್ತವಾಗಿದ್ದು, ಮಹಿಳಾ ಸಮಾಜ ಶಾಲೆ ಮತ್ತು ಪ್ರವಾಸಿ ಮಂದಿರಗಳಿವೆ ಮತ್ತು ಚಿನ್ಮಯಾ ಶಾಲೆ, ಸಾಯಿ ಬಾಬಾ ಮಂದಿರ ಮತ್ತು ಕೋಲಾರ ರೈಲ್ವೇ ನಿಲ್ದಾಣಕ್ಕೂ ಈ ವೃತ್ತದ ಮುಖಾಂತರವೇ ಹಾದು ಹೋಗಬೇಕು ಹಾಗಾಗಿ ಈ ವೃತ್ತವು ಆರು ರಸ್ತೆಗಳ ಸಮಾಗಮ ದಿಂದ ಕೊಡಿರುವ ಹೆಚ್ಚು ಜನ ದಟ್ಟನೆ ಮತ್ತು ವಾಹನ ಸಂಚಾರವಿರುವ ವೃತ್ತವಾಗಿರುವುದರಿಂದ ವಾಹನ ವೇಗದ ನಿಯಂತ್ರಕ ರಸ್ತೆ ಉಬ್ಬುಗಳ ಅವಶ್ಯಕವಿದೆ. ಕನ್ನಡ ಪರ ಸಂಘಟನೆಗಳು, ಹಿರಿಯ ನಾಗರಿಕರು ಹಾಗೂ ಸಾಮಾಜಿಕ ಕಾರ್ಯಕರ್ತರು ಆಗ್ರಹಿಸಿದ್ದಾರೆ.

ಈ ರಸ್ತೆಯಲ್ಲಿ ಮಹಿಳಾ ಸಮಾಜ, ಚಿನ್ಮಯ ಶಾಲಾ ಮಕ್ಕಳು ಹಾಗೂ ಅವರ ಪೋಷಕರು ಶಾಲಾ ಸಿಬ್ಬಂದಿಗಳು , ಹಿರಿಯ ನಾಗರಿಕರು ಮತ್ತು ಆಸ್ಪತ್ರೆ, ವಿವಿಧ ಚಿಕಿತ್ಸಾಲಯಗಳಿಗೆ ಬರುವಂತಹ ರೋಗಿಗಳು ಮತ್ತು ಸಾಯಿಬಾಬಾ ಮಂದಿರ, ರೈಲ್ವೆ ನಿಲ್ದಾಣಕ್ಕೆ ಹೋಗುವವರು ಈ ವೃತ್ತವನ್ನೆ ಅವಲಂಭಿಸ ಬೇಕಾಗಿರುವುದು ಅನಿವಾರ್ಯವಾಗಿದೆ. ನಗರದ ಡೂಂ ಲೈಟ್ ವೃತ್ತದ ಕಡೆಯಿಂದ ಅತ್ಯಂತ ವೇಗವಾಗಿ ಬರುವ ಹಾಗೂ ಹೋಗುವ ವಾಹನಗಳಿಂದ ತಪ್ಪಿಸಿಕೊಂಡು ಸಂಚರಿಸುವುದು ತುಂಬಾ ದುಸ್ತರ ಹಾಗೂ ಅಪಾಯಕಾರಿಯಾಗಿದ್ದು ಜೀವವನ್ನು ಕೈಯಲ್ಲಿ ಹಿಡಿದು ಕೊಂಡು ಕಷ್ಟ ಪಟ್ಟು ವೃತ್ತವ ದಾಟುವಂತಾಗಿದೆ. ಆಸ್ಪತ್ರೆಗೆ ಬರುವ ರೋಗಿಗಳು, ಶಾಲಾ ವಿದ್ಯಾರ್ಥಿಗಳು, ಹಿರಿಯ ನಾಗರಿಕರು ಹಾಗೂ ಸಾರ್ವಜನಿಕರಿಗಾಗುತ್ತಿರುವ ತೊಂದರೆ ಮನಗಂಡು ಈ ಸಮಸ್ಯೆ ಬಗೆಹರಿಸಲು ಈ ವೃತ್ತದ ಹತ್ತಿರ ವಾಹನಗಳ ವೇಗ ನಿಯಂತ್ರಣಕ್ಕೆ ವೇಗ ನಿಯಂತ್ರಕ ಉಬ್ಬುಗಳ ಹಾಕಲು ಕ್ರಮ ಕೈಗೊಂಡು ಎಲ್ಲರ ಸುರಕ್ಷಿತ ಹಾಗೂ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಬೇಕಾಗಿದೆ ಎಂದು ಒತ್ತಾಯಿಸಿದ್ದಾರೆ.

## ಹೆದರಿ ಮನೆಯಲ್ಲಿ ಅವಿತು ಕುಳಿತ ರೌಡಿಶೀಟರ್; ಹಾರೆಯಿಂದ ಬಾಗಿಲು ಒಡೆದು ಆರೋಪಿ ವಶಕ್ಕೆ ಪಡೆದ ಪೊಲೀಸರು!

• ಉದಯವಾಹಿನಿ, ತುಮಕೂರು

ಪೊಲೀಸ್ ಬಂಧನಕ್ಕೆ ಹೆದರಿ ಮನೆಯಲ್ಲಿ ಅವಿತು ಕುಳಿತ ರೌಡಿಶೀಟರ್ ಒಬ್ಬ ಮನೆ ಬಾಗಿಲು ಹಾಕಿಕೊಂಡು ಹೈಡ್ರಾಮ ಮಾಡಿದ ಘಟನೆ ತುಮಕೂರಿನಲ್ಲಿ ನಡೆದಿದೆ. ಮನೆಯಲ್ಲಿ ಅಡಗಿ ಕುಳಿತ ಆರೋಪಿಯನ್ನು ಬಂಧಿಸಲು ಪೊಲೀಸರು, ಹಾರೆಯಿಂದ ಮನೆಯ ಬಾಗಿಲು ಒಡೆದು ರೌಡೀಶೀಟರ್ ನನ್ನು ವಶಕ್ಕೆ ಪಡೆದಿದ್ದಾರೆ. ತುಮಕೂರು ಜಿಲ್ಲೆ ಕುಣಿಗಲ್ ತಾಲ್ಲೂಕಿನ ಕಲ್ಲುಪಾಳ್ಯದಲ್ಲಿ ಈ ಘಟನೆ ನಡೆದಿದೆ.

ಕಲ್ಲುಪಾಳ್ಯ ಗ್ರಾಮದ ಸಾಯಿಕುಮಾರ್ ಕಲ್ಲುಪಾಳ್ಯ ಸುರೇಶ ಎಂಬಾತನೇ ಪೊಲೀಸರು ಬಂಧಿಸುತ್ತಾರೆ ಎಂದು ಹೆದರಿ ಮನೆಯಲ್ಲಿ ಅವಿತುಕುಳಿತ ರೌಡಿಶೀಟರ್ ಆಗಿದ್ದಾನೆ. ಮುನಿಯಪ್ಪನ ಪಾಳ್ಯ ಗ್ರಾಮದ ಸ್ನೇಹಿತ ರೌಡಿಶೀಟರ್ ಅಜಯ್ ಕುಮಾರ್‌ಗೆ ಬ್ಯಾಟ್‌ನಿಂದ ಹಲ್ಲೆ ಮಾಡಿದ್ದ ಆರೋಪ ಸುರೇಶ ಮೇಲೆ ಇದೆ. ತನ್ನ ಜೊತೆಗೆ ಸೇರುತ್ತಿಲ್ಲ, ಕರೆದರೂ ಬರುತ್ತಿಲ್ಲ ಎಂದು ಹುಡುಕಿಕೊಂಡು ಹೋಗಿ ಅಜಯ್ ಕುಮಾರ್ ಮೇಲೆ ಸುರೇಶ್ ಹಲ್ಲೆ ಮಾಡಿದ್ದ ಕೃಷಿ ವ್ಯವಸಾಯ




ಮಾಡಿಕೊಂಡು ಒಳ್ಳೆಯವನಾಗಿದ್ದೇನೆ ಬರಲ್ಲ ಎಂದು ಅಜಯ್ ಸ್ನೇಹಿತ ಸುರೇಶನಿಗೆ ಹೇಳಿದ್ದನಂತೆ. ಆದರೆ, ಈ ಮಾತು ಕೇಳದ ಸುರೇಶ್, ಅಜಯ್ ಹುಡುಕಿಕೊಂಡು ಹೋಗಿ ಟೀ ಅಂಗಡಿ ಬಳಿ ಟೀ ಕುಡಿಯುತ್ತಿದ್ದ ವೇಳೆ ಅಜಯ್ ಮೇಲೆ ಹಲ್ಲೆ ನಡೆಸಿದ್ದ. ಕಲ್ಲು ಪಾಳ್ಯ ಸುರೇಶ್ ಹಾಗೂ ಬೆಂಗಳೂರಿನ ಸಂತೋಷ್ ಸೇರಿಕೊಂಡು ಅಜಯ್ ಮೇಲೆ ಈ ಹಲ್ಲೆ ಮಾಡಿದ್ದರು ಎಂಬ ಆರೋಪ ಇದೆ.

ಇಬ್ಬರು ಹಲ್ಲೆ ಮಾಡುತ್ತಿದ್ದರಿಂದ ಅಜಯ್ ಅಲ್ಲಿಂದ ತಪ್ಪಿಸಿಕೊಂಡು ಓಡಿ ಹೋಗಿದ್ದ.

ಆದರೂ ಆತನನ್ನು ಬಿಡದ ಸುರೇಶ್ ಮತ್ತು ಸಂತೋಷ್ ಹಿಂಬಾಲಿಸಿಕೊಂಡು ಹೋಗಿ ಕೊಲೆಗೆ ಯತ್ನಿಸಿದ್ದರು ಎಂದು ಆರೋಪಿಸಲಾಗಿದೆ. ಹಲ್ಲೆಗೆ ಒಳಗಾಗಿದ್ದ ಅಜಯ್, ಸುರೇಶ್ ಹಾಗೂ ಸಂತೋಷ್ ವಿರುದ್ಧ ಕುಣಿಗಲ್ ಪೊಲೀಸ್ ಠಾಣೆಗೆ ದೂರು ನೀಡಿದ್ದ. ಅಜಯ್ ನೀಡಿದ ದೂರಿನ ಮೆರೆಗೆ ಕುಣಿಗಲ್ ಪೊಲೀಸರು ರೌಡೀಶೀಟರ್ ಸುರೇಶ್ ನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲು ಆತನ ಗ್ರಾಮಕ್ಕೆ ತೆರಳಿದ್ದರು.

ಪೊಲೀಸರ ತನಿಖೆಗೆ ಸ್ಪಂದಿಸದೇ ಮನೆ ಬಾಗಿಲು ಹಾಕಿಕೊಂಡು ರೌಡೀಶೀಟರ್ ಸುರೇಶ್ ಹೈಡ್ರಾಮ ಸೃಷ್ಟಿಸಿದ್ದ. ಬಾಗಿಲು ತೆಗೆದು ತನಿಖೆಗೆ ಸ್ಪಂದಿಸುವಂತೆ ಇನ್ಸ್‌ಪೆಕ್ಟರ್ ಮಾದ್ಯನಾಯಕ್ ಬುದ್ದಿ ಹೇಳಿದ್ದರು. ಆದರೆ, ಇದಕ್ಕೆ ಸ್ಪಂದಿಸದ ಆರೋಪಿ ಬಾಗಿಲು ತೆಗೆಯದೇ ಹೈಡ್ರಾಮ ಸೃಷ್ಟಿಸಿದ್ದ.

ಮನೆಯ ಒಳಗೆ ಇದ್ದು ಮಧ್ಯರಾತ್ರಿ 12 ರವರೆಗೆ ಪೊಲೀಸರಿಗೆ ಸತಾಯಿಸಿದ್ದ. ಪೊಲೀಸರ ವಿರುದ್ಧವೇ ವಿಡಿಯೋ ಹೇಳಿಕೆ ದಾಖಲು ಮಾಡಿಕೊಂಡು ಬಾಗಿಲು ತೆಗೆಯದೇ ಮೊಂಡಾಟ ಪ್ರದರ್ಶನ ಮಾಡಿದ್ದ.

ರೌಡೀಶೀಟರ್ ಸುರೇಶನ ಈ ವರ್ತನೆಯಿಂದ ಬೇಸತ್ತ ಪೊಲೀಸರು, ಕೊನೆಗೆ ಹಾರೆಯಿಂದ ಬಾಗಿಲು ಮುರಿದು ರೌಡೀಶೀಟರ್ ಸುರೇಶನನ್ನು ವಶಕ್ಕೆ ಪಡೆದುಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ. ಕುಣಿಗಲ್ ಸರ್ಕಲ್ ಇನ್ಸ್‌ಪೆಕ್ಟರ್ ಮಾದ್ಯನಾಯಕ್ ನೇತೃತ್ವದಲ್ಲಿ ಈ ಕಾರ್ಯಾಚರಣೆ ನಡೆದಿದೆ. ಕೊಲೆ, ಸುಲಿಗೆ, ದರೋಡೆ ಸೇರಿದಂತೆ 32 ಕೇಸ್‌ಗಳು ಆರೋಪಿ ಕಲ್ಲುಪಾಳ್ಯ ಸುರೇಶ ಮೇಲೆ ದಾಖಲಾಗಿವೆ ಎಂದು ಪೊಲೀಸರು ತಿಳಿಸಿದ್ದಾರೆ. ಇದರಲ್ಲಿ ಇನ್ನೂ 10 ಕೇಸ್ ಬಾಕಿ ಇವೆ ಎಂದು ತಿಳಿದು ಬಂದಿದೆ. ಇಷ್ಟು ದಿನ ಬೆಂಗಳೂರಿನಲ್ಲಿದ್ದ ರೌಡೀಶೀಟರ್ ಕಲ್ಲುಪಾಳ್ಯ ಸುರೇಶ್, ಇದೀಗ ಗ್ರಾಮಕ್ಕೆ ಬಂದು ಗಲಾಟೆ ಮಾಡಿದ್ದರಿಂದ ಗ್ರಾಮಸ್ಥರು ಭಯ ಭೀತಗೊಂಡಿದ್ದರು.

# ಪೂರ್ವ ಮುಂಗಾರು ವಾಡಿಕೆಗಿಂತ ಕಡಿಮೆ ಮಳೆ

### ನೀರಿನ ಸಂಗ್ರಹ ತುಂಬಾ ಕಡಿಮೆ

**ಇಲ್ಲಿಯವರೆಗೆ ಕಡಿಮೆ ಮಳೆಯಾಗಿರುವ ಹಿನ್ನೆಲೆಯಲ್ಲಿ ತಾಲ್ಲೂಕು ವ್ಯಾಪ್ತಿಯ ಕೆ.ಆರ್. ಎಸ್ ಆಣೆಕಟ್ಟು ವ್ಯಾಪ್ತಿಗೆ ಬರುವ ಕೆಲವು ಕೆರೆಗಳಲ್ಲಿ ನೀರಿನ ಸಂಗ್ರಹ ಸಮಾಧಾನಪಡುವಂತಿದ್ದರೂ ಬಹುತೇಕ ಮಳೆಯಾಶ್ರಿತ ಪ್ರದೇಶಗಳ ವ್ಯಾಪ್ತಿಯ ಕೆರೆ, ಕಟ್ಟೆಗಳಲ್ಲಿ ನೀರಿನ ಸಂಗ್ರಹ ತುಂಬಾ ಕಡಿಮೆಯಾಗಿದೆ.**



• ಉದಯವಾಹಿನಿ, ಮದ್ದೂರು

ತಾಲ್ಲೂಕಿನ ವ್ಯಾಪ್ತಿಯಲ್ಲಿ ಈ ಸಾಲಿನ ಪೂರ್ವ ಮುಂಗಾರು ವಾಡಿಕೆಗಿಂತ ಕಡಿಮೆಯಾಗಿದ್ದು, ಮಳೆಆಶ್ರಿತ ಪ್ರದೇಶಗಳಲ್ಲಿ ಬೆಳೆಗಳು ಒಣಗುತ್ತಿದ್ದು, ಇಳುವರಿ ಕುಂಠಿತವಾಗುವ ಪರಿಸ್ಥಿತಿ ನಿರ್ಮಾಣವಾಗಿದೆ. ಏಪ್ರಿಲ್‌ನಿಂದ ಜೂನ್ 10ರವರೆಗಿನ ಅವಧಿಯ ಪೂರ್ವ ಮುಂಗಾರುವಿನಲ್ಲಿ ಮದ್ದೂರು ತಾಲ್ಲೂಕು ವ್ಯಾಪ್ತಿಯಲ್ಲಿ ವಾಡಿಕೆಯ ಪ್ರಕಾರ 207 ಮಿ.ಮೀ ಮಳೆಯಾಗಬೇಕಿತ್ತು. ಆದರೆ, 183 ಮಿ.ಮೀ ಮಳೆಯಾಗುವ ಮೂಲಕ ವಾಡಿಕೆಗಿಂತ 24 ಮಿ.ಮೀ ಕಡಿಮೆ ಮಳೆಯಾಗಿದೆ ಎಂದು ಕೃಷಿ ಇಲಾಖೆಯ ತಾಲ್ಲೂಕು ತಾಂತ್ರಿಕ ವ್ಯವಸ್ಥಾಪಕ ಗವಾಸ್ಕರ್ ಮಾಹಿತಿ ನೀಡಿದ್ದಾರೆ.

ಪೂರ್ವ ಮುಂಗಾರುವಿನಲ್ಲಿ ರೈತರು ವಾಡಿಕೆಯಂತೆ ಬೆಳೆಯುವ ಪ್ರಮುಖ ಬೆಳೆಗಳಾದ ಅಲಸಂದೆಯನ್ನು 530 ಹೆಕ್ಟೇರ್ ಪೈಕಿ 483 ಹೆಕ್ಟೇರ್‌ನಲ್ಲಿ ಬಿತ್ತನೆ ಮಾಡಿದ್ದು, ಹೆಸರುಕಾಳು ಬೆಳೆಯನ್ನು 30 ಹೆಕ್ಟೇರ್ ಪೈಕಿ 18 ಹೆಕ್ಟೇರ್ ನಲ್ಲಿ ಹಾಗೂ ಉದ್ದು ಬೆಳೆಯನ್ನು 30 ಹೆಕ್ಟೇರ್ ಪೈಕಿ 18 ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆ ಮಾಡಿದ್ದಾರೆ.




### ಕಳೆದ ವರ್ಷಕ್ಕೆ ಹೋಲಿಸಿದರೆ ಕಡಿಮೆ

ಪೂರ್ವ ಮುಂಗಾರು ಹಾಗೂ ದುರ್ಬಲ ಮುಂಗಾರು ಪರಿಣಾಮ ತಾಲ್ಲೂಕಿನ ಜಲಾಶಯಗಳ ಮೇಲೂ ಉಂಟಾಗಿದ್ದು, ಡ್ಯಾಂಗಳಲ್ಲಿ ಒಟ್ಟು ಸಾಮರ್ಥ್ಯದ ಶೇ.23ರಷ್ಟು ಮಾತ್ರ ನೀರಿದೆ. ಎಲ್ಲಾ ಜಲಾಶಯಗಳಲ್ಲಿ 206.45 ಟಿಎಂಸಿ ನೀರು ಸಂಗ್ರಹವಾಗಿದೆ. ಆದರೆ, ಕಳೆದ ವರ್ಷ ಜೂ.15ರಂದು 349 ಟಿಎಂಸಿ ನೀರು ಸಂಗ್ರಹವಾಗಿತ್ತು. ಜಲಾಶಯಗಳಲ್ಲಿ ನೀರಿನ ಪ್ರಮಾಣ ಕಡಿಮೆ ಇರುವುದರಿಂದ ಬೇಸಿಗೆ ಕಾಲದ ಕುಡಿಯುವ ನೀರಿನ ನಿರ್ವಹಣೆ ಬಗ್ಗೆ ಆತಂಕ ಉಂಟಾಗಿದೆ. ಕಳೆದ ವರ್ಷಕ್ಕೆ ಹೋಲಿಸಿದರೆ ಕಡಿಮೆ ಇದೆ.

> **ಅಷ್ಟೇ ಅಲ್ಲದೇ ಮಳೆಯಾಶ್ರಿತ ಪ್ರದೇಶಗಳು ಹೆಚ್ಚಾಗಿರುವ ತಾಲ್ಲೂಕಿನ ಆತಗೂರು ಹೋಬಳಿ, ಕೊಪ್ಪ ಹೋಬಳಿ ಸೇರಿದಂತೆ ಚಿಕ್ಕರಸಿನಕೆರೆ ಹೋಬಳಿಗಳ ಕೆಲವೆಡೆ ಮಳೆಯನ್ನೇ ನಂಬಿಕೊಂಡು ಬೆಳೆಯಲಾದ ಬೆಳೆಗಳು ಅದರಲ್ಲೂ ದ್ವಿದಳ ಧಾನ್ಯ ಬೆಳೆಗಳು ಅಲ್ಲಲ್ಲಿ ಒಣಗುತ್ತಿವೆ. ಮಳೆಯ ಪರಿಸ್ಥಿತಿ ಹೀಗೆಯೇ ಮುಂದುವರಿದರೆ ತಾಲ್ಲೂಕಿನ ವ್ಯಾಪ್ತಿಯಲ್ಲಿ ಸುಮಾರು 20ರಿಂದ 25ರಷ್ಟು ಬೆಳೆಯು ಕಡಿಮೆಯಾಗುವ ಸಂಭವ ಉಂಟಾಗಬಹುದು ಎಂದು ಕೃಷಿ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.**

## ಬಾಳೆ ತೋಟದಲ್ಲಿ ಹುಲಿ ಪ್ರತ್ಯಕ್ಷ

• ಉದಯವಾಹಿನಿ, ಗುಂಡ್ಲುಪೇಟೆ




ತಾಲ್ಲೂಕಿನ ವಡೆಯನಪುರ ಗ್ರಾಮದ ರೈತರ ಜಮೀನಿನ ಬಾಳೆ ತೋಟದಲ್ಲಿ ಹುಲಿ ಪ್ರತ್ಯಕ್ಷವಾದ ಹಿನ್ನೆಲೆ ಸ್ಥಳೀಯರು ಆತಂಕಕ್ಕೆ ಒಳಗಾಗಿದ್ದಾರೆ.

ಗ್ರಾಮದ ವಿಶ್ವಾಸ್ ಎಂಬವರ ಜಮೀನಿನಲ್ಲಿ ಕೂಲಿ ಕಾರ್ಮಿಕರಿಗೆ ಕಾಣಿಸಿಕೊಂಡಿರುವ ವ್ಯಾಘ್ರ, ಭಯಭೀತಿಗೊಳಿಸಿದೆ.

**ಸಿಬ್ಬಂದಿ ಎದುರೇ ರಸ್ತೆ ದಾಟಿದ ವ್ಯಾಘ್ರ :** ಹಾಡಹಗಲೇ ಹುಲಿ ಕಾಣಿಸಿಕೊಂಡ ಹಿನ್ನೆಲೆ ಅರಣ್ಯ ಇಲಾಖೆಯ ಅಧಿಕಾರಿಗಳಿಗೆ ಮಾಹಿತಿ ನೀಡಿದ ಬೆನ್ನಲ್ಲೇ ಸ್ಥಳಕ್ಕಾಗಮಿಸಿದ ಸಿಬ್ಬಂದಿ ಕಣ್ಣೆದುರಲ್ಲೇ ರಸ್ತೆ ದಾಟಿ ಮುಂದೆ ಸಾಗಿರುವುದು ಮತ್ತಷ್ಟು ಆತಂಕಕ್ಕೆ ಎಡೆಮಾಡಿಕೊಟ್ಟಿದೆ. ಹುಲಿಯ ಚಲನವಲನದ ಮೇಲೆ ನಿಗಾವಹಿಸಲು ಮುಂದಾಗಿರುವ ಬಫರ್ ವಲಯದ ಅಧಿಕಾರಿಗಳು ಕ್ಯಾಮೆರಾ ಅಳವಡಿಸಿದ್ದು ತುಮಕೂರು ಮಾದರಿಯ ಪಂಜರವನ್ನಿರಿಸಿರುವ ಸಿಬ್ಬಂದಿ ಬೋನಿನೊಳಗೆ ಯಾವುದೇ ಪ್ರಾಣಿಯನ್ನ ಇರಿಸದಿರವುದು ರೈತರ ಆಕ್ರೋಶಕ್ಕೆ ಕಾರಣವಾಗಿದೆ. ಬೇಸತ್ತ ಗ್ರಾಮಸ್ಥರು ಕಳೆದ ಕೆಲ ದಿನಗಳ ಹಿಂದೆ ಸಿಬ್ಬಂದಿಗಳನ್ನೇ ಬೋನಿನಲ್ಲಿ ಕೂಡಿಟ್ಟು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದರು, ಯಾವುದೇ ಗೊಂದಲಗಳಿಗೆ ಎಡೆ ಮಾಡಿಕೊಡದೆ ಹುಲಿ ಸೆರೆಗೆ ಮುಂದಾಗಬೇಕು ಎಂದು ಮುಖಂಡರು ಆಗ್ರಹಿಸಿದ್ದಾರೆ.

ಅಂತರಾಳದಿಂದ..
EDITORIAL

# ಬರ ಭೀತಿ: ಆಡಳಿತ ವ್ಯವಸ್ಥೆ ರೈತರ ನೆರವಿಗೆ ಧಾವಿಸಲಿ



ಪ್ರಸಕ್ತ ಸಾಲಿನ ಮುಂಗಾರು ಋತುವಿನ ಮೇಲೆ ಎಲ್ ನಿನೋ ನಿರೀಕ್ಷೆಗೂ ಮುನ್ನವೇ ಪರಿಣಾಮ ಬೀರಲಾರಂಭಿಸಿದ್ದು ದೇಶಾದ್ಯಂತ ನೈಋತ್ಯ ಮಾರುತಗಳ ಚಲನೆಯನ್ನು ದುರ್ಬಲಗೊಳಿಸಿದೆ. ಇದರ ಪರಿಣಾಮ ಈಗಾಗಲೇ ದೇಶಾದ್ಯಂತ ವಾಡಿಕೆಗಿಂತ ಶೇ. 64ರಷ್ಟು ಮಳೆ ಕೊರತೆಯಾಗಿದೆ. ಕರ್ನಾಟಕ ಸಹಿತ ದೇಶದ 12 ರಾಜ್ಯಗಳ 326 ಜಿಲ್ಲೆಗಳಲ್ಲಿ ಮಳೆ ಕೊರತೆಯಾಗಲಿದೆ ಎಂದು ಹವಾಮಾನ ಇಲಾಖೆ ಹೊಸದಾಗಿ ಮುನ್ಸೂಚನೆ ನೀಡಿದೆ. ಕಳೆದೊಂದು ವಾರದಿಂದೀಚೆಗೆ ರಾಜ್ಯದ ಕರಾವಳಿ ಮತ್ತು ಒಳನಾಡು ಸಹಿತ ಬಹುತೇಕ ಎಲ್ಲೆಡೆ ಮಳೆಯ ತೀವ್ರತೆ ಕಡಿಮೆಯಾಗಿದ್ದು ರೈತಾಪಿ ವರ್ಗವನ್ನು ಆತಂಕಕ್ಕೀಡುಮಾಡಿದೆ.

ನೈಋತ್ಯ ಮಾರುತಗಳು ದೇಶದ ಪಶ್ಚಿಮ ಕರಾವಳಿಯನ್ನು ಪ್ರವೇಶಿಸಿ 10 ದಿನಗಳು ಕಳೆದರೂ ನಿರೀಕ್ಷಿತ ತೀವ್ರತೆ ಪಡೆದುಕೊಂಡಿಲ್ಲ. ಅಷ್ಟು ಮಾತ್ರವಲ್ಲದೆ ರಾಜ್ಯದ ಹಲವೆಡೆ ಈವರೆಗೆ ವಾಡಿಕೆಯಷ್ಟು ಮಳೆಯಾಗದಿರುವುದರಿಂದ ಕೃಷಿ ಚಟುವಟಿಕೆಗಳು ಇನ್ನೂ ವೇಗ ಪಡೆದುಕೊಂಡಿಲ್ಲ. ಮುಂಗಾರು ಹಂಗಾಮಿನಲ್ಲಿ ಬೆಳೆಯಲಾಗುವ ಎಲ್ಲಾ ಕೃಷಿ ಬೆಳೆಗಳೂ ಮಳೆಯನ್ನೇ ಅವಲಂಬಿಸಿರುವುದರಿಂದ ಮಳೆಯ ಅನಿಶ್ಚಿತತೆ ರೈತರಲ್ಲಿ ನಿರಾಸೆ ಮೂಡಿಸಿದೆ. ಜೂನ್ 20ರ ಬಳಿಕ ನೈಋತ್ಯ ಮಾರುತಗಳ ಮುನ್ನಡೆಗೆ ಪೂರಕವಾದ ವಾತಾವರಣ ಸೃಷ್ಟಿಯಾಗಲಿದೆ ಎಂದು ಹವಾಮಾನ ತಜ್ಞರು ಅಂದಾಜಿಸಿರುವರಾದರೂ ಉಪಗ್ರಹಗಳು ರವಾನಿಸಿರುವ ಛಾಯಾಚಿತ್ರಗಳಲ್ಲಿ ದಟ್ಟ ಮೋಡದ ದೃಶ್ಯಗಳೇ ಕಂಡುಬರದಿರುವುದರಿಂದ ಆ ಬಗ್ಗೆ ಅಸ್ಪಷ್ಟತೆ ಇದೆ.

ಈ ಮಾಸಾಂತ್ಯದೊಳಗಾಗಿ ಉತ್ತಮ ಮಳೆಯಾಗದಿದ್ದಲ್ಲಿ ನಗರ ಪ್ರದೇಶಗಳಿಗೆ ನೀರಿನ ಅಭಾವ ಕಾಡುವ ಸಾಧ್ಯತೆ ಇಲ್ಲದಿಲ್ಲ. ಸಂಭಾವ್ಯ ಬರ ಪರಿಸ್ಥಿತಿಯನ್ನು ಎದುರಿಸುವ ನಿಟ್ಟಿನಲ್ಲಿ ರಾಜ್ಯ ಸರಕಾರ ತುರ್ತು ಗಮನ ಹರಿಸುವ ಅಗತ್ಯವಿದೆ. ಅಧಿಕಾರ ಕಿತ್ತಾಟ, ರಾಜಕೀಯ ಕಚ್ಚಾಟಗಳಿಂದ ಹೊರಬಂದು ರಾಜ್ಯದ ರೈತರ ನೆರವಿಗೆ ಧಾವಿಸಬೇಕು.

## ನೀರಿನ ಸಂಗ್ರಹ ಪ್ರಮಾಣ ದಿನೇದಿನೆ ಇಳಿಕೆ

ರಾಜ್ಯದಲ್ಲಿ ಈವರೆಗೆ ಅಲ್ಪ ಪ್ರಮಾಣದಲ್ಲಿ ಮಳೆಯಾಗಿದ್ದರೂ ರೈತರನ್ನು ನೀರಿನ ಕೊರತೆ ಬಾಧಿಸಲಾರಂಭಿಸಿದೆ. ರಾಜ್ಯದ ಹಲವೆಡೆ ರೈತರು ಇನ್ನೂ ಬೇಸಾಯ ಕಾರ್ಯದಲ್ಲಿ ತೊಡಗಿಕೊಂಡಿಲ್ಲವಾದರೆ ಮತ್ತೆ ಕೆಲವೆಡೆ ಮಳೆಯ ಕಣ್ಣಾಮುಚ್ಚಾಲೆಯಾಟದಿಂದಾಗಿ ಆಮೆಗತಿಯಲ್ಲಿದೆ. ಇದೇ ವೇಳೆ ರಾಜ್ಯದ ಜಲಾಶಯಗಳಲ್ಲಿನ ನೀರಿನ ಸಂಗ್ರಹ ಪ್ರಮಾಣ ದಿನೇದಿನೆ ಇಳಿಕೆಯಾಗುತ್ತಲೇ ಇದೆ.

ಆಗೊಮ್ಮೆ ಈಗೊಮ್ಮೆ ಎಂದು ಮಳೆ ಸುರಿದರೂ ಜಲಾಶಯಗಳಿಗೆ ಹರಿದು ಬರುತ್ತಿರುವ ನೀರಿನ ಪ್ರಮಾಣದಲ್ಲಿ ಯಾವುದೇ ಏರಿಕೆಯಾಗಿಲ್ಲ.

ಮಳೆ ಕೊರತೆಗೆ ಸಂಬಂಧಿಸಿದಂತೆ ಜನತೆಗೆ ಅದರಲ್ಲೂ ರೈತಾಪಿ ವರ್ಗಕ್ಕೆ ನಿಖರ ಮಾಹಿತಿ ನೀಡುವುದರ ಜತೆಯಲ್ಲಿ ಹೆಚ್ಚು ನೀರು ಬಯಸುವ ಸಾಂಪ್ರದಾಯಿಕ ಬೆಳೆಗಳಿಂದ ಹಿಂದೆ ಸರಿದು, ಲಭ್ಯವಿರುವ ನೀರನ್ನು ಬಳಸಿಕೊಂಡು ಪರ್ಯಾಯ ಬೆಳೆಗಳ ಕುರಿತಂತೆ ರೈತರಲ್ಲಿ ಅರಿವು ಮೂಡಿಸಬೇಕು.

ಜತೆಯಲ್ಲಿ ತೀವ್ರತೆರನಾದ ಬರ ತಲೆದೋರುವ ಲಕ್ಷಣಗಳು ಕಾಣಿಸಿಕೊಂಡದ್ದೇ ಆದಲ್ಲಿ ಕುಡಿಯುವ ನೀರಿನ ಅಭಾವ ತಲೆದೋರದಂತೆ ಜಲಾಶಯಗಳು ಮತ್ತು ಜಲಮೂಲಗಳಲ್ಲಿ ಸಾಕಷ್ಟು ಪ್ರಮಾಣದಲ್ಲಿ ನೀರಿನ ಸಂಗ್ರಹವನ್ನು ಖಾತರಿಪಡಿಸಿಕೊಳ್ಳಲು ಮಳೆಕೊಯ್ಲಿಗೆ ಒತ್ತು ನೀಡಬೇಕು.

ರೈತರಿಗೆ ಅಗತ್ಯವಿರುವ ಬಿತ್ತನೆ ಬೀಜ, ರಸಗೊಬ್ಬರ, ಆಹಾರ ಪದಾರ್ಥಗಳ ಸಹಿತ ಕೃಷ್ಯುತ್ಪನ್ನಗಳ ದಾಸ್ತಾನಿಗೆ ಸಮರ್ಪಕ ವ್ಯವಸ್ಥೆ, ಬೆಳೆ ನಷ್ಟ ಪರಿಹಾರ, ಜಾನುವಾರುಗಳಿಗೆ ಮೇವಿನ ದಾಸ್ತಾನು ಮತ್ತಿತರ ಸಿದ್ಧತೆಗಳನ್ನು ಮಾಡಿಕೊಳ್ಳುವ ನಿಟ್ಟಿನಲ್ಲಿ ಸರಕಾರ ಕಾರ್ಯೋನ್ಮುಖವಾಗಬೇಕು. ಕೇಂದ್ರ ಕೃಷಿ ಸಚಿವಾಲಯವು ಬರ ಸಂಭವನೀಯ ರಾಜ್ಯಗಳಿಗೆ ಪರಿಸ್ಥಿತಿಯನ್ನು ಎದುರಿಸಲು ಅಗತ್ಯ ಮುನ್ನೆಚ್ಚರಿಕೆ ಕ್ರಮಗಳು ಮತ್ತು ಪರ್ಯಾಯ ಮಾರ್ಗೋಪಾಯಗಳನ್ನು ಕಂಡುಕೊಳ್ಳುವಂತೆ ನೀಡಿರುವ ನಿರ್ದೇಶನವನ್ನು ರಾಜ್ಯ ಸರಕಾರ ಗಂಭೀರವಾಗಿ ಪರಿಗಣಿಸಬೇಕು. ಮುಂಗಾರು ಕುರಿತಾಗಿನ ಅನಿಶ್ಚಿತತೆಗಳೇನೇ ಇರಲಿ, ಸರಕಾರ ಮತ್ತು ಆಡಳಿತ ಯಂತ್ರ ಈಗಲೇ ಎಚ್ಚೆತ್ತುಕೊಂಡು ಸಂಭಾವ್ಯ ಪರಿಸ್ಥಿತಿಯನ್ನು ಎದುರಿಸಲು ಸನ್ನದ್ಧಗೊಳ್ಳಬೇಕಿರುವುದು ಈಗಿನ ತುರ್ತು.




• ಹಿಂದಿನ ಸಂಚಿಕೆಯಿಂದ 121ನೆಯ ಅಧ್ಯಾಯ

ಭುಜಬಲನೆಂಬ ಗರ್ವದಿಂದ ಕೈಗಳನ್ನು ಗಾಣದಲ್ಲಿಡುವವರುಂಟೇ ಇಂದ್ರನ ಮಗ ವಾಲಿಯೂ ಪ್ರಚಂಡಬಲ, ಅವನನ್ನು ಒಂದೇ ಬಾಣದಿಂದ ಇಲ್ಲವಾಗಿಸಿದವನನ್ನು ಯುದ್ಧದಲ್ಲಿ ಎದುರಿಸಿದವರುಂಟೇ ಗಂಡುಗಲಿಗಳಾದ ರಾಮಲಕ್ಷ್ಮಣರ ಉದ್ದಂಡಶರಗಳ ಮುಂದೆ ಯಾವನು ತಾನೇ ನಿಲ್ಲಬಲ್ಲನೆಂಬುದನ್ನು ತಿಳಿಯದೆ ನೀನು ಕೇಡನ್ನು ತಂದುಕೊಳ್ಳುತ್ತಿದ್ದೀಯೆ. ಹರನ ಕೃಪೆಯಿಂದ ಎಲ್ಲಾ ಸುಖಸಂಪದಗಳನ್ನೂ ಗಳಿಸಿದ ನೀನು ಸದ್ಬುದ್ಧಿಯನ್ನು ಮಾತ್ರ ಬಯಸಲಿಲ್ಲ. ರಾಘವನನ್ನು ಎದುರು ಹಾಕಿಕೊಂಡರೆ ನಿನ್ನನ್ನು ಕಾಪಾಡುವವರಾರು? ಎಷ್ಟೇ ತಪೋಬಲ ದೇವತಾಕೃಪೆಗಳಿದ್ದರೂ ಪರದಾರರತಿಯು ಹುಟ್ಟಿದಾಕ್ಷಣವೇ ಅವೆಲ್ಲ ತೊಲಗಿಹೋಗುತ್ತವೆ ದೀರ್ಘಾಯುಷ್ಯ ಸುಜ್ಞಾನ ಸಂಪತ್ತುಗಳೆಲ್ಲ ಕೆಟ್ಟುಹೋಗುವುವು ಎಂಬುದನ್ನು ಲೆಕ್ಕಿಸದೆ ಹೀಗೆ ಮಾಡಬಹುದೇ? ರಾಮನ ಸತಿಯನ್ನು ಕದ್ದು ತಂದಾಗಲೇ ನಿನ್ನ ವೀರತ್ವಕ್ಕೆ ಮಸಿ ಬಳಿದುಕೊಂಡುಬಿಟ್ಟೆ ಇನ್ನು ಮುಂದೆ ಭೂತಳದಲ್ಲಿ ನಿನ್ನನ್ನು ಯಾರು ತಾನೇ ಶೂರನೆಂದು ಕರೆಯುತ್ತಾರೆ? ಊರಲ್ಲಿ ಮೃತ್ಯುದೇವತೆಯನ್ನು ತಂದಿಟ್ಟುಕೊಂಡು ಕುಲನಾಶಕ್ಕೆ ಕೈಹಾಕಿದ್ದೀಯೆ. ಈಗಲಾದರೂ ಇದನ್ನೆಲ್ಲ ಅರಿತುಕೊಂಡು ಜಾನಕಿಯನ್ನು ಶ್ರೀರಾಮನಿಗೊಪ್ಪಿಸಿ ಕೃತಾರ್ಥನಾಗು. ರಾಮನನ್ನು ರಣರಂಗದಲ್ಲಿ ಎದುರಿಸುವೆನೆಂಬ ಭ್ರಮೆಯನ್ನು ಬಿಟ್ಟು ಪ್ರಾಣವನ್ನುಳಿಸಿಕೊಂಡು ಈ ಐಸಿರಿಯನ್ನು ಅನುಭವಿಸು. ಸುರ ನರ ಉರಗ ಯಕ್ಷ ಗಂಧರ್ವ ಕಿಂಪುರುಷರಿಂದ ಸಾವು ಬಾರದ ವರವನ್ನೇನಾದರೂ ಬ್ರಹ್ಮನಿಂದ ನೀನು ಪಡೆದಿದ್ದೀಯೇನು? ಹಾಗಿದ್ದರೂ ರಾಮನು ಇವರಾರೂ ಅಲ್ಲ, ಮನುಷ್ಯದೇಹದಿಂದ ಅವತರಿಸಿರುವ ಪರಬ್ರಹ್ಮನೇ ಆಗಿದ್ದಾನೆ ಎಂದು ತಿಳಿ. ಸೂರ್ಯವಂಶಲಲಾಮನು ಮುನಿಯಲು ಯಾರು ತಾನೇ ನಿನ್ನನ್ನು ಕಾಪಾಡಬಲ್ಲರು? ಅವನು ಏನು ಬೇಕಾದರೂ ಮಾಡಬಲ್ಲ ಸ್ವಾತಂತ್ರ್ಯಪುರುಷ. ಸುಗ್ರೀವನ ಆಜ್ಞೆಯಂತೆ ಈಗಾಗಲೇ ನಾನು ಕಡಲನ್ನು ದಾಟಿ ಇಲ್ಲಿಗೆ ಬಂದು ಇಷ್ಟೆಲ್ಲ ಮಾಡಿರುವುದನ್ನು ಕಂಡಾದರೂ ಎಚ್ಚರಗೊಂಡು ಸೀತೆಯನ್ನು ರಾಘವನಿಗೊಪ್ಪಿಸಿ ನಿನ್ನ ವಂಶವನ್ನುಳಿಸಿಕೋ. ರಾಮನಿಗೆ ಅಪಕೃತಿಯನ್ನೆಸಗಿದವನನ್ನು ಸೃಷ್ಟಿಯಲ್ಲಿರುವ ಯಾರೇ ಆಗಲಿ, ಯಾವುದೇ ಆಗಲಿ ಕಾಪಾಡಲಾರದು, ಸಿಡಿಲಿನ ಹೊಡೆತವನ್ನು ಕೊಡೆ ತಡೆದೀತೇ ನೀನು ಸಮಂಜಸವಾದುದನ್ನು ಮಾಡದೆ ಮೂರ್ಖತನದಿಂದ ಕೂಡಿದ್ದರೆ ಸಚಿವಸಾಮಂತಾದಿ ಉಳಿದ ಜನರು ಏನು ತಾನೇ ಮಾಡಿಯಾರು ಅರಸನು ತನ್ನ ಸ್ವಂತ ಸುಖವನ್ನು ಮಾತ್ರ ಬಯಸದೆ, ತನ್ನ ಬಲದ ಮಿತಿಯನ್ನರಿತು ಅನ್ಯಬಲವನ್ನು ಅಳೆದು ರಾಜ್ಯಸಂರಕ್ಷಣೆಯನ್ನು ಮಾಡುವುದು ರಾಜನೀತಿ. ಜನರ ಹಿತಾಹಿತಗಳನ್ನು ತಿಳಿಯದೆ ತನ್ನ ಬಲ್ಲದಲ್ಲಿ ನಂಬಿಕೆಯಿಟ್ಟು ವೀರತ್ವಕ್ಕೆ ಕೈಯಿಟ್ಟರೆ ತಾನೂ ನಾಶವಾಗುವುದಲ್ಲದೆ, ರಾಷ್ಟ್ರವೂ ಮಣ್ಣುಪಾಲಾಗುತ್ತದೆ. ರಾಜ್ಯವು ಕಡಲ ನಡುವಿನಲ್ಲಿದೆ, ದೈತ್ಯಬಲವಿದೆ, ಕುಂಭಕರ್ಣನಂತಹ ಪ್ರತಾಪಿ ತಮನಿದ್ದಾನೆ. ನನಗೆ ಹತ್ತು ತಲೆಗಳು ಇಪ್ಪತ್ತು ಭುಜಗಳೂ ಇವೆ, ದೀರ್ಘಾಯುಷ್ಯವಿದೆ, ನನ್ನನ್ನು ಗೆಲ್ಲುವವರೇ ಇಲ್ಲ' ಎಂಬ ಗರ್ವದಿಂದ ಮುನ್ನಡೆದರೆ ಸುಖವು ಸಿದ್ಧಿಸುವುದಿಲ್ಲ. ಬಿಸಿಲ ತಾಪಕ್ಕೆ ಅಡ್ಡಲಾಗಿ ಹಾಕಿದ ಚಪ್ಪರಕ್ಕೆ ಪ್ರಳಯಕಾಲದಲ್ಲಿ ಸುರಿಯುವ ಮಳೆಯನ್ನು ತಡೆದುಕೊಳ್ಳಲಾದೀತೇ, ಸಿಡಿಲ ಹೊಡೆತಕ್ಕೆ ಕೊಡೆಯು ಪರಿಹಾರವಾದೀತೇ? ಬ್ರಹ್ಮನಿತ್ತ ವರವು ಶ್ರೀರಾಮನ ಬಾಣಗಳನ್ನು ಎದುರಿಸುವ ಸಾಮರ್ಥ್ಯ ನೀಡೀತೇ? ಖರನು ಸತ್ತ ರೀತಿ, ವಾಲಿಯ ವಧೆ, ಸುಗ್ರೀವನ ಕಪಿಸೈನ್ಯದ ಪೌರುಷ, ಲಕ್ಷ್ಮಣನ ಅಸ್ತ್ರಗಳ ಆಟೋಪಗಳನ್ನು ತಿಳಿದು ರಾಘವನಿಗೆ ಹಾಜಾ ಜನಕಜಾತೆಯನ್ನು ತಂದೊಪ್ಪಿಸಿ, ಸಜ್ಜನರು ಒಪ್ಪುವಂತೆ ನಿರತಿಶಯ ಸಂಪತ್ತಿಗೆ ಒಡೆಯನಾಗು. ಇದನ್ನೆಲ್ಲ ವಿವರಿಸಿ ನಿನಗೆ ಬುದ್ಧಿ ಹೇಳುವಂತೆ ಸುಗ್ರೀವನು ಕಳಿಸಿದ್ದರಿಂದ ಇದನ್ನೆಲ್ಲ ತಿಳಿಸಿದೆ. ಸಾವನ್ನು ಕದ್ದು ತಂದು ಮನೆಯಲ್ಲಿ ಬಚ್ಚಿಟ್ಟುಕೊಳ್ಳುವುದು ಯಾವ ಜಾಣೆ? ಕಾಡುಗಿಚ್ಚನ್ನು ಕಂಕುಳಲ್ಲಿ ಇರುಕಿಸಿಕೊಳ್ಳುವುದು ಎಂಥ ವಿವೇಕ? ಸೀತಾಪ್ರಭಾವ, ರಾಘವ ಕೋಪಕ್ಕೊಳಗಾದ ಲಂಕಾಪುರವನ್ನು ನೋಡಿ ಹಿತಕರವಾದುದನ್ನು ಆರಿಸಿಕೋ. ನಿನ್ನ ಹಿತವನ್ನು ಬಯಸಿ ಇಷ್ಟೆಲ್ಲ ಹೇಳಿದೆನೇ ಹೊರತು ಬೇರಲ್ಲ. ಧರಣಿಜೆಯನ್ನು ರಾಮನಿಗೊಪ್ಪಿಸಿ ನಿನ್ನ ಸುರರಾಜ ವೈಭವವನ್ನು ಉಳಿಸಿಕೋ. ಶ್ರೀರಾಮಪುರದರಸನ ಕಪಿಸೇವಕನು ಹೇಳಿದ ಈ ಹಿತವಚನಗಳನ್ನು ಕೇಳಿ ಧೀಮಂತರು ಒಪ್ಪುವಂತೆ ನಡೆದುಕೋ'' ಎನ್ನಲು ದೈತ್ಯೇಂದನು ಕೋಪಾವಿಷ್ಟನಾದ.

ಮುಂದುವರೆಯುವುದು



ಅಂತರಂಗದ ಮಾತು

ಡಾ.ಸುಧಾಕರ.ಜಿ. ಲಕ್ಕವಳ್ಳಿ
ಲೇಖಕರು
ಸಾಮಾಜಿಕ ಚಿಂತಕರು


# ಉಕ್ಕಿನ ದೇಹಕ್ಕೆ ರಾಮಮೂರ್ತಿ ದಂಡ

**ಇದರ ಯಶಸ್ಸಿನ ಗುಟ್ಟು ಉಸಿರಾಟದ ಸಮತೋಲನ. ಕೆಳಗಿಳಿಯುವಾಗ ಪೂರಕ, ತಡೆಹಿಡಿದಾಗ ಕುಂಭಕ, ಏಳುವಾಗ ರೇಚಕ. ಈ ಕ್ರಮ ಶ್ವಾಸಕೋಶದ ಸಾಮರ್ಥ್ಯ ಹೆಚ್ಚಿಸಿ, ಪೈಲ್ವಾನರಿಗೆ ಅಖಾಡದಲ್ಲಿ ಅಪ್ರತಿಮ ದಮ್ಮು ನೀಡುತ್ತದೆ. ಸತತ ಅಭ್ಯಾಸದಿಂದ ಬೆನ್ನುಮೂಳೆಯ ಸುತ್ತಲಿನ ಸ್ನಾಯುಗಳು ಬಲಗೊಂಡು ಆಘಾತ ನಿರೋಧಕ ಶಕ್ತಿ ಲಭಿಸುತ್ತದೆ. ಕೀಲುಗಳು, ಮಣಿಕಟ್ಟುಗಳು ಉಕ್ಕಿನಂತೆ ಸದೃಢವಾಗುತ್ತವೆ.**

ಭಾರತೀಯ ಮಲ್ಲಯುದ್ಧ ಸಂಸ್ಕೃತಿ ಕೇವಲ ಸ್ನಾಯುಪ್ರದರ್ಶನವಲ್ಲ, ಅದು ಪ್ರಾಣಶಕ್ತಿಯ ನಿಯಂತ್ರಣ ಮತ್ತು ಆಂತರಿಕ ಬಲದ ಶೇಖರಣೆ. ಆಧುನಿಕ ಜಿಮ್‌ಗಳು ಐಸೊಮೆಟ್ರಿಕ್ ವ್ಯಾಯಾಮದ ಬಗ್ಗೆ ಮಾತನಾಡುವ ಮುನ್ನವೇ, ಕಲಿಯುಗ ಭೀಮ ಪ್ರೊ. ಕೋಡಿ ರಾಮಮೂರ್ತಿ ನಾಯ್ಡು ತಮ್ಮ ವಿಶಿಷ್ಟ ದಂಡ ಪದ್ಧತಿಯಿಂದ ಜಗತ್ತನ್ನೇ ಬೆರಗುಗೊಳಿಸಿದರು. ಇದು ಶರೀರದ ಪ್ರತಿ ಕಣವನ್ನೂ ಜಾಗೃತಗೊಳಿಸುವ ಜೀವವಿಜ್ಞಾನ.

ಸಾಮಾನ್ಯ ಪುಶ್-ಅಪ್ ವೇಗಕ್ಕೆ ಮಣೆ ಹಾಕಿದರೆ, ರಾಮಮೂರ್ತಿ ದಂಡ ಸ್ಥಿತಿಗೆ ಪ್ರಾಧಾನ್ಯ ನೀಡುತ್ತದೆ. ದೇಹವನ್ನು ಸರಳರೇಖೆಯಲ್ಲಿಟ್ಟು, ಅತಿ ನಿಧಾನವಾಗಿ 10 ಸೆಕೆಂಡುಗಳಲ್ಲಿ ಎದೆಯನ್ನು ನೆಲದತ್ತ ಇಳಿಸಿ, ಸ್ಪರ್ಶಿಸುವ ಮುನ್ನ ಸ್ತಂಭನಗೊಳಿಸುವುದೇ ಇದರ ಜೀವಾಳ. ಆಗ ಇಡೀ ದೇಹದ ಭಾರ ತೋಳು-ಎದೆಯ ಸ್ನಾಯುಗಳ ಮೇಲೆ ಕೇಂದ್ರೀಕೃತವಾಗಿ, ಸ್ನಾಯು ಸಾಂದ್ರತೆ ವಜ್ರದಂತೆ ಹೆಚ್ಚುತ್ತದೆ.

ಕುಂಭಕದ ಒತ್ತಡವು ಜೀರ್ಣಾಂಗಗಳಿಗೆ ಮಸಾಜ್ ನೀಡಿ ಜಠರಾಗ್ನಿ ಹೆಚ್ಚಿಸುತ್ತದೆ, ರಕ್ತಸಂಚಾರ ಸುಗಮಗೊಳಿಸಿ ಹೃದಯವನ್ನು ಬಲಪಡಿಸುತ್ತದೆ. ನರಮಂಡಲ ಸ್ಥಿರವಾಗಿ ಏಕಾಗ್ರತೆ, ಆತ್ಮವಿಶ್ವಾಸ ವೃದ್ಧಿಸುತ್ತದೆ. ಆದರೆ ಆರಂಭಿಕರು ಹಂತಹಂತವಾಗಿ ಅಭ್ಯಾಸಿಸಬೇಕು. ಅಧಿಕ ರಕ್ತದೊತ್ತಡ, ಹೃದ್ರೋಗ, ಹರ್ನಿಯಾ ಇರುವವರು ತಜ್ಞರ ಸಲಹೆ ಪಡೆಯುವುದು ಕಡ್ಡಾಯ. ದುಬಾರಿ ಉಪಕರಣವಿಲ್ಲದೆ, ಸ್ವಂತ ದೇಹಭಾರ ಮತ್ತು ಉಸಿರಿನಿಂದ ಪಡೆಯುವ ಈ ಶಾಶ್ವತ ಶಕ್ತಿಯನ್ನು ಯುವಜನತೆ ಅಳವಡಿಸಿಕೊಂಡರೆ, ಭಾರತೀಯ ಕ್ರೀಡೆಗೆ ಹಳೆಯ ಗರಿಮೆ ಮರಳುವುದು ನಿಶ್ಚಿತ.



## ಗುರು ಪುಷ್ಯ ಯೋಗದ ಪ್ರಯುಕ್ತ ರಾಯರಿಗೆ ವಿಶೇಷ ಫಲ ಪಂಚಾಮೃತ ಅಭಿಷೇಕ



**ಬೆಂಗಳೂರು:** ಜಯನಗರದ 5ನೇ ಬಡಾವಣೆಯಲ್ಲಿರುವ ನಂಜನಗೂಡು ಶ್ರೀರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಪರಮಪೂಜ್ಯ ಶ್ರೀ1008 ಶ್ರೀ ಸುಬುಧೇಂದ್ರತೀರ್ಥ ಶ್ರೀಪಾದಂಗಳವರ ಆದೇಶಾನುಸಾರ ಶ್ರೀ ಮಠದ ಹಿರಿಯ ವ್ಯವಸ್ಥಾಪಕರಾದ ಆರ್. ಕೆ. ವಾದೀಂದ್ರಾಚಾರ್ಯರ ಇವರ ನೇತೃತ್ವದಲ್ಲಿ ಗುರು ಪುಷ್ಯಯೋಗದ ಪ್ರಯುಕ್ತ ಲೋಕಕಲ್ಯಾಣಕ್ಕಾಗಿ ಶ್ರೀ ರಾಘವೇಂದ್ರ ಸ್ವಾಮಿಗಳ ಬೃಂದಾವನಕ್ಕೆ ವಿಶೇಷ ಫಲಪಂಚಾಮೃತ ಅಭಿಷೇಕವನ್ನು ನೆರವೇರಿಸಿದರು.

ತದನಂತರ ಗುರು ರಾಯರ ಬೃಂದಾವನಕ್ಕೆ ವಿಶೇಷ ಪುಷ್ಪಗಳಿಂದ ಅಲಂಕಾರವನ್ನು ಮಾಡಲಾಗಿ ನಂತರ ಮಹಾಮಂಗಳಾರತಿಯು ನೆರವೇರಿತು ಈ ಸಂದರ್ಭದಲ್ಲಿ ಸಹಸ್ರಾರು ಭಕ್ತರು ಗುರು ರಾಯರ ಸನ್ನಿಧಿಗೆ ಆಗಮಿಸಿ ದೀಪಗಳನ್ನು ಬೆಳಗಿಸಿ ಪ್ರಾರ್ಥನೆಯನ್ನು ಸಲ್ಲಿಸಿ ಅನ್ನದಾನದ ಸೇವೆಯಲ್ಲಿ ಭಾಗವಹಿಸಿ ಪರಿಮಳ ಪ್ರಸಾದ ಶೇಷ ವಸ್ತ್ರ ಮತ್ತು ತೀರ್ಥ ಫಲ ಮಂತ್ರಾಕ್ಷತೆ ಯನ್ನು ಸ್ವೀಕರಿಸಿ ಶ್ರೀ ಗುರು ರಾಘವೇಂದ್ರ ಸ್ವಾಮಿಗಳವರ ಅನುಗ್ರಹಕ್ಕೆ ಪಾತ್ರರಾದರು



ಸಾಮಾಜಿಕ ಕಳಕಳಿ

ಹೆಚ್.ಎಸ್. ಪ್ರತಿಮಾ ಹಾಸನ
ಲೇಖಕರು
ಸಾಮಾಜಿಕ ಚಿಂತಕಿ ಹಾಗೂ ಶಿಕ್ಷಕಿ, ಹಾಸನ

# ಬದುಕಲ್ಲಿ ನಾಲಿಗೆ ಪಾತ್ರ

ಕಾನೂನಿನಲ್ಲಿ ರಕ್ಷಣೆ ನೀಡಬೇಕಾದಂತಹ ಎಷ್ಟೋ ವೃತ್ತಿಯಲ್ಲಿರುವಂತಹ ವ್ಯಕ್ತಿಗಳು ತನ್ನ ಸ್ವಾರ್ಥದ ನಡೆಯಿಂದ ಹೆಣ್ಣು ಮಕ್ಕಳನ್ನು ಕೆಳ ಮಟ್ಟದಲ್ಲಿ ಕಂಡು ಅವರ ಜೀವನದೊಂದಿಗೆ ಚೆಲ್ಲಾಟವಾಡುತ್ತಾ ಅವಾಚ್ಯ ಪದಗಳಿಂದ ಬೈಯುತ್ತಾ ಸಾರ್ವಜನಿಕವಾಗಿ ಅವಳ ಮಾನಹಾನಿಯನ್ನು ಮಾಡುತ್ತಾ ಮಾನಸಿಕ ಅತ್ಯಾಚಾರಗಳನ್ನು ಮಾಡುತ್ತಿರುವುದನ್ನು ಕಾಣಬಹುದು.

ಬದುಕು ಎಂದ ಮೇಲೆ ತಪ್ಪು ಮಾಡುವುದು ಸಹಜವೇ. ತನ್ನ ಸುಳ್ಳನ್ನು ಸಮರ್ಥಿಸಿಕೊಳ್ಳುತ ತಾನು ಸಾಚ ಎಂದು ತೋರಿಸಿಕೊಳ್ಳಲು ಹೆಣ್ಣು ಮಗಳೊಬ್ಬಳನ್ನು ಗುರಿ ಮಾಡಿ ಆಟವಾಡಿದರೆ ಅಲ್ಲಿ ಆಕೆ ಸೋಲಬಹುದೇ ಹೊರತು. ಕರ್ಮಫಲಗಳಲ್ಲಿ ಆತ ಸೋಲುತ್ತಾನೆ. ಕೆಲವೊಮ್ಮೆ ಹೆಣ್ಣಿಗೆ ಹೆಣ್ಣೇ ಶತ್ರು ಎಂಬುದನ್ನು ಹೆಣ್ಣು ಮಕ್ಕಳೆ ತೋರಿಸುತ್ತಾರೆ. ಹೆಣ್ಣು ಅಬಲೆಯಲ್ಲ ಸಬಲೆ ಎನ್ನುವ ಕಾಲವಿದು. ಇಂತಹ ಕಾಲದಲ್ಲಿ ಹೆಣ್ಣಿಗೆ ಹೆಣ್ಣೇ ಶತ್ರುವಾಗಿ ತಾನು ನುಡಿದ ನುಡಿಗೆ ಸುಳ್ಳಾಗಿ ನುಡಿಯುತ್ತಾ ಹಣಕ್ಕೋಸ್ಕರ ಇನ್ನೊಂದು ಹೆಣ್ಣಿಗೆ ಮೋಸ ಮಾಡುತ್ತಾಳೆ.

ಕರ್ಮ ಎಂದಿಗೂ ಬಿಡುವುದಿಲ್ಲ ಎಂಬುದನ್ನು ಮರೆತು ಜೀವನದಲ್ಲಿ ತನ್ನದೇ ನಡೆಯಿಂದ ನಡೆಯುತ್ತಾಳೆ. ಕಾನೂನಿನಲ್ಲಿರುವಂತಹ ಸುಳ್ಳು ಮಾಹಿತಿಗಳನ್ನು ನೀಡುತ್ತಾ ಇನ್ನೊಂದು ಹೆಣ್ಣಿಗೆ ಮೋಸ ಮಾಡುವುದು ಎಷ್ಟರ ಮಟ್ಟಿಗೆ ಸರಿ? ಕೆಲವೇ ದಿನಗಳಲ್ಲಿ ಅದನ್ನು ಸಹ ಸಾಕ್ಷಿ ಸಮೇತ ಸಾರ್ವಜನಿಕ ಲೇಖನವಾಗಿ ಬರುವುದು ಅದನ್ನು ಸಾರ್ವಜನಿಕರೇ ಉತ್ತರಿಸುತ್ತಾರೆ.

ಅಡ್ಡಗಾಲಿನಲ್ಲಿ ತೊಳಲಾಟದ ಪರಿಸ್ಥಿತಿಯಲ್ಲಿರುವ ಹೆಣ್ಣಿನ ಮೇಲೆ ಜಾತಿ ನಿಂದನೆಯ ಸುಳ್ಳು ಕೇಸ್ ಹಾಕುವುದಾಗಿ ಹೇಳಿ ತನ್ನ ಬೆಳೆಯನ್ನು ಬೇಯಿಸಿಕೊಂಡಿರುವ ಹೆಣ್ಣು ವಕೀಲೆಯ ಅಸಲಿ ವಿಚಾರವು ಹೊರಹೊಮ್ಮಲಿದೆ.

ಆಕೆಗೆ ಪ್ರೇರಣೆ ನೀಡಿ ಜೊತೆಯಲ್ಲಿ ಆರ್ಥಿಯ ಮತ್ತೊಬ್ಬ ಸ್ನೇಹಿತೆಯ ಚಾಡಿಯ ಮಾತುಗಳು ಹೊರ ಬರಲಿದೆ.

ಅದರ ಜೊತೆಗೆ ಕೋರ್ಟ್ ನ ಅಸೋಸಿಯೇಷನ್ ಎದುರಿನಲ್ಲೇ ಅವಾಚ್ಯ ಪದಗಳಿಂದ ಬೈಯುತ್ತಾ ಅವಾಚ್ಯ ಪದಗಳನ್ನು ಹೇಳುತ್ತಾ ಅದನ್ನು ರೆಕಾರ್ಡ್ ಮಾಡುತ್ತಿದ್ದ ಮೊಬೈಲ್ ಅನ್ನು ಹೊಡೆದು ಹಾಕಿ ತನ್ನ ಪೌರುಷವನ್ನು ತೋರಿಸಿರುವಂತಹ ಕಾನೂನಿನ ರಕ್ಷಣೆ ಮಾಡಬೇಕಾದಂತಹ ವ್ಯಕ್ತಿ ಪ್ರಸಿದ್ಧ ವಕೀಲರೆಂದು ಹೇಳಿ ಕೊಳ್ಳುವ ವ್ಯಕ್ತಿಯ ಅಸಲಿ ಮುಖ ಜೊತೆಗೆ ಅವರ ಹಲವು ವಿಚಾರಗಳ ಬಗ್ಗೆ ಲೇಖನ ಅತೀ ಶೀಘ್ರದಲ್ಲೇ ಸಾಕ್ಷಿ ಸಮೇತವಾಗಿ ಹೊರಹೊಮ್ಮಲಿದೆ. ಈ ನಾಲಿಗೆ ಎಂಬ ಅಸ್ತ್ರ ಬಳಸಿಕೊಂಡು ಅಧಿಕಾರ ಇದೆ ಎಂದು ಮಾಡಿರುವ ಅನ್ಯಾಯ ಹಾಗೂ ಒಂದು ಹೆಣ್ಣಿಗೆ ಮಾಡಿರುವ ಅವಮಾನಕ್ಕೆ ಆಕೆ ದಯಾ ಮರಣಕ್ಕೆ ಶರಣಾಗುತ್ತಾ ತನಗೆ ನ್ಯಾಯವನ್ನು ಪಡೆಯುತ್ತಾ ಹೇಗೆಲ್ಲಾ ಕಷ್ಟವನ್ನು ಪಟ್ಟಳು ಎಂಬುದನ್ನು ತಿಳಿಸುತ್ತಾ ದಯಾ ಮರಣವನ್ನು ಪಡೆಯಲು ಕಷ್ಟಪಡುತ್ತಿದ್ದಾಳೆ ಎಂಬುದನ್ನು ಸಾಕ್ಷಿ ಸಮೇತವಾಗಿ ಎಲ್ಲಾ ದೊಡ್ಡ ಅಧಿಕಾರಿಗಳಿಗೂ ನ್ಯಾಯವನ್ನು ಕೇಳುತ್ತಾ ಜೀವನವನ್ನು ಕೊನೆಗೊಳಿಸಿಕೊಳ್ಳಲು ಸಿದ್ಧಳಾಗಿದ್ದು ಇರುವುದನ್ನು ಅತಿ ಶೀಘ್ರದಲ್ಲಿ ಲೇಖನದ ಮುಖಾಂತರ ಹಾಕಿ ಸಾಕ್ಷಿ ಸಮೇತವಾಗಿ ಎಲ್ಲಾ ಅನ್ಯಾಯ ಹೊರಹೊಮ್ಮಲಿದೆ.

ಅಷ್ಟೇ ಅಲ್ಲ ಆಕೆ ಬಹುಮುಖ ಪ್ರತಿಭೆ ಇರುವ ಮಹಿಳೆ ಆಕೆಯ ಕಾರ್ಯದಿಂದ ಆ ಜಿಲ್ಲೆಗೆ ಹೆಸರು ತಂದಿರುವ ಸಾಧಕಿಯಾಗಿದ್ದಾಳೆ

ಬದುಕು ಅನಿವಾರ್ಯವೇನಲ್ಲ
ಬಾಳಬೇಕೆಂದು ಮೋಸ ಮಾಡಬೇಕಾಗಿಲ್ಲ
ಗೆದ್ದರೂ ಸಹ ಗೆಲುವು ಅದಾಗುವುದಿಲ್ಲ
ಸೋತೆ ಎಂದು ಸ್ವಾಭಿಮಾನವನ್ನು ಬಿಟ್ಟು ಬಾಳಾಗುವುದಿಲ್ಲ ಒಂದು ಹೆಣ್ಣಿನ ಬಾಳಿನಲ್ಲಿ ನಾಲಿಗೆಯು ಸುಳ್ಳು ಹೇಳುತ್ತಾ ತನ್ನ ಸ್ವಾರ್ಥದ ಬದುಕಿನಲ್ಲಿ ಗೆಲುವನ್ನು ಪಡೆದಂತಹ ವ್ಯಕ್ತಿಗಳ ಅತಿ ಶೀಘ್ರದಲ್ಲಿ ಮುಂದಿನ ಲೇಖನಗಳಲ್ಲಿ ಬರಲಿದೆ.

ಜನುಮವೆಂಬದು ಇರುವುದು ಒಂದೇ
ಅಂತಹ ಜನುಮದಲಿ ಪಾವಿತ್ರತೆಯ ಬದುಕು ಬದುಕೋಣ
ಜೀವನ ಸಾರ್ಥಕವಾಗಿಸಿಕೊಳ್ಳೋಣ......
ಬದುಕೆಂಬ ಬಂಡಿಯಲ್ಲಿ ಜೀವನವು ಒಂದು
ನಾಲಿಗೆಗೆ ಕೆಲಸವನ್ನು ನೀಡದೆ
ಬುದ್ಧಿಗೆ ಕೆಲಸವನ್ನು ನೀಡುತ್ತಾ ನಡೆಯೋಣ....
ಹುಟ್ಟು ಸಾವಿನ ಮಧ್ಯೆ ಸಾರ್ಥಕತೆ ಬೇಕು
ಹೇಗೆ ಸತ್ತನೆಂದು ಕೇಳುವಂತೆ
ಸಾಧನೆಯನ್ನು ಹೇಳುವರು......

ದಯಮಾಡಿ ನಾಲಿಗೆಯನ್ನು ಹರಿ ಬಿಡಬೇಡಿ. ನಿಮ್ಮ ಕೆಲಸ ಎಷ್ಟು ಒಳಿತನ್ನು ಮಾಡುತ್ತದೆ ಎಂಬುದನ್ನು ತೋರಿಸುವುದರಲ್ಲಿ ಗಮನವನ್ನು ನೀಡಿ.

ಒಳ್ಳೆಯ ಕೆಲಸಗಳನ್ನು ಮಾತ್ರ ನೆನೆಯಬೇಕೆ ಹೊರತು ಕೆಟ್ಟ ಕೆಲಸಗಳನ್ನು ಮಾತನಾಡಬಾರದು.

ಅವರವರ ಬದುಕು ಅವರವರಿಗೆ.

ಇನ್ನೊಬ್ಬರನ್ನು ತೇಜೋವಧ ಮಾಡುವ ನಾಲಿಗೆಗೆ ಬುದ್ಧಿ ಹೇಳುವ ಕೆಲಸ ಅವರವರೆ ಮಾಡಬೇಕೆ ಹೊರತು ಬೇರೆಯವರ ಬಳಿ ಹೇಳಿಸಿಕೊಳ್ಳಬಾರದು ಎಂದು ಹೇಳುತ್ತಾ ನಾಲಿಗೆ ನಿನ್ನ ನೀಚ ಬುದ್ಧಿಯ ಬಿಡು ನಾಲಿಗೆ ಎಂದು ಚಿಕ್ಕ ಲೇಖನಕ್ಕೆ ವಿರಾಮವನ್ನು ಹಾಕುತ್ತಿದ್ದೇನೆ. ಜೈ ಹಿಂದ್ ಜೈ ಭಾರತ ಮಾತೆ

## ಮೂಕನಿಗೆ ಧ್ವನಿಯಾಗುವ ಕೃತಿ : ಮೌನದೊಳಗಿನ ಪ್ರಣತಿ

ಕವಿ ಉದಂತ ಶಿವಕುಮಾರ್ ರವರು ಬರೆದಿರುವ ಮೌನದೊಳಗಿನ ಪ್ರಣತಿ ಎಂಬ ಕವನ ಸಂಕಲದ ಕಿರು ಹೊತ್ತಿಗೆಯು ಇತ್ತೀಚಿಗಷ್ಟೇ ಬಿಡುಗಡೆಗೊಂಡಿತು. ಈ ಕೃತಿ ಸಾಹಿತ್ಯ ಆಸಕ್ತರ ಮೆಚ್ಚುಗೆಗೆ ಪಾತ್ರವಾಯಿತು. ಅಂತಹ ಕವನಗಳನ್ನು ಹೊಂದಿರುವ ಈ ಕೃತಿಯನ್ನು ಆಯ್ಕೆ ಮಾಡಿಕೊಂಡ ವಿಶ್ವಚೇತನ ಬಳಗ ಸಂಸ್ಥೆಯು ವಿಶ್ವಚೇತನ ಸಾಹಿತ್ಯ ಪ್ರಶಸ್ತಿಯನ್ನು ನೀಡಿ ಗೌರವಿಸಿತು. ಸುಮಾರು ಮೂವತ್ತಕ್ಕೂ ಹೆಚ್ಚು ಕವನಗಳನ್ನು ಹೊಂದಿರುವ ಈ ಕೃತಿ ಉದಂತ ಪ್ರಕಾಶನದವರು ಅಚ್ಚುಕಟ್ಟಾಗಿ ಮುದ್ರಿಸಿ ಬಿಡುಗಡೆ ಮಾಡಲಾಗಿದೆ.

ಮೌನದೊಳಗಿನ ಪ್ರಣತಿ ಎನ್ನುವುದೇ ಒಂದು ರೀತಿಯಲ್ಲಿ ಒಬ್ಬ ಮೌನಿಯ ಒಳಗಿರುವ ಅಂತಹಕರಣದ ಎಲ್ಲಾ ವ್ಯಥೆಗಳನ್ನು ಕವನಗಳ ಮೂಲಕ ಬಿಂಬಿಸುವುದಾಗಿದೆ. ಕವನಗಳು ಕೇವಲ ಸಾಹಿತ್ಯ ಕೃಷಿಯಾಗದೆ, ಒಂದು ಸಮಾಜದೊಳಗಿನ ಸಾಮಾಜಿಕ ಪಲ್ಲಟಗಳನ್ನು, ಅಲ್ಲಿರುವ ಮೌಢ್ಯತೆಗಳು, ಮೂಢನಂಬಿಕೆಗಳನ್ನು ಪ್ರಶ್ನಿಸುವ ಹಾಗೂ ಪ್ರೀತಿ ಪ್ರೇಮ ಪ್ರಣಯ ಪ್ರಸಂಗಗಳು ಒಬ್ಬ ವ್ಯಕ್ತಿಯೊಳಗಿನ ಅಗಾಧವಾದ ಪಾಂಡಿತ್ಯದ ಚಹರೆಗಳನ್ನು ವ್ಯಕ್ತಿಗತವಾಗಿ ವ್ಯಕ್ತಪಡಿಸುತ್ತಿವೆ. ಅಲ್ಲದೆ ಕೆಲವು ಕವನಗಳು ಸಾಮಾಜಿಕವಾಗಿ ಆಚರಣೆಗೊಳಗಾದ ಪಿಡುಗುಗಳ ಬಗ್ಗೆ ಬಹಳ ವಿವರಣಾತ್ಮಕವಾಗಿ ಕಟ್ಟಿಕೊಡಲಾಗಿದೆ. ಸಮಾಜಕ್ಕೆ ಅಂಟಿಕೊಂಡಂತಹ ಹೊಸ ಹೊಸ ಜಾಡ್ಯಗಳು, ಕೋಮು ವಿರೋಧಿಯ ಮನೋಭಾವಗಳು, ಧಾರ್ಮಿಕ ಕ್ಷೇತ್ರಗಳ ಹೊಸ ಆಚರಣೆಗಳ, ಅನಾಹುತಗಳು ಹಾಗೂ ಮೌಢ್ಯತೆಗಳ ಬಗ್ಗೆ ಬಹಳ ಜಾಗರೂಕತೆಯಿಂದ ಕವನಗಳನ್ನ ಕಟ್ಟಿಕೊಡಲಾಗಿದೆ. ಸಮಾಜದಲ್ಲಿನ ಕಟ್ಟ ಕಡೆಯ ವ್ಯಕ್ತಿಯು ಬಲಿಷ್ಠ ವ್ಯವಸ್ಥೆಯ ವಿರುದ್ಧ ತನ್ನನ್ನು ತಾನು ಪ್ರತಿಭಟಿಸಿಕೊಳ್ಳಲು ಕಷ್ಟವಾಗುವಂತಹ ಸಂದರ್ಭದಲ್ಲಿ ತನ್ನ ಮೌನದಲ್ಲಿಯೇ ಹೊಸದೊಂದು ಬದುಕಿನ ಕಡೆಗೆ ಕೈ ಚಾಚುವ ರೀತಿಯಲ್ಲಿ ಸಾಹಿತ್ಯವನ್ನು ಸೃಷ್ಟಿಸುವ ಕೆಲಸವನ್ನು ಕವಿ ತನ್ನ ಕವಿತೆಗಳಲ್ಲಿ ಕಟ್ಟಿಕೊಡುತ್ತಾರೆ.



ಮೌನವೂ ಇಡೀ ವ್ಯವಸ್ಥೆಯಲ್ಲಿ ಒಂದು ರೀತಿಯ ಪ್ರತಿರೋಧವಾಗಿದ್ದು, ಅದರ ಮೂಲಕವೇ ಕೊಳೆತು ನಾರುತ್ತಿರುವ ವ್ಯವಸ್ಥೆಯನ್ನು ಕುಟುಕಿ ಸರಿಪಡಿಸಲೇಬೇಕು ಎನ್ನುವ ಮನೋಭಾವದಿಂದ ಕವಿ ಇಂತಹ ಕವಿತೆಗಳನ್ನು ಬರೆಯಲು ಸಾಧ್ಯವಾಗಿರಬಹುದೇನೋ ಎನಿಸುತ್ತದೆ. ಕವಿಯ ಮಾತುಗಾರಿಕೆಗಿಂತ ಮೌನದಿಂದಿರುವ ಆತನ ಮನೋಭಾವವೇ ಬದುಕಿಗೆ ಜ್ಯೋತಿಯಾಗಬಹುದು ಎನ್ನುವಂತೆ ಅಸಹಾಯಕನ ಎದೆಯಲ್ಲಿ ಹಣತೆಯನ್ನು ಹಚ್ಚುವ ರೀತಿಯಲ್ಲಿ ತನ್ನ ಕವನಗಳ ಗುಚ್ಛವನ್ನು ಈ ಹೊತ್ತಿಗೆಯಲ್ಲಿ ಕಟ್ಟಿಕೊಡಲಾಗಿದೆ.



ಕವಿಯು ಯಾರ ದಾಕ್ಷಿಣ್ಯಕ್ಕೂ ಒಳಗಾಗದೆ ಬರೆದಿರಬಹುದು ಎನಿಸಿದೆ. ಬರೆಯಬೇಕೆನ್ನುವ ಸಂದರ್ಭದಲ್ಲಿ ಇನ್ಯಾರನ್ನೋ ಮೆಚ್ಚಿಸಲು ಅಥವಾ ಅವರು ಒಳಗಿನ ಒಳ್ಳೆಯ ಸಾಹಿತ್ಯ ಅಭಿರುಚಿಯನ್ನು ಹೆಕ್ಕಿ ತೆಗೆಯಲು ಪ್ರಯತ್ನಪಟ್ಟಿರುವಂತೆ ಭಾಸವಾಗುತ್ತದೆ. ವ್ಯಕ್ತಿಯನ್ನು ಕುರಿತಾದ ಕವನಗಳನ್ನು ರಚಿಸಿರುವುದು ನಾಡಿನ ಸಾಹಿತ್ಯ ಬಳಗಕ್ಕೆ ಹೊಸ ಬರವಣಿಗೆಯ ದಿಕ್ಕನ್ನ ಬದಲಿಸುವ ರೀತಿಯಲ್ಲಿ ವ್ಯಕ್ತಿ ಕುರಿತ ಕವನಗಳನ್ನು ಬರೆದಿದ್ದಾರೆ. ಹಾಗೊಂದು ಹೀಗೊಂದು ಪ್ರೀತಿ ಪ್ರೇಮ ಪ್ರಣಯ ಪ್ರಸಂಗದ ತನ್ನ ಹಳೆಯ ನೆನಪುಗಳನ್ನು ಮೆಲುಕು ಹಾಕಿಕೊಳ್ಳುವ ರೀತಿಯಲ್ಲಿ ಹೇಳಲಾಗಿದೆ.

ನನ್ನ ಬದುಕಲ್ಲಿ ಬಂದವಳು, ನನ್ನೊಳಗೆ ಬರಲಾರದೆ ಕೇವಲ ಪ್ರಶ್ನೆಯಾಗಿಯೇ ಹಾಗೆಯೇ ನಿಂತುಬಿಟ್ಟಳು ಎನ್ನುವ ರೀತಿಯಲ್ಲಿ ನೆನಪುಗಳು ಕಾಡುತ್ತಿರುವುದನ್ನು ಈ ಕವನ ಸಂಕಲನದಲ್ಲಿ ಕಾಣಬಹುದು. ಹೀಗೆ ಪ್ರತಿಯೊಬ್ಬರ ಬರವಣಿಗೆಗೂ ಒಂದೊಂದು ಉದ್ದೇಶವಿರುತ್ತದೆ ಎನ್ನುವಂತೆ ಕವಿಯೊಳಗಿನ ಯಾತನೆ, ಮೌನದ ಪ್ರತಿಭಟನೆಯ ಮನೋಭಾವದ ಚಿತ್ರಣವಾಗಿದೆ. ಸಾಮಾಜಿಕ ಬದಲಾವಣೆಯನ್ನು ಬಯಸುವ ಮೂಢನಂಬಿಕೆಗಳನ್ನು ಪ್ರಶ್ನಿಸುವ ಅವೈಜ್ಞಾನಿಕ ವಿಚಾರಗಳನ್ನು ಕಿತ್ತೊಗಿಯುವ ಮನೋಭಾವವುಳ್ಳ ಇಂದಿನ ಯುವ ಜನತೆಗೆ ಈ ಕವನ ಸಂಕಲನ ಒಂದು ಪುಟ್ಟ ಕೈಪಿಡಿ ಎನಿಸುತ್ತದೆ.

# ಛತ್ರಪತಿ ಶಿವಾಜಿ ಮಹಾರಾಜರು ಪ್ರಾರಂಭಿಸಿದ ಮತಾಂತರಿತರ ಶುದ್ಧೀಕರಣಕ್ಕೆ 350 ವರ್ಷಗಳು ಪೂರ್ಣ!

ಹಿಂದವೀ ಸ್ವರಾಜ್ಯದ ಸಂಸ್ಥಾಪಕರಾದ ಛತ್ರಪತಿ ಶಿವಾಜಿ ಮಹಾರಾಜರು ಕೇವಲ ಒಬ್ಬ ಯೋಧನಾಗಿರಲಿಲ್ಲ, ಬದಲಿಗೆ ಅವರು ಒಬ್ಬ ಶ್ರೇಷ್ಠ ಧರ್ಮರಕ್ಷಕ ಮತ್ತು ದಾರ್ಶನಿಕ ಯುಗಪುರುಷರಾಗಿದ್ದರು. ಇಂದಿಗೆ ಸರಿಯಾಗಿ 350 ವರ್ಷಗಳ ಹಿಂದೆ, ಅಂದರೆ 19 ಜೂನ್ 1676 ರಂದು, ಛತ್ರಪತಿ ಶಿವಾಜಿ ಮಹಾರಾಜರು ಪರಾಕ್ರಮಿ ಸೇನಾಪತಿ ನೇತಾಜಿ ಪಾಲ್ಕರ್ ಅವರ 'ಶುದ್ಧೀಕರಣ' ಮಾಡಿ ಅವರನ್ನು ಮತ್ತೆ ಹಿಂದೂ ಧರ್ಮಕ್ಕೆ ಗೌರವಪೂರ್ವಕವಾಗಿ ಬರಮಾಡಿಕೊಂಡಿದ್ದರು. ಈ ಅಭೂತಪೂರ್ವ ಮತ್ತು ಐತಿಹಾಸಿಕ ಘಟನೆಗೆ 19 ಜೂನ್ 2026 ರಂದು ಬರೋಬ್ಬರಿ 350 ವರ್ಷಗಳು ಪೂರ್ಣಗೊಳ್ಳುತ್ತಿವೆ. ಈ ಐತಿಹಾಸಿಕ ತ್ರಿಶತಮಾನೋತ್ಸವ ಸುವರ್ಣ ಮಹೋತ್ಸವ ವರ್ಷದ ಅಂಗವಾಗಿ ಈ ದಿನವನ್ನು ದೇಶಾದ್ಯಂತ 'ರಾಷ್ಟ್ರೀಯ ಘರ್ ವಾಪ್ಸಿ ದಿನ' ಎಂದು ಆಚರಿಸಬೇಕು ಎಂದು ಹಿಂದೂ ಜನಜಾಗೃತಿ ಸಮಿತಿಯು ಎಲ್ಲಾ ಹಿಂದೂ ಸಂಘಟನೆಗಳಿಗೆ ಕರೆ ನೀಡಿದೆ.

ಸ್ವರಾಜ್ಯದ ಮೊದಲ ಸೇನಾಪತಿ ನೇತಾಜಿ ಪಾಲ್ಕರ್ ಅವರನ್ನು ಮೊಘಲರು ಕಪಟತನದಿಂದ ಸೆರೆಮನೆಗೆ ತಳ್ಳಿದ್ದರು. ಅತ್ಯಂತ ಕ್ರೂರವಾದ ಚಿತ್ರಹಿಂಸೆ ನೀಡಿ ಅವರನ್ನು ಬಲವಂತವಾಗಿ ಮುಸ್ಲಿಂ ಧರ್ಮಕ್ಕೆ ಮತಾಂತರಿಸಲಾಯಿತು ಮತ್ತು ಅವರಿಗೆ 'ಮುಹಮ್ಮದ್ ಕುಲಿ ಖಾನ್' ಎಂದು ಹೆಸರಿಡಲಾಯಿತು. ಹಲವು ವರ್ಷಗಳ ಕಾಲ ಪರಧರ್ಮ ಮತ್ತು ಪರಕೀಯರ ಭೂಮಿಯಲ್ಲಿದ್ದರೂ ನೇತಾಜಿಯವರ ಮನಸ್ಸು ಸ್ವರಾಜ್ಯಕ್ಕಾಗಿ ಹಂಬಲಿಸುತ್ತಿತ್ತು. ಅವರು ಮೊಘಲರ ಹಿಡಿತದಿಂದ ತಪ್ಪಿಸಿಕೊಂಡು ಮತ್ತೆ ರಾಯಗಢದ ಛತ್ರಪತಿ ಶಿವರಾಯರ ಪಾದದಡಿಗೆ ಬಂದಾಗ, ಮಹಾರಾಜರು ಧರ್ಮಶಾಸ್ತ್ರದ ಪ್ರಕಾರ ವಿಧಿವಿಧಾನಗಳೊಂದಿಗೆ ಅವರ 'ಶುದ್ಧೀಕರಣ' ಮಾಡಿದರು. ಜೇಷ್ಠ ಶಕಾವಳಿಯ ಪ್ರಕಾರ ಶಕೆ 1598, ಆಷಾಢ 4 (19 ಜೂನ್ 1676) ರಂದು ನೇತಾಜಿ ಪಾಲ್ಕರ್ ಅವರನ್ನು ಮತ್ತೆ ಹಿಂದೂ ಧರ್ಮಕ್ಕೆ ಸ್ವೀಕರಿಸಲಾಯಿತು. ಈ ಕುರಿತು ಮಾತನಾಡಿದ ಸಮಿತಿಯ ರಾಷ್ಟ್ರೀಯ ವಕ್ತಾರರಾದ ಶ್ರೀರಮೇಶ್ ಶಿಂದೆ ಅವರು, ಇಂದು 350 ವರ್ಷಗಳ ನಂತರವೂ ಈ ಇತಿಹಾಸವು ನಮಗೆ ಅತ್ಯಂತ ಪ್ರಮುಖವಾದದ್ದು ಮತ್ತು ಮಾರ್ಗದರ್ಶಕವಾಗಿದೆ. ವಿವಿಧ ಆಮಿಷಗಳು, ಒತ್ತಡ ಅಥವಾ ಕಿರುಕುಳಕ್ಕೆ ಬಲಿಯಾಗಿ ನಮ್ಮ ಲಕ್ಷಾಂತರ



ಹಿಂದೂ ಸಹೋದರ-ಸಹೋದರಿಯರು ಮತಾಂತರಗೊಂಡಿದ್ದಾರೆ. ಇಂದಿನ ದಿನಗಳಲ್ಲಿ 'ಲವ್ ಜಿಹಾದ್' ನಂತಹ ವ್ಯವಸ್ಥಿತ ಸಂಚಿಗೆ ಬಲಿಯಾಗಿ ನಮ್ಮ ಅನೇಕ ಹಿಂದೂ ಯುವತಿಯರು ಪರಧರ್ಮದತ್ತ ಸೆಳೆಯಲ್ಪಡುತ್ತಿದ್ದಾರೆ.

ಅವಳು ಹೋದರೆ ಹೋಗಲಿ, ಇನ್ಮುಂದೆ ಅವಳಿಗೂ ನಮಗೂ ಯಾವುದೇ ಸಂಬಂಧವಿಲ್ಲ' ಎಂಬ ಮನಸ್ಥಿತಿಯನ್ನು ಹಿಂದೂ ಸಮಾಜವು ಈಗ ತ್ಯಜಿಸಬೇಕಾಗಿದೆ. ಪ್ರೀತಿಯ ಸುಳ್ಳು ಜಾಲದಲ್ಲಿ ಸಿಲುಕಿ ವಂಚನೆಗೊಳಗಾದ ನಮ್ಮ ಹೆಣ್ಣುಮಕ್ಕಳು ಮತ್ತು ಸಹೋದರಿಯರಿಗೆ ಮತ್ತೆ ಗೌರವಯುತವಾಗಿ ಹಿಂದೂ ಧರ್ಮ ಮತ್ತು ಸಮಾಜದಲ್ಲಿ ಸುರಕ್ಷಿತ ಸ್ಥಾನವನ್ನು ನೀಡಲು ಈ ಐತಿಹಾಸಿಕ ದಿನವನ್ನು ಸ್ಮರಿಸುವುದು ಅತ್ಯಂತ ಅಗತ್ಯವಾಗಿದೆ.

ಛತ್ರಪತಿ ಶಿವಾಜಿ ಮಹಾರಾಜರ ಈ ಆದರ್ಶವನ್ನೇ ಕಣ್ಣೆದುರು ಇಟ್ಟುಕೊಂಡು ಇಡೀ ಹಿಂದೂ ಸಮಾಜ, ಸಂತರು ಮತ್ತು ಸಂಘಟನೆಗಳು ಮುಂದೆ ಬರಬೇಕಾದ ಅಗತ್ಯವಿದೆ.

ಯಾವ ಸಹೋದರರು ಮತ್ತು ಮುಖ್ಯವಾಗಿ ಸಹೋದರಿಯರು ಮೂಲ ಪ್ರವಾಹಕ್ಕೆ (ಹಿಂದೂ ಧರ್ಮಕ್ಕೆ) ಮರಳಿ ಬರಲು ಬಯಸುತ್ತಾರೋ, ಅವರಿಗಾಗಿ ನಾವು ನಮ್ಮ ಬಾಗಿಲುಗಳನ್ನು ಮತ್ತು ಮನಸ್ಸುಗಳನ್ನು ಮುಕ್ತವಾಗಿಡಬೇಕು ಎಂದರು. **ಶ್ರೀ. ರಮೇಶ್ ಶಿಂದೆ, ರಾಷ್ಟ್ರೀಯ ವಕ್ತಾರರು, ಹಿಂದೂ ಜನಜಾಗೃತಿ ಸಮಿತಿ**

## ಮಕ್ಕಳ ಹಾಲು ಹಲ್ಲುಗಳು ಎಷ್ಟು ವರ್ಷಕ್ಕೆ ಉದುರುತ್ತವೆ? ಈ ಸಮಯದಲ್ಲಿ ಪೋಷಕರು ಜಾಗರೂಕರಾಗಿರಬೇಕು

ಮಕ್ಕಳ ಹಾಲು ಹಲ್ಲುಗಳು ಆರು ಮತ್ತು 13 ವರ್ಷಗಳ ನಡುವೆ ಉದುರುತ್ತವೆ. ಹೆಚ್ಚಿನ ಮಕ್ಕಳಿಗೆ ಆರು ವರ್ಷಗಳ ಸುಮಾರಿಗೆ ಹಾಲು ಹಲ್ಲುಗಳು ಉದುರಲು ಪ್ರಾರಂಭಿಸುತ್ತವೆ. ಕೆಲವು ಮಕ್ಕಳಲ್ಲಿ ಈ ಪ್ರಕ್ರಿಯೆಯು ಒಂದು ವರ್ಷದ ನಂತರ ಆರಂಭವಾಗುತ್ತದೆ, ಸುಮಾರು ಏಳು ವರ್ಷ ಆಗಿರಬಹುದು. ಮೇಯೊ ಕ್ಲಿನಿಕ್ ಪ್ರಕಾರ, ಎಲ್ಲಾ ಹಾಲು ಹಲ್ಲುಗಳು 13 ವರ್ಷ ವಯಸ್ಸಿನೊಳಗೆ ಉದುರುತ್ತವೆ ಮತ್ತು ಶಾಶ್ವತ ಹಲ್ಲುಗಳು ಬರಲು ಪ್ರಾರಂಭಿಸುತ್ತವೆ.

ಕ್ಲೀವ್‌ಲ್ಯಾಂಡ್ ಕ್ಲಿನಿಕ್ ಪ್ರಕಾರ, ಹಾಲು ಹಲ್ಲುಗಳು ಉದುರುವುದು ಬಹಳ ಸಾಮಾನ್ಯ ಹಾಗೂ ನೈಸರ್ಗಿಕ ಪ್ರಕ್ರಿಯೆಯಾಗಿದೆ. ಮಗು ಬೆಳೆದಂತೆ ಅವರ 20 ಹಾಲು ಹಲ್ಲುಗಳು ಉದುರಲು ಪ್ರಾರಂಭಿಸುತ್ತವೆ. ಇದರಿಂದ 32 ಶಾಶ್ವತ ಹಲ್ಲುಗಳಿಗೆ ಸ್ಥಳಾವಕಾಶ ದೊರೆಯುತ್ತದೆ. ಕೆಲವು ಮಕ್ಕಳು ತಮ್ಮ ಹಲ್ಲುಗಳನ್ನು ಮೊದಲೇ ಕಳೆದುಕೊಳ್ಳಬಹುದು. ಆದರೆ, ಇತರರು ಮಕ್ಕಳು ನಂತರ ಹಾಲು ಹಲ್ಲುಗಳನ್ನು ಕಳೆದುಕೊಳ್ಳಬಹುದು.

ಈಗ ಮಗುವಿನ ಹಲ್ಲುಗಳು ಯಾವ ನಿರ್ದಿಷ್ಟ ವಯಸ್ಸಿನಲ್ಲಿ ಉದುರುತ್ತವೆ ಮತ್ತು ಪೋಷಕರುವಹಿಸಬೇಕಾದ ಕ್ರಮಗಳ ಕುರಿತು ಇಲ್ಲಿ ತಿಳಿಯೋಣ.

ಹಾಲು ಹಲ್ಲುಗಳು ಯಾವಾಗ ಬರಲು ಪ್ರಾರಂಭಿಸುತ್ತವೆ ಸಾಮಾನ್ಯವಾಗಿ ಮಕ್ಕಳ ಮೊದಲ ಹಾಲು ಹಲ್ಲು ಆರು ತಿಂಗಳಲ್ಲಿ ಬರುತ್ತವೆ. ಹಲ್ಲು ಬರುವ ವಯಸ್ಸು 3 ರಿಂದ 14 ತಿಂಗಳವರೆಗೆ ಇರುತ್ತದೆ ಎಂದು ತಜ್ಞರು ತಿಳಿಸುತ್ತಾರೆ. ಕೆಲವು ಮಕ್ಕಳ ಹಲ್ಲುಗಳು ಒಂದೊಂದಾಗಿ ಬರುತ್ತವೆ. ಇನ್ನೂ ಕೆಲವು ಜೋಡಿಯಾಗಿ ಇಲ್ಲವೇ ಗುಂಪುಗಳಾಗಿ ಕಾಣಿಸಿಕೊಳ್ಳುತ್ತವೆ. ಮಕ್ಕಳು ತಮ್ಮ ಹಾಲು ಹಲ್ಲುಗಳು ಉದುರುತ್ತಿರುವಾಗ ವಿವಿಧ ಸಣ್ಣಪುಟ್ಟ ಅಸ್ವಸ್ಥತೆಗಳನ್ನು ಅನುಭವಿಸಬಹುದು. ಕ್ಲೀವ್‌ಲ್ಯಾಂಡ್ ಕ್ಲಿನಿಕ್ ವರದಿ ತಿಳಿಸುವ ಪ್ರಕಾರ, ಮುಂಭಾಗದ ಮಧ್ಯದ ಹಲ್ಲುಗಳು ಮೊದಲು ಉದುರುತ್ತವೆ. ಸಾಮಾನ್ಯವಾಗಿ 6 ರಿಂದ 7 ವರ್ಷ ವಯಸ್ಸಿನ ನಡುವೆ. ಇವುಗಳನ್ನು ಮಧ್ಯದ ಬಾಚಿಹಲ್ಲುಗಳು ಎಂದು ಕರೆಯಲಾಗುತ್ತದೆ. ಮುಂಭಾಗದ ಹಲ್ಲುಗಳ ಪಕ್ಕದಲ್ಲಿರುವ ಹಲ್ಲುಗಳು 7 ರಿಂದ 8 ವರ್ಷ ವಯಸ್ಸಿನ ನಡುವೆ ಉದುರುತ್ತವೆ. ಸಾಮಾನ್ಯವಾಗಿ ಎರಡು ಕೆಳಗಿನ ಹಲ್ಲುಗಳು ಮೊದಲು ಉದುರುತ್ತವೆ. ನಂತರ ಎರಡು ಮೇಲಿನ ಹಲ್ಲುಗಳು ಉದುರುತ್ತವೆ. ಮಕ್ಕಳು ಸಾಮಾನ್ಯವಾಗಿ 9 ರಿಂದ 10 ವರ್ಷ ವಯಸ್ಸಿನ ನಡುವೆ ತಮ್ಮ ಕೆಳಗಿನ ಬಾಚಿಹಲ್ಲುಗಳನ್ನು ಕಳೆದುಕೊಳ್ಳಲು ಪ್ರಾರಂಭಿಸುತ್ತಾರೆ. ಅವರ ಮೊದಲ ಬಾಚಿಹಲ್ಲುಗಳು (ದವಡೆಯ ಹಲ್ಲುಗಳು) 10 ರಿಂದ 11 ವರ್ಷ ವಯಸ್ಸಿನ ನಡುವೆ ಉದುರುತ್ತವೆ.

ಆನೆ ಬಿಡಾರದ ಅಧಿಕಾರಿಗಳ ನಿರ್ಲಕ್ಷ್ಯದಿಂದ ವಿಕ್ರಾಂತ್ ಆನೆ ಸೊರಗಿ ಹೋಗಿದೆ ಎಂಬ ಆರೋಪ ಕೇಳಿಬಂದಿದೆ.

# ಸಕ್ರೆಬೈಲು ವಿಕ್ರಾಂತ್ ಆನೆಯ ಕಾಲಿಗೆ ಗಾಯ; ಅಧಿಕಾರಿಗಳ ನಿರ್ಲಕ್ಷ್ಯ ಆರೋಪ

• **ಉದಯವಾಹಿನಿ, ಸಕ್ರೆಬೈಲು ಶಿವಮೊಗ್ಗ:**

ರಾಜ್ಯದ ಪ್ರಸಿದ್ಧ ಆನೆ ಬಿಡಾರಗಳಲ್ಲಿ ಒಂದಾದ ಶಿವಮೊಗ್ಗದ ಸಕ್ರೆಬೈಲು ಆನೆ ಬಿಡಾರದ ದೈತ್ಯ ವಿಕ್ರಾಂತ್ ಆನೆಯ ಎಡಗಡೆಯ ಮುಂದಿನ ಕಾಲಿಗೆ ಗಾಯವಾಗಿದೆ. ಕಳೆದ 6 ತಿಂಗಳ ಹಿಂದೆ ಪಳಗಿಸುವಾಗ ಆದ ಗಾಯ ಇನ್ನೂ ವಾಸಿಯಾಗಿಲ್ಲ. ಈ ಆನೆಯನ್ನು 2025ರಲ್ಲಿ ಹಾಸನ ಜಿಲ್ಲೆಯ ಬೇಲೂರು ಬಳಿ ಸೆರೆ ಹಿಡಿದು ತರಲಾಗಿತ್ತು. ಆನೆ ಮೈಸೂರು ದಸರಾದಲ್ಲಿ ಭಾಗವಹಿಸುವ ಆನೆಯಂತೆ ಅತ್ಯಂತ ದಷ್ಟಪುಷ್ಟವಾಗಿತ್ತು. ಆದರೆ, ಬಿಡಾರದ ಅಧಿಕಾರಿಗಳ ನಿರ್ಲಕ್ಷ್ಯದಿಂದ ವಿಕ್ರಾಂತ್ ಆನೆ ಸೊರಗಿ ಹೋಗಿದೆ ಎಂಬ ಆರೋಪ ಕೇಳಿಬಂದಿದೆ.

ಶಿವಮೊಗ್ಗ ವನ್ಯಜೀವಿ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಪ್ರಸನ್ನ ಪಟಗಾರ್ ಅವರು ಮಾತನಾಡಿದ್ದು, ವಿಕ್ರಾಂತ್ ಆನೆಯ ಮುಂದಿನ ಎಡಗಾಲಲ್ಲಿ ಗಾಯವಾಗಿದ್ದು, ಅದು ಬಾವು ಬಂದು ಕೀವು ಆಗಿತ್ತು. ಇದನ್ನು ಪ್ರತಿನಿತ್ಯ ಕ್ಲೀನ್ ಮಾಡಿ, ಅದರೊಳಗಿರುವ ಕೀವನ್ನು ಹೊರತೆಗೆದು ಔಷಧಿ ಹಾಕಲಾಗಿದೆ. ತಜ್ಞ ವೈದ್ಯರಿಂದ ಅಗತ್ಯ ಸಲಹೆ ಸೂಚನೆಗಳನ್ನು ಪಡೆದು ಚಿಕಿತ್ಸೆ ನೀಡಲಾಗಿದೆ. ಸದ್ಯ ಆನೆಯ ಕಾಲು ನೋವು ಕಡಿಮೆ ಆಗಿ, ಗಾಯ ಗುಣಮುಖವಾಗುತ್ತಿರುವುದನ್ನು ನೋಡ್ತಾ ಇದ್ದೀರಿ. ತಜ್ಞ ವೈದ್ಯರನ್ನು ಕರೆಯಿಸಿ ಸೂಕ್ತ ಚಿಕಿತ್ಸೆ ಒದಗಿಸುತ್ತೇವೆ ಎಂದು ತಿಳಿಸಿದರು. ಬಾಲಣ್ಣ ಆನೆಗೆ ಕಾಲಿಗೆ ಚಿಕಿತ್ಸೆ ಕೊಡಲು ಹೋಗಿ ಆತನ ಕಿವಿಯನ್ನೇ ಹಾಳು ಮಾಡಿದ್ದಾರೆ. ಅದೇ ರೀತಿ ಅಡ್ಕ ಬಡ್ಕ ಆನೆ ಕಾಲಿಗೂ ಗಾಯ ಮಾಡಿದ್ದರು. ಸಕ್ರೆಬೈಲು ಆನೆ ಬಿಡಾರದ ಆನೆಗಳಿಗೆ ಸರಿಯಾಗಿ ಊಟ ಕೊಡುತ್ತಿಲ್ಲ ಎಂಬ ಆರೋಪವಿದೆ. ಸಕ್ರೆಬೈಲು ಆನೆ ಬಿಡಾರಕ್ಕೆ ಆನೆಗಳನ್ನು ಸಾಯಿಸಲು ಕಳುಹಿಸಬೇಕೇ ಪ್ರಾಣಿ ಹಿಂಸೆ ಕಾಯಿದೆಯಂತೆ ಯಾರು ಹಿಂಸೆ ನೀಡಿದ್ದಾರೋ ಅವರ ವಿರುದ್ಧ ಕಾನೂನು ಕ್ರಮ ಜರುಗಿಸಬೇಕು. ವನ್ಯಜೀವಿ ಕಾಯಿದೆಯ ಪ್ರಕಾರ ಇಲ್ಲಿ ನಿರ್ಲಕ್ಷ್ಯ ತೋರಲಾಗಿದೆ ಎಂದು ಒತ್ತಾಯಿಸಿದರು. ಇಲ್ಲಿ ಮಾವುತರೊಬ್ಬರನ್ನು ಸಸ್ಪೆಂಡ್ ಮಾಡಲಾಗಿದೆ. ನಿಯಮಗಳ ಪ್ರಕಾರ ಶಾಶ್ವತ ವೈದ್ಯರನ್ನು ನೇಮಕ ಮಾಡಿಕೊಳ್ಳಬೇಕು. ಅವಶ್ಯಕ ಚಿಕಿತ್ಸೆ ಲಭ್ಯವಿಲ್ಲ. ಡಿಸಿಎಫ್ ಆಡಳಿತ ನಡೆಸಲು ಶಕ್ತರಲ್ಲ ಎಂದು ಸರ್ಕಾರಕ್ಕೆ ಗೊತ್ತಿದೆ. ಇವರನ್ನು ಬೇರೆ ಕಡೆ ಕಳುಹಿಸಿಕೊಡಿ ಎಂದು ಕೇಳಿಕೊಂಡಿದ್ದೇವೆ. ಹಿಂದೆ ಸರ್ಕಾರ ಕ್ರಮ ತೆಗೆದುಕೊಳ್ಳದ ಕಾರಣಕ್ಕೆ ವಿಕ್ರಾಂತ್ ಬಲಿಯಾಗುತ್ತಿದ್ದಾನೆ. ಅಲ್ಲದೇ, ನ್ಯಾಯಾಲಯದ ಆದೇಶವನ್ನೂ ಇವರು ಪಾಲಿಸಿಲ್ಲ ಎಂದು ದೂರಿದರು.


ಉದಯವಾಹಿನಿ ಚಿತ್ರ

ಡಿಎಫ್‌ಒ ಪ್ರಸನ್ನ ಪಟಗಾರ ಹಾಗೂ ಸಕ್ರೆಬೈಲು ಆನೆ ಬಿಡಾರದಲ್ಲಿ ವಿಕ್ರಾಂತ್ ಆನೆ ಗಾಯಗೊಂಡಿದ್ದು, ಅದಕ್ಕೆ ಸೂಕ್ತ ಚಿಕಿತ್ಸೆ ನೀಡಲು ಹಿರಿಯ ಅರಣ್ಯಾಧಿಕಾರಿಗಳು ಸೂಕ್ತ ವೈದ್ಯರನ್ನು ಬೆಂಗಳೂರಿನಿಂದ ಕಳುಹಿಸುತ್ತಿದ್ದಾರೆ. ವಿಕ್ರಾಂತ್ ಯಾಕೆ ಹೀಗೆ ಆಗಿದೆ ಎಂಬ ಪ್ರಶ್ನೆಯೂ ಬಂದಿದೆ.

ಆನೆ ಬಿಡಾರದಲ್ಲಿ ವಿನಾಶವಾಗುತ್ತಿದೆ ಎಂದು ಜನರಿಗೆ ತಿಳಿಯಬೇಕು. ಇದನ್ನು ಬೇಲೂರಿನಿಂದ 2025ರ ಮಾರ್ಚ್ 25ರಂದು ಹಿಡಿದು ತಂದಾಗ ಬಹಳ ಗಟ್ಟಿಮುಟ್ಟಾಗಿತ್ತು. ಅಲ್ಲದೇ, ಅದಕ್ಕೆ ಒಂದೇ ಒಂದು ಗಾಯವೂ ಆಗಿರಲಿಲ್ಲ. ಸಕ್ರೆಬೈಲು ಆನೆ ಕ್ಯಾಂಪ್‌ಗೆ ಬಂದಾಗ ಆನೆಗೆ ಯಾವುದೇ ಗಾಯ ಆಗಿರಲಿಲ್ಲ ಎಂದು ಹೇಳಿದರು.

ಪರಿಸರ ತಜ್ಞ ಜೋಸೆಫ್ ಹೂವರ್

## ಆನೆಗೆ ಉತ್ತಮ ಚಿಕಿತ್ಸೆ ಕೊಡಿಸಿಲ್ಲ

2026ರ ಮಾರ್ಚ್‌ನಲ್ಲಿ ಮಾವುತ ಶೇಕ್ ಹುಸೇನಿ ಅಲ್ಲಿನ ಎಸಿಎಫ್, ಡಿಎಫ್ ಒಗಳಿಗೆ ಒಂದು ಪತ್ರ ಬರೆದಿದ್ದರು. ಆದರೆ, ಅಧಿಕಾರಿಗಳು ಈ ಕುರಿತು ನಿರ್ಲಕ್ಷ್ಯ ವಹಿಸಿದ್ದರು. ಆನೆಗೆ ಉತ್ತಮ ಚಿಕಿತ್ಸೆ ಕೊಡಿಸದ ಡಿಎಫ್‌ಒ ಪ್ರಸನ್ನ ಪಟಗಾರ್ ಏನು ಮಾಡ್ತಾ ಇದ್ದಾರೆ. ಕಳೆದ ಎರಡು ವರ್ಷದ ಹಿಂದೆ ದಸರಾಗೆ ಆನೆ ಕಳುಹಿಸಿದಾಗ ಅದು ಅಲ್ಲಿಯೇ ಮರಿ ಹಾಕಿತ್ತು. ಕ್ಯಾಂಪ್‌ನಲ್ಲಿದ್ದಾಗ ಆನೆ ಗರ್ಭಿಣಿ ಅಂತ ಅವರಿಗೆ ಗೊತ್ತಿರಲಿಲ್ಲವೇ ಎಂದು ಪ್ರಶ್ನಿಸಿದರು.

ನಿಯಮಗಳಂತೆ ಸಕ್ರೆಬೈಲು ಆನೆ ಬಿಡಾರಕ್ಕೆ ಖಾಯಂ ಪಶು ವೈದ್ಯರ ನೇಮಕ ಆಗಬೇಕು. ಆದರೆ, ಇದುವರೆಗೂ ಆಗಿಲ್ಲ. ನಿವೃತ್ತ ವೈದ್ಯರಿಂದ ಚಿಕಿತ್ಸೆ ಕೊಡಿಸಲಾಗುತ್ತದೆ. ಹಾಲಿ ಇರುವ ಪಶು ವೈದ್ಯರಾದ ಮುರುಳಿ ಮನೋಹರ್ ಅವರನ್ನು ಡೆಪ್ಯುಟೇಷನ್ ಮೂಲಕ ತೆಗೆದುಕೊಂಡಿದ್ದಾರೆ. ಇಲ್ಲಿ ಸರ್ಕಾರವೇ ಲೋಪ ಎಸಗಿದೆ. ಹುಲಿ ಮತ್ತು ಸಿಂಹಧಾಮದಲ್ಲಿ ಕಿರಿಯ ವೈದ್ಯರೊಬ್ಬರನ್ನು ಪ್ರಭಾರಿಯಾಗಿ ತೆಗೆದುಕೊಂಡಿದ್ದಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಪಶು ವೈದ್ಯರಾದ ಮುರುಳಿ ಮನೋಹರ್

## ಜಮೀರ್ ಅಹಮದ್‌ಗೆ ಸಚಿವ ಸ್ಥಾನ ನೀಡಿ ಎಂದು ರಬಕವಿಯಲ್ಲಿ ಆಗ್ರಹ

• **ಉದಯವಾಹಿನಿ ರಬಕವಿ ಬನಹಟ್ಟಿ:**

ರಾಜ್ಯ ಸರ್ಕಾರದ ಎರಡನೆಯ ಹಂತದ ಸಂಪುಟ ವಿಸ್ತರಣೆಯಲ್ಲಿ ಜಮೀರ್ ಅಹಮದ್ ಖಾನ್‌ಗೆ ಸಚಿವ ಸ್ಥಾನ ನೀಡಬೇಕು ಎಂದು ರಬಕವಿಯ ಅಂಜುಮನ್-ಎ- ಇಸ್ಲಾಂ ಜಮಾತನ ಕಾರ್ಯದರ್ಶಿ ಮೌಸಿನ್ ಗೋಕಾಕ ಆಗ್ರಹಿಸಿದರು. ಅವರು ಇಲ್ಲಿನ ಅಂಜುಮನ್-ಎ-ಇಸ್ಲಾಂ ಜಮಾತ್ ನಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು. ರಾಜ್ಯ ರಾಜಕಾರಣದಲ್ಲಿ ಜಮೀರ್ ಅವರು ಸಮರ್ಥ, ಅನುಭವಿ ಹಾಗೂ ಜನಪರ ನಾಯಕರಾಗಿದ್ದಾರೆ.

ಎರಡನೆಯ ಹಂತದ ಸಂಪುಟ ವಿಸ್ತರಣೆಯ ಸಂದರ್ಭದಲ್ಲಿ ಅವರಿಗೆ ಸಚಿವ ಸ್ಥಾನ ನೀಡುವುದರ ಮೂಲಕ ಮುಸ್ಲಿಂ ಸಮುದಾಯಕ್ಕೆ ನ್ಯಾಯ ಒದಗಿಸಬೇಕು ಎಂದು ಗೋಕಾಕ ಆಗ್ರಹಿಸಿದರು. ಸಮಾಜದ ಹಿರಿಯ ಮುಖಂಡ ರಫಿಕ್ ಬಾರಿಗಡ್ಡಿ ಮಾತನಾಡಿ, ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷದ ಗೆಲುವಿನಲ್ಲಿ ಮುಸ್ಲಿಂ ಸಮುದಾಯದ ಪಾತ್ರ ಮುಖ್ಯವಾಗಿದೆ. ಆದರೆ ಸಚಿವ ಸಂಪುಟದಲ್ಲಿ ಸರಿಯಾದ ಸ್ಥಾನ ಮಾನಗಳು ದೊರೆಯದೆ ಇರುವುದು ಬೇಸರದ ಸಂಗತಿಯಾಗಿದೆ. ಆದರೆ ಸಾಮಾಜಿಕ ಜಾಲತಾಣದಲ್ಲಿ ಜಮೀರ್ ಅವರ ಕೆಲವು ವಿಡಿಯೋಗಳು ಬಂದಿವೆ. ಇವು ಅವರಿಗೆ ಮಂತ್ರಿ ಸ್ಥಾನ ತಪ್ಪಿಸುವ ಪ್ರಯತ್ನವಾಗಿದೆ. ಎಸ್.ಎಂ.ಕೃಷ್ಣ ಮಂತ್ರಿ ಮಂಡಲದಲ್ಲಿ ಮುಸ್ಲಿಂ ಸಮುದಾಯಕ್ಕೆ ನಾಲ್ಕು ಸ್ಥಾನಗಳನ್ನು ನೀಡಲಾಗಿತ್ತು, ಆದರೆ ಈಗ ಸಮುದಾಯದ ಸಂಖ್ಯೆ ಕಡಿಮೆಯಾಗುತ್ತಿದೆ ಎಂದು ತಿಳಿಸಿದರು. ಜಮೀರ್ ಅಹಮ್ಮದ್ ಖಾನರಿಗೆ ಸಚಿವ ಸ್ಥಾನ ನೀಡದೆ ಇದ್ದರೆ ಮುಂದಿನ ದಿನಗಳಲ್ಲಿ ಇನ್ನಷ್ಟು ಹೋರಾಟ ಮಾಡಲಾಗುವುದು ಎಂದು ಅಂಜುಮನ್ ಸಮಿತಿಯ ಅಧ್ಯಕ್ಷ ಇಟ್ಬಾಲ್ ಲೆಂಗ್ರೆ, ಮೌಲಾ ಪೆಂಡಾರಿ, ಆರೀಫ್ ಕೊಣ್ಣೂರ, ಮೊಹಮ್ಮದ್ ಗೋಕಾಕ, ಇಸ್ಮಾಯಲ್ ನಮಾಜಕಟ್ಟಿ, ಮೈನೂದ್ದೀನ್ ಕೊಣ್ಣೂರ, ಉಸ್ಮಾನಸಾಬ್ ಲೆಂಗ್ರೆ, ಮಸೂದ್ ತಾಂಬೋಳಿ ಸೇರಿ ಮುಸ್ಲಿಂ ಸಮುದಾಯದ ಮುಖಂಡರು ಆಗ್ರಹಿಸಿದರು.


ಉದಯವಾಹಿನಿ ಚಿತ್ರ

## ರಸ್ತೆ ಅಭಿವೃದ್ಧಿಗೆ ಅನುದಾನಕ್ಕೆ ಶಿಫಾರಸು: ಯು.ಟಿ.ಖಾದರ್

• **ಉದಯವಾಹಿನಿ, ಸುಳ್ಯ:**

ಅಂತಾರಾಜ್ಯ ಸಂಪರ್ಕಿಸುವ ಸುಳ್ಯ ಆಲೆಟ್ಟಿ ಬಡ್ಡಡ್ಕ ಕೂರ್ನಡ್ಕ ರಸ್ತೆಯ ಅಭಿವೃದ್ಧಿಗೆ ಲೋಕೋಪಯೋಗಿ ಇಲಾಖೆಯಿಂದ 7 ಕೋಟಿ ರೂ ಅನುದಾನ ಬಿಡುಗಡೆಗೊಂಡಿದ್ದು ಅನುದಾನಕ್ಕೆ ಶಿಫರಸ್ಸು ಮಾಡಿದ ಸಚಿವ ಯು.ಟಿ.ಖಾದರ್ ಅವರಿಗೆ ಸುಳ್ಯದ ಕಾಂಗ್ರೆಸ್ ಮುಖಂಡರು ಅಭಿನಂದನೆ ಸಲ್ಲಿಸಿದ್ದಾರೆ.

ಸುಳ್ಯ ತಾಲ್ಲೂಕನ್ನು ಸಂಪರ್ಕಿಸುವ ಅಂತರ್ ರಾಜ್ಯ ಗಡಿ ಪ್ರದೇಶ ವಾದ ಸುಳ್ಯ ತಾಲ್ಲೂಕು ಅಲೆಟ್ಟಿ ಬಡ್ಡಡ್ಕ ಕೂರ್ನಡ್ಕ ರಸ್ತೆಯ ಅಭಿವೃದ್ಧಿ ಬಹು ಕಾಲದ ಬೇಡಿಕೆಯಾಗಿದ್ದು ಅಲೆಟ್ಟಿ ಗ್ರಾಮ ಪಂಚಾಯಿತಿ ಮಾಜಿ ಸದಸ್ಯ ಸತ್ಯಕುಮಾರ್ ಅವರ ನೇತೃತ್ವದಲ್ಲಿ, ಅಂದು ಸ್ಪೀಕರ್ ಆಗಿದ್ದ ಯು. ಟಿ. ಖಾದರ್ ಮತ್ತು ಅಂದಿನ ಉಸ್ತುವಾರಿ ಸಚಿವರಾದ ದಿನೇಶ್ ಗುಂಡೂರಾವ್ ಅವರ ಶಿಫಾರಸ್ಸಿನೊಂದಿಗೆ ಲೋಕೋಪಯೋಗಿ ಸಚಿವರಾದ ಸತೀಶ್ ಜಾರಕಿ ಹೊಳಿ ರೂ 7 ಕೋಟಿ ಅನುದಾನ ಮಂಜೂರು ಮಾಡಿ ಆದೇಶ ಹೊರಡಿಸಿದ್ದರು.

ಈ ಹಿನ್ನಲೆಯಲ್ಲಿ ಸುಳ್ಯ ಕಾಂಗ್ರೆಸ್ ಮುಖಂಡರ ತಂಡ ಆರೋಗ್ಯ ಸಚಿವರಾದ ಯು. ಟಿ. ಖಾದರ್ ಅವರನ್ನು ಭೇಟಿ ಮಾಡಿ ಅಭಿನಂದನೆ ಸಲ್ಲಿಸಲಾಯಿತು.

ಮುಂದಿನ ದಿನಗಳಲ್ಲಿ ದಿನೇಶ್ ಗುಂಡೂರಾವ್, ಸತೀಶ್ ಜಾರಕಿ ಹೊಳಿ ಯವರಿಗೆ ಅಭಿನಂದನೆ ಸಲ್ಲಿಸಲಾಗುವುದು ಎಂದು ಮುಖಂಡರು ತಿಳಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಗ್ಯಾರಂಟಿ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಭರತ್ ಮುಂಡೋಡಿ, ಕರ್ನಾಟಕ ಅರೆ ಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಸದಾನಂದ ಮಾವಜಿ, ಸೂಡ ಅಧ್ಯಕ್ಷ ಕೆ. ಎಂ. ಮುಸ್ತಫ, ಮುಖಂಡರಾದ ಪಿ. ಸಿ. ಜಯರಾಮ್, ಮೊದಲಾದವರು ಉಪಸ್ಥಿರಿದ್ದರು.


ಉದಯವಾಹಿನಿ ಚಿತ್ರ

# ಬಾಗಲಕೋಟೆ ರೈತರ ನೋಂದಣಿಗೆ ಡಿಸಿ ಸಂಗಪ್ಪ ಸೂಚನೆ

• **ಉದಯವಾಹಿನಿ ಬಾಗಲಕೋಟೆ:**


'ಪ್ರಸಕ್ತ ಮುಂಗಾರು ಹಂಗಾಮಿನಲ್ಲಿ ರೈತರಿಗೆ ಬೆಳೆ ನಷ್ಟದಿಂದ ಆರ್ಥಿಕ ಭದ್ರತೆ ಒದಗಿಸುವ ಉದ್ದೇಶದಿಂದ ಜಾರಿಯಲ್ಲಿರುವ ಕರ್ನಾಟಕ ರೈತ ಸುರಕ್ಷಾ ಪ್ರಧಾನಮಂತ್ರಿ ಫಸಲ್ ಬಿಮಾ ಯೋಜನೆಯಡಿ ಅರ್ಹ ರೈತರ ನೊಂದಣಿಗೆ ಕ್ರಮಕೈಗೊಳ್ಳಿ' ಎಂದು ಜಿಲ್ಲಾಧಿಕಾರಿ ಸಂಗಪ್ಪ, ಕೃಷಿ ಇಲಾಖೆ ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಮುಂಗಾರು ಹಂಗಾಮಿನ ಕರ್ನಾಟಕ ರೈತ ಸುರಕ್ಷಾ ಪಿಎಂ ಫಸಲ್ ಬಿಮಾ ಯೋಜನೆ ಅನುಷ್ಠಾನ ಕುರಿತು ಜರುಗಿದ ಜಿಲ್ಲಾ ಮಟ್ಟದ ಅನುಷ್ಠಾನ ಸಮಿತಿ ಸಭೆ ಅಧ್ಯಕ್ಷತೆವಹಿಸಿ ಮಾತನಾಡಿದ ಅವರು, 'ಈ ಯೋಜನೆ ಸಮರ್ಪಕ ಅನುಷ್ಠಾನಕ್ಕೆ ಕೃಷಿ, ತೋಟಗಾರಿಕೆ, ಕಂದಾಯ ಹಾಗೂ ಸಹಕಾರ ಇಲಾಖೆ ಅಧಿಕಾರಿಗಳು ಸಮನ್ವಯದಿಂದ ಕಾರ್ಯ ನಿರ್ವಹಿಸಬೇಕು. ಗ್ರಾಮೀಣ ಮಟ್ಟದಲ್ಲಿ ರೈತರಿಗೆ ಯೋಜನೆಯ ಕುರಿತು ಜಾಗೃತಿ ಮೂಡಿಸಬೇಕು' ಎಂದರು.

ಹವಾಮಾನ ವೈಪರೀತ್ಯ, ಅತಿವೃಷ್ಟಿ, ಅನಾವೃಷ್ಟಿ, ಪ್ರವಾಹ ಸೇರಿದಂತೆ ವಿವಿಧ ಪ್ರಕೃತಿ ವಿಕೋಪಗಳಿಂದ ಬೆಳೆ ಹಾನಿಗೊಳಗಾದ ಸಂದರ್ಭದಲ್ಲಿ ರೈತರಿಗೆ ಸೂಕ್ತ ಪರಿಹಾರ ದೊರೆಯಲು ಬೆಳೆ ಕಟಾವು ಪ್ರಯೋಗಗಳನ್ನು ಪಾರದರ್ಶಕ ಮತ್ತು ನಿಗದಿತ ಅವಧಿಯೊಳಗೆ ಪೂರ್ಣ ಗೊಳಿಸಬೇಕು' ಎಂದು ತಿಳಿಸಿದರು. 'ಜಿಲ್ಲೆಗೆ ಆಯ್ಕೆಯಾದ ಎಸ್.ಬಿ.ಐ ಜನರಲ್ ಇನ್ಸೂರೆನ್ಸ್ ಕಂಪನಿಯ ಪ್ರತಿನಿಧಿಗಳು ಪ್ರತಿ ತಾಲ್ಲೂಕು ಕಚೇರಿಗೆ ಸರಿಯಾಗಿ ಕೆಲಸ ಮಾಡುವ ಪ್ರತಿನಿಧಿ ನಿಯೋಜನೆ ಮಾಡಬೇಕು. ಈ ಯೋಜನೆ ಸಾಲ ಪಡೆದ ರೈತರಿಗೆ ಕಡ್ಡಾಯವಾಗಿದ್ದು, ಸಾಲ ಪಡೆಯದ ರೈತರಿಗೆ ಐಚ್ಛಿಕವಾಗಿದೆ' ಎಂದು ಹೇಳಿದರು. ಜಂಟಿ ಕೃಷಿ ನಿರ್ದೇಶಕ ಟಿ.ಎಸ್.ರುದ್ರೇಶಪ್ಪ ಮಾತನಾಡಿ, 'ಸೋಯಾ ಅವರೆ, ಜೋಳ (ನೀರಾವರಿ), ಉದ್ದು, ಹೆಸರು (ಮಳೆ ಆಶ್ರಿತ) ಬೆಳೆಗೆ ವಿಮಾ ಕಂತು ಪಾವತಿಗೆ ಜುಲೈ 15 ಕೊನೆ ದಿನ. ಅರಿಸಿಣ, ಸೂರ್ಯಕಾಂತಿ, ಸಜ್ಜೆ, ಮುಸುಕಿನ ಜೋಳ, ಜೋಳ, ತೊಗರಿ, ಶೇಂಗಾ, ಎಳ್ಳು (ಮ.ಆ), ಕೆಂಪು ಮೆಣಸಿನಕಾಯಿ, ಮುಸುಕಿನ ಜೋಳ, ಸಜ್ಜೆ, ತೊಗರಿ, ಶೇಂಗಾ (ನೀರಾವರಿ) ಬೆಳೆಗಳಿಗೆ ಜುಲೈ 31 ಹಾಗೂ ಸೂರ್ಯಕಾಂತಿ, ಈರುಳ್ಳಿ (ನೀರಾವರಿ), ಈರುಳ್ಳಿ, ಕೆಂಪು ಮೆಣಸಿನಕಾಯಿ (ಮ.ಆ) ಬೆಳೆಗಳಿಗೆ ವಿಮೆ ಕಂತು ಪಾವತಿಗೆ ಆಗಸ್ಟ್ 14 ಕೊನೆ ದಿನವಾಗಿದೆ' ಎಂದು ತಿಳಿಸಿದರು.

'ಬ್ಯಾಂಕ್, ಸಾಮಾನ್ಯ ಸೇವಾ ಕೇಂದ್ರಗಳು, ಕರ್ನಾಟಕ ಒನ್, ಗ್ರಾಮ ಒನ್ ಕೇಂದ್ರಗಳಲ್ಲಿ ಪಿಎಂ ಫಸಲ್ ಬಿಮಾ ಯೋಜನೆಯಡಿ ವಿವಿಧ ಬೆಳೆಗಳಿಗೆ ವಿಮಾ ಕಂತು ಪಾವತಿಸಿ ನೋಂದಾಯಿಸಿ ಕೊಳ್ಳಬಹುದಾಗಿದೆ.

ಬೆಳೆ ವಿಮೆ ನೋಂದಣಿಗೆ ರೈತರು ಫ್ರೂಟ್ಸ್ ತಂತ್ರಾಂಶದಲ್ಲಿ ಕಡ್ಡಾಯವಾಗಿ ನೋಂದಣಿ ಮಾಡಿಕೊಂಡಿರಬೇಕು' ಎಂದರು. 'ಬೆಳೆ ಸಾಲ ಪಡೆದ ರೈತರಿಗೆ ಈ ಯೋಜನೆ ಕಡ್ಡಾಯವಾಗಿದ್ದು, ಒಂದು ವೇಳೆ ಬೆಳೆ ಸಾಲ ಪಡೆದ ರೈತರು ಈ ಯೋಜನೆಯಡಿ ಭಾಗವಹಿಸದಿದ್ದಲ್ಲಿ ಈ ಕುರಿತು ಬ್ಯಾಂಕ್ ವ್ಯವಸ್ಥಾಪಕರಿಗೆ ಬೆಳೆ ನೋಂದಣಿ ಅಂತಿಮ ದಿನಾಂಕಕ್ಕಿಂತ ಏಳು ದಿನಗಳ ಮುಂಚಿತವಾಗಿ ಲಿಖಿತ ಮುಚ್ಚಳಿಕೆ ಪತ್ರ ನೀಡಿದಲ್ಲಿ ಅಂತಹ ರೈತರನ್ನು ಈ ಯೋಜನೆಯಿಂದ ಕೈಬಿಡಲಾಗುತ್ತದೆ' ಎಂದು ತಿಳಿಸಿದರು.


ಉದಯವಾಹಿನಿ ಚಿತ್ರ

## 3 ಕೋಟಿ ವೆಚ್ಚದ ಬೆಳ್ಳಿ ರಥ ಸಮರ್ಪಣೆ


ಉದಯವಾಹಿನಿ ಚಿತ್ರ

• **ಉದಯವಾಹಿನಿ ಬನಶಂಕರಿ**

ಬನಶಂಕರಿ ದೇವಿಯ ನೂತನ ರಥವನ್ನು ಭಕ್ತರು ಸಂಭ್ರಮದಿಂದ ಸಾಗಿಸಿದರು. ಬನಶಂಕರಿ ದೇವಿಗೆ ಭಕ್ತರ ಕಾಣಿಕೆಯಿಂದ 3 ಕೋಟಿ ವೆಚ್ಚದಲ್ಲಿ ನಿರ್ಮಿಸಿದ ನೂತನ ರಥಕ್ಕೆ ದೇವಾಲಯದ ಸುತ್ತ ಪ್ರದಕ್ಷಿಣೆ ಹಾಕುತ್ತ ಆದಿಶಕ್ತಿ ಬನಶಂಕರಿ ದೇವಿ ಶಾಕಾಂಬರಿ ಶಂಭೂಕೋ....ಎಂದು ಭಕ್ತರು ಶ್ರದ್ಧೆ ಭಕ್ತಿಯನ್ನು ಮೆರೆದರು. ಗರ್ಭಗುಡಿಯಿಂದ ಬನಶಂಕರಿದೇವಿ ಉತ್ಸವ ಮೂರ್ತಿಯನ್ನು ಪಲ್ಲಕ್ಕಿಯಲ್ಲಿ ವಾದ್ಯ ವೈಭವದೊಂದಿಗೆ ಮೆರವಣಿಗೆ ಯಲ್ಲಿ ತಂದು ಅರ್ಚಕರು ರಥದಲ್ಲಿ ಪ್ರತಿಷ್ಠಾಪನೆ ಮಾಡಿದರು. ಬೆಳ್ಳಿಯ ರಥಕ್ಕೆ ವಿವಿಧ ಪುಷ್ಪಮಾಲೆ, ಬಾಳೆಗಿಡ, ತಳಿರು ತೋರಣವನ್ನು ಕಟ್ಟಿ ಕಲಶಕ್ಕೆ ಹೊಂಬಾಳೆ, ತಾವರೆ, ಗುಲಾಬಿ ಹೂವಿನ ಅಲಂಕಾರ ಮಾಡಲಾಗಿತ್ತು. ರಥದಲ್ಲಿ ಬೆಳ್ಳಿಯ ಬನಶಂಕರಿ ದೇವಿ ಉತ್ಸವ ಮೂರ್ತಿಯನ್ನು ಹೂವಿನ ಅಲಂಕಾರ ಮಾಡಲಾಗಿತ್ತು. ರಥದಲ್ಲಿ ಬೆಳ್ಳಿಯ ಬನಶಂಕರಿ ದೇವಿ ಉತ್ಸವ ಮೂರ್ತಿಯನ್ನು ಪ್ರತಿಷ್ಠಾಪಿಸಲಾಗಿತ್ತು. ದೇವಾಲಯಕ್ಕೆ ಆಗಮಿಸಿದ ಭಕ್ತರು ಬನಶಂಕರಿದೇವಿ ದರ್ಶನವನ್ನು ಪಡೆದರು. ನಾಡಿನ ವಿವಿಧ ಜಿಲ್ಲೆ, ಮಹಾರಾಷ್ಟ್ರ ಮತ್ತು ಗೋವಾದಿಂದ ಭಕ್ತರು ಆಗಮಿಸಿದ್ದರು. ರಥದ ಮುಂದೆ ಮಹಿಳೆಯರು ಕೋಲಾಟವನ್ನು ಪ್ರದರ್ಶಿಸಿದರು. ಭಕ್ತರು ಪ್ರಸಾದವನ್ನು ಸ್ವೀಕರಿಸಿದರು.


## ಹುನಗುಂದ ಪ್ರವಾಹ ಸಂತ್ರಸ್ತರ ಸಮಸ್ಯೆ ಬಗೆಹರಿಸಲು ಸಿಎಂಗೆ ಮನವಿ

• **ಉದಯವಾಹಿನಿ ಹುನಗುಂದ:**

ತಾಲ್ಲೂಕಿನ ಹಿನ್ನೀರು ಮತ್ತು ಪ್ರವಾಹ ಬಾಧಿತ 10 ಗ್ರಾಮಗಳ ಸಂತ್ರಸ್ತರ ಸಮಸ್ಯೆಗಳ ಪರಿಹಾರಕ್ಕೆ ತಾಲ್ಲೂಕಿನ ಇದ್ದಲಗಿ ಗ್ರಾಮದ ಸಂತ್ರಸ್ತರು ಪುನರ್ ವಸತಿ ಮತ್ತು ಪುನರ್ ನಿರ್ಮಾಣ ಹಾಗೂ ಭೂ ಸ್ವಾಧೀನ ಇಲಾಖೆಯ ವ್ಯವಸ್ಥಾಪಕ ಗಜಾನನ ಬಾಲೆ ಅವರ ಮೂಲಕ ಮುಖ್ಯಮಂತ್ರಿ ಡಿ. ಕೆ. ಶಿವಕುಮಾರ ಅವರಿಗೆ ಮನವಿ ಪತ್ರ ಸಲ್ಲಿಸಿದ್ದಾರೆ.

ತಾಲ್ಲೂಕಿನ ಬಿಸನಾಳ ಕೊಪ್ಪ, ಇದ್ದಲಗಿ, ಕಮದತ್ತ, ಅಡಿಹಾಳ, ಅನಪಕಟ್ಟಿ, ಕೆಸರಪಂಟಿ, ವರಗೋಡದಿನ್ನಿ, ಕೆಂಗಲ್ ಕಡಪಟ್ಟಿ, ಖಜಗಲ್ ಮತ್ತು ಎಮ್ಮೆಟ್ಟಿ ಗ್ರಾಮಗಳು 2007ರಿಂದ ಹಿನ್ನೀರು ಹಾಗೂ ಪ್ರವಾಹ ಬಾಧೆಯಿಂದ ನಿರ್ವಸಿತರಾಗಿ 19 ವರ್ಷಗಳಿಂದ ಅಭದ್ರತೆ ಮತ್ತು ಅತಂತ್ರ ಸ್ಥಿತಿಯಲ್ಲಿ ವಾಸಿಸುತ್ತಿದ್ದೇವೆ.

ರಾಜ್ಯದ ಎಲ್ಲ ಯೋಜನಾ ಸಂತ್ರಸ್ತರಲ್ಲಿ ದೀರ್ಘಕಾಲದ ಮತ್ತು ಅತೀ ಹೆಚ್ಚಿನ ಬವಣೆ ಅನುಭವಿಸಿದವರಾಗಿದ್ದೇವೆ. ನಮ್ಮದಲ್ಲದ ತಪ್ಪಿಗೆ ಜೀವಾವಧಿ ಶಿಕ್ಷೆಗೂ ಅಧಿಕವಾದ ಘೋರ ಶಿಕ್ಷೆ ಅನುಭವಿಸಿದ್ದೇವೆ. ನಿವೇಶನದ ಹಕ್ಕುಪತ್ರಗಳನ್ನು ಕೆಲವರಿಗೆ ಮಾತ್ರ ನೀಡಲಾಗಿದ್ದು, ಇನ್ನೂ ಹಲವರಿಗೆ ಹಕ್ಕುಪತ್ರ ನೀಡುವುದು ಬಾಕಿ ಇದೆ. ಮನೆ ಕಟ್ಟಿಸಿಕೊಂಡು ವಾಸಿಸಲು ಎಲ್ಲ ಪುನರ್ವಸತಿ ಕೇಂದ್ರಗಳಲ್ಲಿ ವಿದ್ಯುತ್ ಮತ್ತು ನೀರು ಸರಬರಾಜು ವ್ಯವಸ್ಥೆ ಕಲ್ಪಿಸಲಾಗಿಲ್ಲ ಎಂದರು.


ಉದಯವಾಹಿನಿ ಚಿತ್ರ

ಕಳೆದ 15 ವರ್ಷಗಳಲ್ಲಿ ಕುಟುಂಬಗಳು ಬೆಳೆದಿವೆ. ಆಗಿನ ಮಕ್ಕಳು ಈಗ ಪ್ರೌಢಾವಸ್ಥೆಗೆ ಬಂದಿದ್ದಾರೆ. ದವಸ-ಧಾನ್ಯ ಕೃಷಿ ಸಲಕರಣೆ, ಹೊಟ್ಟು ಮೇವು ಸೇರಿದಂತೆ ಇತರೆ ಕಾರ್ಯಗಳಿಗೆ ಈ ಒಂದು ಗುಂಟೆ ನಿವೇಶನಗಳು ಸಾಲದಾಗುತ್ತವೆ. ಅರ್ಹ ಸಂತ್ರಸ್ತ ಕುಟುಂಬಕ್ಕೆ ಒಂದು ಗುಂಟೆಯ ಬದಲಾಗಿ ನಾಲ್ಕು ಗುಂಟೆ ನಿವೇಶನ ಹಂಚಿಕೆ ಮಾಡುವ ನಿರ್ಧಾರ ಮತ್ತು ಸೂಕ್ತ ಸರ್ಕಾರಿ ಆದೇಶ ಹೊರಡಿಸಿ. ತಗಡಿನ ಶೆಡ್ಡುಗಳಲ್ಲಿ ಮತ್ತು ಹಾನಿಗೊಂಡ ಅಪಾಯಕಾರಿ ಹಳೆಯ ಮನೆಗಳಲ್ಲಿ ವಾಸಿಸುವ ಶಿಕ್ಷೆಯಿಂದ ನಮಗೆ ಶೀಘ್ರ ಮುಕ್ತಿ ದೊರಕಿಸಿಕೊಡಬೇಕು. ಈ ಎಲ್ಲ ಸಮಸ್ಯೆಗಳ ಶಾಶ್ವತ ಪರಿಹಾರಕ್ಕೆ ಕ್ರಮ ಕೈಗೊಳ್ಳಲು ಮನವಿ ಪತ್ರದಲ್ಲಿ ಸಂತ್ರಸ್ತರು ವಿನಂತಿಸಿಕೊಂಡಿದ್ದಾರೆ.

## 200 ಮಂದಿ ಪಾದಯಾತ್ರೆಯಲ್ಲಿ ಭಾಗಿ

• **ಉದಯವಾಹಿನಿ ಗದಗ:**

'ಬಿಡದಿ ಟೌನ್‌ಶಿಪ್ ನಿರ್ಮಾಣ ವಿರೋಧಿಸಿ ಜೂನ್ 21ರಂದು ಅಲ್ಲಿ ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ನೇತೃತ್ವದಲ್ಲಿ ಹಮ್ಮಿಕೊಂಡಿರುವ ಪಾದಯಾತ್ರೆಯಲ್ಲಿ ಜಿಲ್ಲೆಯ 200 ಮಂದಿ ಭಾಗವಹಿಸಲಿದ್ದಾರೆ' ಎಂದು ಜೆಡಿಎಸ್ ಪಕ್ಷದ ರಾಜ್ಯ ವಕ್ತಾರ ವೆಂಕನಗೌಡ ಆರ್. ಗೋವಿಂದಗೌಡ್ರ ತಿಳಿಸಿದರು.

ನಗರದಲ್ಲಿ' ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ರೈತರಿಂದ ಭೂಮಿ ಖರೀದಿಸಿ, ಕಾರ್ಪೊರೇಟ್ ಸಂಸ್ಥೆಗಳಿಗೆ ಮಾರಾಟ ಮಾಡುವ ಮೂಲಕ ಸರ್ಕಾರ ಲಾಭ ಗಳಿಸಲಿದೆ ಎನ್ನಲಾಗುತ್ತಿದೆ. ಇದು ರಿಯಲ್ ಎಸ್ಟೇಟ್ ವ್ಯಾಪಾರವೇ ಹೊರತು, ಸರ್ಕಾರ ಮಾಡ ಬೇಕಾದ ಕೆಲಸವಲ್ಲ' ಎಂದು ಟೀಕಿಸಿದರು.

'ಕೇಂದ್ರ ಸಚಿವ ಕುಮಾರಸ್ವಾಮಿ ಅವರು ಈ ಯೋಜನೆ ರೂಪಿಸಿದ್ದಾಗ, ಅದು ಖಾಸಗಿ-ಸಾರ್ವಜನಿಕ ಸಹಭಾಗಿತ್ವ (ಪಿಪಿಪಿ) ಮಾದರಿ ಯಲ್ಲಿತ್ತು. ಈಗ ಲಾಭದ ಉದ್ದೇಶಕ್ಕಾಗಿ ಯೋಜನೆ ರೂಪಿಸಲಾಗಿದೆ. ಭೂಮಿ ಖರೀದಿಸಿದವರು, ಹೆಚ್ಚಿನ ದರಕ್ಕೆ ಮಾರಾಟ ಮಾಡುತ್ತಾರೆ. ಸಂಪೂರ್ಣ ವಾಣಿಜ್ಯ ಉದ್ದೇಶ ಒಳಗೊಂಡ ಈ ಯೋಜನೆ ವಿಚಾರದಲ್ಲಿ ಕುಮಾರಸ್ವಾಮಿ ಅವರ ಹೆಸರು ಕೆಡಿಸಲು ಯತ್ನಿಸಲಾ ಗುತ್ತಿದೆ' ಎಂದರು.

'ಡಿ.ಕೆ. ಶಿವಕುಮಾರ್ ಮುಖ್ಯಮಂತ್ರಿ ಆದಾಗಿನಿಂದ ರಾಜ್ಯದ ಆಡಳಿತ ಸಂಪೂರ್ಣ ಕುಸಿದಿದೆ. ಶಾಸಕರು, ಸಚಿವ ಸ್ಥಾನಕ್ಕಾಗಿ ಆಗ್ರಹಿಸುತ್ತಿದ್ದರೆ, ಸಚಿವರಾದವರು ತಮಗೆ ಬೇಕಾದ ಸ್ಥಾನಕ್ಕಾಗಿ ಒತ್ತಾಯಿಸುತ್ತಿದ್ದಾರೆ.

ಇದರಿಂದಾಗಿ, ಅಧಿಕಾರಿಗಳು ಮನಸೋಇಚ್ಛೆ ವರ್ತಿಸುತ್ತಿದ್ದಾರೆ. ರೈತರಿಗೆ ಸಮರ್ಪಕವಾಗಿ ಬಿತ್ತನೆ ಬೀಜ, ರಸಗೊಬ್ಬರ ಸಿಗುತ್ತಿಲ್ಲ. ಲಾಬಿ ಮಾಡುತ್ತಿರುವ ಶಾಸಕರನ್ನು ಕ್ಷೇತ್ರಕ್ಕೆ ಕಳುಹಿಸಿ, ಜನಪರ ಕೆಲಸ ಮಾಡಲು ಮುಖ್ಯಮಂತ್ರಿ ಸೂಚಿಸಬೇಕು' ಎಂದು ಆಗ್ರಹಿಸಿದರು.

ಪಕ್ಷದ ಮುಖಂಡರಾದ ಬಸವರಾಜ ಅಪ್ಪಣ್ಣ, ಪ್ರಫುಲ್ ಪುಣೇಕರ್, ಜಿ.ಕೆ. ಕೊಳ್ಳಿಮಠ ಇದ್ದರು.

## ಮಿನಿ ನ್ಯೂಸ್

### ಶಾಂತಿ ರೀತಿಯಿಂದ ಮೊಹರಂ ಆಚರಿಸಿ

• **ಉದಯವಾಹಿನಿ, ಲಕ್ಷ್ಮೇಶ್ವರ:**

ಹಿಂದೂ ಮುಸ್ಲಿಂ ಬಾಂಧವರ ಭಾವೈಕ್ಯ ಸಾರುವ ಮೊಹರಂ ಹಬ್ಬವನ್ನು ಎಲ್ಲರೂ ಶಾಂತಿ ರೀತಿಯಿಂದ ಆಚರಣೆ ಮಾಡಬೇಕು ಎಂದು ಪಿಎಸ್‌ಐ ನಾಗರಾಜ ಗಡದ ಹೇಳಿದರು. ಮೊಹರಂ ಹಬ್ಬದ ಹಿನ್ನೆಲೆಯಲ್ಲಿ ಮಂಗಳವಾರ ಪೊಲೀಸ್ ಠಾಣೆಯಲ್ಲಿ ನಡೆದ ಶಾಂತಿ ಸಭೆ ಉದ್ದೇಶಿಸಿ ಮಾತನಾಡಿದರು. 'ಮಾನವ ಜಾತಿ ಎಂಬುದು ಒಂದೇ. ಹಿಂದೂ ಆಗಲಿ, ಮುಸ್ಲಿಂ ಆಗಲಿ ಎಲ್ಲರ ಮೈಯಲ್ಲಿ ಹರಿಯುತ್ತಿರುವುದು ಒಂದೇ ರಕ್ತ. ಅದಕ್ಕಾಗಿಯೇ ಮುಕ್ತಿಮಂದಿರ ಧರ್ಮ ಕ್ಷೇತ್ರದ ವೀರಗಂಗಾಧರ ಶಿವಾಚಾರ್ಯ ಸ್ವಾಮೀಜಿ ಮಾನವ ಧರ್ಮಕ್ಕೆ ಜಯವಾಗಲಿ. ಧರ್ಮದಿಂದಲೇ ವಿಶ್ವಕ್ಕೆ ಶಾಂತಿ ಎಂಬ ಸಂದೇಶ ಸಾರಿದ್ದಾರೆ. ಅಂತ ಮಹಾತ್ಮರು ನೀಡಿದ ಸಂದೇಶವನ್ನು ನಾವೆಲ್ಲರೂ ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು' ಎಂದು ಹೇಳಿದರು.

'ಮೊಹರಂ ಹಬ್ಬದಲ್ಲಿ ದೇವರನ್ನು ಪ್ರತಿಷ್ಠಾಪಿಸುವ ಪ್ರತಿಗಲ್ಲಿಯ ಮುಖಂಡರು ಹೆಚ್ಚಿನ ಜಾಗೃತಿಯನ್ನು ವಹಿಸಬೇಕು. ಯುವಕರನ್ನು ಗುಂಪು ಗುಂಪಾಗಿ ಸೇರಲು ಬಿಡಬಾರದು. ಯುವಕರ ಕಡೆ ಹೆಚ್ಚು ಗಮನ ಕೊಡಬೇಕು. ಯಾವುದೇ ಅಹಿತಕರ ಘಟನೆಗಳು ನಡೆದಂತೆ ನೋಡಿಕೊಳ್ಳಬೇಕು' ಎಂದು ತಿಳಿಸಿದರು. ಈ ಸಮಯದಲ್ಲಿ ಹಿಂದೂ ಮುಸ್ಲಿಂ ಸಮಾಜದ ಹಿರಿಯರು ಮುಖಂಡರು ಇದ್ದರು.

### ಕೆಂಪು ಹಲಸು ಬಂದಿವೆ ಮೂರು ದಿನದ ಮೇಳಕ್ಕೆ ಬನ್ನಿ

• **ಉದಯವಾಹಿನಿ, ಹುಬ್ಬಳ್ಳಿ:**


ಉದಯವಾಹಿನಿ ಚಿತ್ರ

ಈಗ ಮಾವು, ಹಲಸಿನ ಹಣ್ಣಿನ ಸಮಯ. ಜನರಲ್ಲಿ ಹಣ್ಣುಗಳ ಕುರಿತು ಜಾಗೃತಿ ಮೂಡಿಸುತ್ತಿರುವ ಸಹಜ ಸಮೃದ್ಧ ಸಂಸ್ಥೆಯಿಂದ ಹುಬ್ಬಳ್ಳಿಯಲ್ಲಿ ಹಲಸು ಮೇಳ ಆಯೋಜನೆ ಮೈಸೂರಿನಲ್ಲಿ ಎರಡು ದಿನಗಳ ದೇಸಿ ಬೀಜ ಮೇಳ, ಹಣ್ಣಿನ ಘಮಲು ಪಸರಿಸಿದ ಸಹಜ ಸಮೃದ್ಧ ಸಂಸ್ಥೆಯು ಹುಬ್ಬಳ್ಳಿಯಲ್ಲಿ ಮೂರು ದಿನದ ಹಲಸಿನ ಮೇಳವನ್ನು ಹಮ್ಮಿಕೊಂಡಿದೆ. ಜೂನ್ 19ರಿಂದ ಮೂರು ದಿನ ಹುಬ್ಬಳ್ಳಿಯ ಗೋಕುಲ್ ರಸ್ತೆಯಲ್ಲಿರುವ ಅರ್ಬನ್ ಓಯಸಿಸ್ ಮಾಲ್‌ನಲ್ಲಿ ಹಲಸಿನ ಮೇಳವನ್ನು ರೂಪಿಸಿದ್ದು, ನಾನಾ ಭಾಗಗಳ ಬೆಳೆಗಾರರು, ಮಾರಾಟಗಾರರು ಬಗೆಬಗೆಯ ಹಲಸಿನ ಹಣ್ಣನ್ನು ಮಾರಾಟ ಮಾಡುವರು.

ಇದೇ ವೇಳೆ ಹಲಸಿನ ಅಡುಗೆ ಸ್ಪರ್ಧೆ, ಮಕ್ಕಳಿಗೆ ಹಲಸಿನ ಚಿತ್ರ ಬಿಡಿಸುವ ಸ್ಪರ್ಧೆಯನ್ನು ಮೇಳದ ಭಾಗವಾಗಿ ಹಮ್ಮಿಕೊಳ್ಳಲಾಗಿದೆ. ಹಲಸಿನ ಮೇಳಕ್ಕೆ ಸಿದ್ದು,ಡಂಗ್ ಸೂರ್ಯ, ಸಿಂಧೂರ, ರಾಮಚಂದ್ರ ಕೆಂಪು ತಳಿಗಳ 100 ಗಿಡ ತರಿಸಲಾಗಿದೆ. ಹಣ್ಣುಗಳ ಜತೆಗೆ ಹಲಸಿನ ಸಸಿಗಳನ್ನೂ ಖರೀದಿಸಲು ಅವಕಾಶವಿದೆ. ಇದಲ್ಲದೇ ಮಾವಿನ ಹಣ್ಣನ್ನು ಕೂಡ ಈ ಮೇಳದಲ್ಲಿ ಮಾರಾಟ ಮಾಡಲಾಗುತ್ತದೆ.

ಕೋವಿಡ್ ಕಾಲಕ್ಕೆ ನೆಟ್ಟ ಹಲಸಿನ ಗಿಡಗಳು ಫಲ ಕೊಡಲು ಶುರುವಾಗಿವೆ. ಮುಟ್ಟಿದ್ದೆಲ್ಲಾ ಚಿನ್ನ ಎನ್ನುವಂತೆ, ಹೊಸ ಗಿಡದ ಫಲ ಕೊಯ್ದಾಗಲೂ ನಮ್ಮ ಮುಖ ಕೆಂಪಾಗಿ ಅರಳುತ್ತದೆ ಇವತ್ತು ಸಿದ್ದು ಕೆಂಪಲಸಿನ ಹಣ್ಣು ಕತ್ತರಿಸಿದೆವು. ಇದರ ರುಚಿ ಹೇಳಲಾಗದು. ಕೆಂಪಲಸು ಕೊಡಿ ಎಂದು ಅವರಿವರ ಅಂಗಲಾಚುತ್ತಿದ್ದೆವು. ಈಗ ನಮ್ಮದೇ ತೋಟದ ಕೆಂಪಲಸು ಸವಿಯುವ ಸಂಭ್ರಮ ಎಂದು ಬೆಳೆಗಾರರು ಹೇಳುತ್ತಾರೆ.

ನಾಲ್ಕು ವರ್ಷಗಳಿಂದ ಉತ್ತರ ಕರ್ನಾಟಕದಲ್ಲೂ ಹಲಸಿನ ಹುಚ್ಚು ಹಿಡಿಸುವ ಪ್ರಯತ್ನ ಮಾಡುತ್ತಿದ್ದೇವೆ.

### ಆರ್.ಎಸ್.ಎಸ್ ಮಾತ್ರ ಉತ್ತರಿಸಲಿ

• **ಉದಯವಾಹಿನಿ ಕಲಬುರಗಿ**

ಗೃಹ ಸಚಿವ ಪ್ರಿಯಾಂಕ ಖರ್ಗೆ ಅವರು, ಆರ್.ಎಸ್.ಎಸ್. ಕುರಿತಾದ ನೇರ ಪ್ರಶ್ನೆಗಳಿಗೆ ಸ್ಪಷ್ಟ ಉತ್ತರ ನೀಡುವಂತೆ ಕಲಬುರಗಿ ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷರು ಹಾಗೂ ವಿಧಾನ ಪರಿಷತ್ ಸದಸ್ಯರಾದ ಜಗದೇವ ಗುತ್ತೇದಾರ ಕಾಳಗಿ ರವರು ಆಗ್ರಹಿಸಿದ್ದಾರೆ .

ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ಗೃಹ ಸಚಿವರಾದ ಪ್ರಿಯಾಂಕ ಖರ್ಗೆಯವರು ಎತ್ತಿರುವ ಆರ್.ಎಸ್. ಎಸ್ ಕುರಿತಾದ ಪ್ರಶ್ನೆಗಳು ಪ್ರಸ್ತುತವಾಗಿದ್ದು, ಅದು ನೋಂದಣಿ ಮಾಡಿಸದೆ ಇರುವುದು ಮತ್ತು ಸಂಘದ ಆರ್ಥಿಕ ವ್ಯವಹಾರ ಹಾಗೂ ಚಟುವಟಿಕೆ ಯಾವ ಮಾನದಂಡದ ಅಡಿಯಲ್ಲಿ ನಡೆಯುತ್ತಿದೆ? ಎಂಬ ಗೃಹ ಸಚಿವ ಪ್ರಶ್ನೆಗೆ ಆರ್.ಎಸ್.ಎಸ್ ಉತ್ತರಿಸಬೇಕು ಇದರಿಂದ ಸಂಘ ಪಾರದರ್ಶಕತೆ ಪ್ರದರ್ಶಿಸಬೇಕು ಎಂದು ಒತ್ತಾಯಿಸಿದ್ದಾರೆ.

ಸಂಘ ನೋಂದಣಿಯಾಗದಿರುವ ಬಗ್ಗೆ ಸಚಿವರು ಪ್ರಶ್ನಿಸಿದರೆ ಅದಕ್ಕೆ ಆರ್.ಎಸ್.ಎಸ್. ಮಾತ್ರ ಉತ್ತರಿಸಬೇಕು ಅದು ಬಿಟ್ಟು ಸಂಘ ಪರಿವಾರದ ಹಿಂಬಾಲಕರು ಹಾಗೂ ಬಿಜೆಪಿ ನಾಯಕರು ಸಚಿವರ ವಿರುದ್ಧ ಸೋಷಿಯಲ್ ಮಿಡಿಯಾದಲ್ಲಿ ಅಸಭ್ಯ ಭಾಷೆಗಳಿಂದ ನಿಂದಿಸುತ್ತಿರುವುದು ಖಂಡನೀಯ.

ಪ್ರಜಾತಂತ್ರ ವ್ಯವಸ್ಥೆಯಲ್ಲಿ ಸಂವಿಧಾನದ ಅಡಿಯಲ್ಲಿ ಸಂಘಗಳು ನೋಂದಣಿಯಾಗಬೇಕು ಎಂದು ಆಗ್ರಹಿಸುವುದು ಸರಿಯಾದ ಕ್ರಮ. ಆದರೆ ಸಚಿವರ ವಿರುದ್ಧ ಸಂಘ ಪರಿವಾರದ ನಾಯಕರ ನಿಂದನೆಗಳು ಕಾನೂನು ಬಾಹಿರವಾಗಿದ್ದು ಪ್ರಶ್ನಿಸುವ ಹಕ್ಕನ್ನು ದಮನಿಸುವ ಪ್ರಕ್ರಿಯೆಯಾಗಿದೆ ಎಂದರು.

# ಮಳೆಗಾಲದಲ್ಲೂ ನೆತ್ತಿ ಸುಡುವ ರಣ ಬಿಸಿಲು: ಕೈ ಕೊಟ್ಟವರುಣ, ಆತಂಕದಲ್ಲಿ ಬೆಳಗಾವಿಯ ಅನ್ನದಾತರು

ಬೆಳೆಗೆ ಮಳೆಯನ್ನೇ ಅವಲಂಬಿಸಿರುವ ರೈತರು ಕೈ ಕೈ ಹಿಸುಕಿಕೊಳ್ಳುತ್ತಿದ್ದಾರೆ. ಆಗಸದೆಡೆ ಮುಖ ಮಾಡಿ ತಮ್ಮ ಜಮೀನಿನಲ್ಲಿ ಕುಳಿತುಕೊಂಡಿದ್ದಾರೆ.

• **ಉದಯವಾಹಿನಿ ಬೆಳಗಾವಿ:**

ಇಷ್ಟೊತ್ತಿಗೆ ಧೋ, ಧೋ ಅಂತಾ ಮಳೆ ಸುರಿಯಬೇಕಿತ್ತು. ರೈತರ ಮೊಗದಲ್ಲಿ ಮಂದಹಾಸ ಮೂಡಬೇಕಿತ್ತು. ಆದರೆ, ಜೂನ್ 18 ಬಂದರೂ ಮುಂಗಾರು ಮಳೆಯ ಸುಳಿವೇ ಇಲ್ಲ. ರಣ ರಣ ಬಿಸಿಲು ಸುಡುತ್ತಿದ್ದು, ಬೇಸಿಗೆ ಕಾಲದ ಅನುಭವ ಆಗುತ್ತಿದೆ. ಹೀಗಾಗಿ, ಗಡಿ ಜಿಲ್ಲೆ ಬೆಳಗಾವಿ ರೈತರು ಆತಂಕಗೊಂಡಿದ್ದು, ಮಳೆಯ ದಾರಿ ಕಾಯುತ್ತಾ, ಆಕಾಶದ ಕಡೆ ಮುಖ ಮಾಡಿ ಕುಳಿತಿದ್ದಾರೆ.

ಈ ಬಾರಿ ಮುಂಗಾರು ಮಳೆ ವಿಳಂಬ ಆಗಿರುವುದು ಜಿಲ್ಲೆಯ ರೈತರನ್ನು ಚಿಂತೆಗೀಡು ಮಾಡಿದೆ. ಚೆನ್ನಾಗಿ ಮಳೆ ಆಗುತ್ತದೆ ಎಂಬ ನಿರೀಕ್ಷೆಯಲ್ಲಿ ಬಿತ್ತನೆ ಮಾಡಿದ್ದ ರೈತಾಪಿ ವರ್ಗಕ್ಕೆ ಈಗ ಬೆಳೆ ಒಣಗುವ ಭೀತಿ ಕಾಡುತ್ತಿದೆ. ಹುಯ್ಯೋ, ಹುಯ್ಯೋ ಮಳೆರಾಯ, ನಮ್ಮ ಬೆಳೆಯ ಕಾಪಾಡಯ್ಯ ಅಂತಾ ಪ್ರಾರ್ಥಿಸುತ್ತಿದ್ದಾರೆ.

ಕೈ ಕೊಟ್ಟ ವರುಣ, ಆತಂಕದಲ್ಲಿ ಬೆಳಗಾವಿಯ ಅನ್ನದಾತರು ವರುಣ, ಅಲ್ಲಯ್ಯ ಜನರೆಲ್ಲಾ 'ಮಳೆ ಬರುತ್ತೆ, ಮಳೆ ಬರುತ್ತೆ ಅಂತಾ ಆಕಾಶ ನೋಡುತ್ತಿದ್ದರೆ, ನೀನು ಮಾತ್ರ ಸುಖವಾಗಿ ಮಲಗಿ ಗೊರಕೆ ಹೊಡೆಯುತ್ತಿರ್ತಿ ಅಲ್ಲವೇ ' ಅಂತಾ 'ದೇವರ ಗೆದ್ದ ಮಾನವ' ಸಿನಿಮಾದಲ್ಲಿ ವರನಟ ಡಾ.ರಾಜಕುಮಾರ್ ಅವರು ಮಳೆ ಕುರಿತು ಆಡಿದ ಮಾತುಗಳು ಈ ಸಂದರ್ಭದಲ್ಲಿ ಹೆಚ್ಚು ಸೂಕ್ತವಾಗಿದೆ.

ಕಷ್ಟಪಟ್ಟು ಬಿತ್ತನೆ ಮಾಡಿದ ಬೆಳೆಗಳನ್ನು ಉಳಿಸಿಕೊಳ್ಳಲು ರೈತರು ಹರ ಸಾಹಸಪಡುತ್ತಿದ್ದಾರೆ. ಕೊಳವೆಬಾವಿ, ಬಾವಿ ಸೇರಿ ನೀರಾವರಿ ವ್ಯವಸ್ಥೆ ಇದ್ದವರು ನೀರು ಹಾಯಿಸಿ, ಬೆಳೆ ಬದುಕಿಸಿಕೊಳ್ಳುತ್ತಿದ್ದರೆ, ಮಳೆಯನ್ನೇ ನೆಚ್ಚಿಕೊಂಡವರು ಕೈ ಕೈ ಹಿಸುಕಿಕೊಳ್ಳುತ್ತಿದ್ದಾರೆ. ಮುಗಿಲ ಕಡೆ ಮುಖ ಮಾಡಿ ತಮ್ಮ ಜಮೀನಿನಲ್ಲಿ ಕುಳಿತುಕೊಂಡಿದ್ದಾರೆ. ಇನ್ನೂ ಕೆಲ ರೈತರು ಟ್ಯಾಂಕರ್, ಕೊಡಗಳ ಮೂಲಕ ಬಾಯಾರಿ, ಒಣಗುವ ಸ್ಥಿತಿಯಲ್ಲಿರುವ ಬೆಳೆಗಳಿಗೆ ನೀರು ಉಣಿಸುತ್ತಿದ್ದಾರೆ.

ಮೇ ತಿಂಗಳ ಕೊನೆ ಮತ್ತು ಜೂನ್ ತಿಂಗಳ ಮೊದಲ ವಾರದಲ್ಲಿ ಬಿದ್ದ ಮಳೆಯಿಂದ ಒಂದಷ್ಟು ಬಿತ್ತನೆ ಆಗಿದೆ. ಆದರೆ, ಜೂನ್ ಎರಡನೇ ವಾರದಲ್ಲಿ ತೇವಾಂಶ ಗಟ್ಟಿಗೊಳಿಸುವಷ್ಟು ದೊಡ್ಡ ಮಳೆ ಸುರಿದಿಲ್ಲ. ಹಾಗಾಗಿ ಬಹಳಷ್ಟು ಕಡೆ ಬಿತ್ತನೆ ಬಾಕಿಯಿದ್ದು, ಈವರೆಗೆ ಶೇ.51ರಷ್ಟು ಮಾತ್ರ ಬಿತ್ತನೆಯಾಗಿದೆ. ಜಿಲ್ಲೆಯಲ್ಲಿ 7,52,312 ಹೆಕ್ಟೇರ್ ಪ್ರದೇಶ ಬಿತ್ತನೆ ಗುರಿ ಇದ್ದು ಜೂ.15ರ ವರೆಗೆ 3,81,200 ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆಯಾಗಿದೆ.



ಉದಯವಾಹಿನಿ ಚಿತ್ರ

ಈಗಾಗಲೇ ಬಿತ್ತನೆ ಮಾಡಿದ ಬೆಳೆಗಳಿಗೆ ಇನ್ನೂ ಒಂದು ವಾರ ಏನೂ ಆಗುವುದಿಲ್ಲ. ಸೋಯಾಬಿನ್ ಬೆಳೆಗೆ ರೋಗ ಮತ್ತು ಕೀಟಭಾದೆ ಕಾಣಿಸಿದ್ದು, ನಾನು ಮತ್ತು ಟಿಡಿಎಸ್ ಸರ್ವೇಕ್ಷಣಾ ತಂಡ ಸ್ಥಳಕ್ಕೆ ಭೇಟಿ ನೀಡಿ ಕೆಲವೊಂದು ಔಷಧ ಸಿಂಪಡಿಸುವಂತೆ ಮಾಹಿತಿ ನೀಡಿದ್ದೇವೆ. ಜೂನ್ 22ರ ನಂತರ ಮಳೆ ಆಗುವ ಸಂಭವವಿದೆ. ಜುಲೈ 15ರವರೆಗೂ ಬಿತ್ತನೆ ಮಾಡಬಹುದು ಎಂದರು.

ಕೃಷಿ ಇಲಾಖೆ ಜಂಟಿ ನಿರ್ದೇಶಕ ಡಾ.ಹೆಚ್.ಡಿ.ಕೋಳೇಕರ್

## ಕಂಗಾಲಾದ ರೈತ

ಮತ್ತೋರ್ವ ರೈತ ಮಾರುತಿ ಪಾಟೀಲ ಮಾತನಾಡಿ, ಪೂರ್ವ ಮುಂಗಾರು ಮಳೆ ಚೆನ್ನಾಗಿ ಆಗಿತ್ತು. ಹೀಗಾಗಿ, ಬಾಸುಮತಿ ಭತ್ತ ಬಿತ್ತಿದ್ದೇನೆ. ಈಗ ನೋಡಿದರೆ ಮುಂಗಾರು ಮಳೆ ಕೈ ಕೊಟ್ಟಿದ್ದರಿಂದ ಬೆಳೆ ಒಣಗುತ್ತಿದೆ. ಈಗ ಮಳೆ ಆದರೆ ಮಾತ್ರ ನಾವು ಬದುಕುತ್ತೇವೆ. ಇಲ್ಲದಿದ್ದರೆ ನಮ್ಮ ಪರಿಸ್ಥಿತಿ ಗಂಭೀರ ಆಗಲಿದೆ. ಹೊಲಕ್ಕೆ ಬಂದು ಮಳೆಗಾಗಿ ಆಕಾಶದ ಕಡೆ ಮುಖ ಮಾಡಿ ಕುಳಿತುಕೊಂಡಿದ್ದೇವೆ ಎಂದು ಬೇಸರ ಹೊರಹಾಕಿದರು.

**ಟ್ಯಾಂಕರ್ ಮೂಲಕ ಭತ್ತದ ಸಸಿಗೆ ನೀರು:** ಬೆಳಗಾವಿ ತಾಲ್ಲೂಕಿನ ಬಾಚಿ ಗ್ರಾಮದ ರೈತ ಯಲ್ಲಪ್ಪ ಸಾವಂತ ಎಂಬವರು, ಮಳೆ ಆಗದ ಹಿನ್ನೆಲೆಯಲ್ಲಿ 1 ಟ್ಯಾಂಕರ್‌ಗೆ 500 ರೂಪಾಯಿಯಂತೆ 3 ಟ್ಯಾಂಕರ್ ನೀರು ತರಿಸಿ ಭತ್ತದ ಸಸಿಗೆ ನೀರು ಉಣಿಸಿದ್ದಾರೆ. ಮುಂದೆ ಮಳೆ ಆದರೆ, ಭತ್ತದ ಸಸಿ ನಾಟಿ ಮಾಡಲು ಸಿದ್ಧತೆ ನಡೆಸಿದ್ದಾರೆ. ಇದೇ ವರ್ಷ ನಮಗೆ ಈ ರೀತಿ ಸಮಸ್ಯೆ ಆಗಿದೆ. ಟ್ಯಾಂಕರ್‌ನಿಂದ ನೀರು ತರಿಸಿದ್ದು ಇದೇ ಮೊದಲ ಬಾರಿ. ಇಂತಹ ಪರಿಸ್ಥಿತಿ ನಮಗೆ ಎಂದೂ ಬಂದಿರಲಿಲ್ಲ. ಆದರೂ ಏನಾದರೂ ಮಾಡಬೇಕಲ್ಲವೇ ಎಂದು ಸಾವಂತ ನೋವು ತೋಡಿಕೊಂಡರು.

ರೈತ ಯಲ್ಲಪ್ಪ

